लोकहितार्थ सत्यनिष्ठा
Dedicated to Truth in Public Interest

सत्यमेव जयते

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

ನೇರ ನಗದು ವರ್ಗಾವಣೆ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

AADHAAR

ಕರ್ನಾಟಕ ಸರ್ಕಾರ

2022ನೇ ವರ್ಷದ ವರದಿ ಸಂಖ್ಯೆ–2

ಭಾರತದ ಲೆಕ್ಕನಿಯಂತ್ರಕರು
ಮತ್ತು ಮಹಾಲೆಕ್ಕಪರಿಶೋಧಕರ ವರದಿ

ನೇರ ನಗದು ವರ್ಗಾವಣೆ ಮೇಲಿನ
ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

ಕರ್ನಾಟಕ ಸರ್ಕಾರ
2022ನೇ ವರ್ಷದ ವರದಿ ಸಂಖ್ಯೆ–2

ವಿಷಯಸೂಚಿ

ಕಂಡಿಕೆ	ವಿವರಗಳು	ಪುಟ ಸಂಖ್ಯೆ
	ಮುನ್ನುಡಿ	v
	ಕಾರ್ಯನಿರ್ವಹಣಾ ಸಾರಾಂಶ	vii
ಅಧ್ಯಾಯ-1	ಪರಿಚಯ	
1.1	ನೇರ ನಗದು ವರ್ಗಾವಣೆ	1
1.1.1	ಡಿಬಿಟಿಯ ಅನುಷ್ಠಾನಕ್ಕಾಗಿನ ಸಾಂಸ್ಥಿಕ ರಚನೆ	1
1.1.2	ಡಿಬಿಟಿಯ ಜವಾಬ್ದಾರಸ್ಥರು	3
1.1.3	ಪ್ರಯೋಜನಗಳ ನೇರ ವರ್ಗಾವಣೆಯ ವರ್ಗಗಳು	3
1.2	ಲೆಕ್ಕಪರಿಶೋಧನಾ ಚೌಕಟ್ಟು	4
1.2.1	ಲೆಕ್ಕಪರಿಶೋಧನಾ ಉದ್ದೇಶಗಳು	4
1.2.2	ಲೆಕ್ಕಪರಿಶೋಧನಾ ಮಾನದಂಡಗಳು	4
1.2.3	ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ	4
1.2.4	ಕೃತಜ್ಞತೆ	5
ಅಧ್ಯಾಯ-2	ಡಿಬಿಟಿಯ ಅನುಷ್ಠಾನ ಮತ್ತು ನಿರ್ವಹಣೆ	
2.1	ಆಯ್ಕೆ ಮಾಡಲಾದ ಯೋಜನೆಗಳ ಅನುಷ್ಠಾನದ ಸ್ಥಿತಿ	7
2.2	ಡಿಬಿಟಿ ಅನುಷ್ಠಾನದ ದಕ್ಷತೆ	8
2.2.1	ಯಶಸ್ವಿ ವಹಿವಾಟುಗಳು	8
2.2.2	ವಿಫಲ ವಹಿವಾಟುಗಳು	13
2.2.3	ಬಾಕಿ ಉಳಿದಿರುವ ವಹಿವಾಟುಗಳು	14
2.2.4	ತಿರಸ್ಕೃತ ವಹಿವಾಟುಗಳು	14
2.2.5	ಪ್ರತಿಕ್ರಿಯೆ ಫೈಲ್‌ಗಳ ಸಮಯೋಚಿತ ಚಲನೆ	15
2.2.6	ಕೋರ್ ಡಿಬಿಟಿ ಪೋರ್ಟಲ್‌ನ ಸಂಸ್ಕರಣಾ ದಕ್ಷತೆ	16
2.2.7	ಸ್ಥಳೀಯ ಅಪ್ಲಿಕೇಶನ್‌ಗಳಲ್ಲಿ ದೃಢೀಕರಣ ಪರಿಶೀಲನೆಗಳ ಅನುಪಸ್ಥಿತಿ	16
2.3	ಕೋರ್ ಡಿಬಿಟಿ ಪೋರ್ಟಲ್‌ನ ನಿರ್ವಹಣೆ	16
2.3.1	ಕೋರ್ ಡಿಬಿಟಿ ಪೋರ್ಟಲ್ ಮಾಡ್ಯೂಲ್‌ಗಳ ಅನುಷ್ಠಾನದ ಸ್ಥಿತಿ	17

ಕಂಡಿಕೆ	ವಿವರಗಳು	ಪುಟ ಸಂಖ್ಯೆ
2.3.2	ಏಕೀಕರಣದ ಸ್ಥಿತಿ	17
2.3.3	ನಾಗರಿಕರಿಗೆ ಲಭ್ಯವಿರದ ರಾಜ್ಯ ಡಿಬಿಟಿ ಪೋರ್ಟಲ್	18
2.3.4	ಪಾವತಿ ನಂತರದ ಹೆಸರು ಹೊಂದಾಣಿಕೆ ಅಂಕ ಪ್ರಕ್ರಿಯೆಯಲ್ಲಿನ ನ್ಯೂನತೆಗಳು	19
2.4	ಭದ್ರತೆ ಮತ್ತು ಗೌಪ್ಯತೆ	20
2.4.1	ಸರ್ವರ್ ಪ್ರಮಾಣಪತ್ರ ಮತ್ತು ಡಿಜಿಟಲ್ ಸಹಿ	20
2.4.2	ಇಲಾಖಾ ದತ್ತಸಂಚಯದಲ್ಲಿ ಆಧಾರ್ ಸಂಖ್ಯೆಗಳನ್ನು ಸಂಗ್ರಹಿಸಿರುವುದು	20
2.4.3	ಭದ್ರತಾ ಲೆಕ್ಕಪರಿಶೋಧನೆ	20
2.4.4	ಅಪಾಯ ನಿರ್ವಹಣೆ	21
2.4.5	ಡಿಬಿಟಿ ಪೋರ್ಟಲ್‌ಗೆ ಸಂಬಂಧಿಸಿದ ಲೆಕ್ಕಪರಿಶೋಧನಾ ಅವಿಷ್ಕಾರಗಳ ಮೇಲೆ ತೆಗೆದುಕೊಂಡ ಕ್ರಮ	22
ಅಧ್ಯಾಯ–3	**ಆಯ್ದ ಯೋಜನೆಗಳಲ್ಲಿ ಡಿಬಿಟಿ ಅನುಷ್ಠಾನ**	
3.1	ಹಾಲು ಪ್ರೋತ್ಸಾಹಧನ ಯೋಜನ	23
3.1.1	ಹಣದ ಬಿಡುಗಡೆ ಮತ್ತು ಬಳಕೆ	23
3.1.2	ಕ್ಷೀರಸಿರಿ ಅಪ್ಲಿಕೇಶನ್	24
3.2	ಪರೀಕ್ಷಾ–ತನಿಖೆ ನಡೆಸಿದ ಕೃಷಿ ಇಲಾಖೆಯ ಡಿಬಿಟಿ ಯೋಜನೆಗಳು	35
3.2.1	ರೈತಸಿರಿ ಯೋಜನೆ	35
3.2.2	ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ – ಮುಂಚೂಣಿಯ ಪ್ರದರ್ಶನ (ಡಿಬಿಟಿ ಘಟಕ)	36
3.2.3	ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ರಾಜ್ಯದ ಪಾಲು)	37
ಅಧ್ಯಾಯ–4	**ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ**	
4.1	ಡಿಬಿಟಿ ಆಡಳಿತ ಚೌಕಟ್ಟು	39
4.1.1	ಸಲಹಾ ಸಮಿತಿ ಸಭೆಗಳನ್ನು ನಡೆಸಲಾಗಿಲ್ಲ	39
4.1.2	ಸೇರ್ಪಡೆ ಮಾಡಿದ ಯೋಜನೆಗಳ ಮೇಲ್ವಿಚಾರಣೆಯಲ್ಲಿ ಅಸಮರ್ಪಕತೆಗಳು	39
4.1.3	ಡಿಬಿಟಿ ಕೋಶದಿಂದ ಅಸಮರ್ಪಕ ಮೇಲ್ವಿಚಾರಣೆ	40
4.1.4	ಫಲಾನುಭವಿ ಕುಂದುಕೊರತೆ ಪರಿಹಾರ ವ್ಯವಸ್ಥೆ	40
4.2	ಡಿಬಿಟಿಯ ಮೌಲ್ಯಮಾಪನ	41
4.3	ಹಾಲು ಪ್ರೋತ್ಸಾಹಧನ ಯೋಜನೆ	41
4.3.1	ಡಿಬಿಟಿ ಕೋಶದ/ಸಮಿತಿಯ ಅನುಪಸ್ಥಿತಿ	41
4.3.2	ಅಸಮರ್ಪಕ ಮೇಲ್ವಿಚಾರಣಾ ಕಾರ್ಯವಿಧಾನ	42

ಕಂಡಿಕೆ	ವಿವರಗಳು	ಪುಟ ಸಂಖ್ಯೆ
4.3.3	ಕಾರ್ಯಕ್ಷಮತೆ ಸೂಚಕಗಳನ್ನು ನಿರ್ದಿಷ್ಟಪಡಿಸಲಾಗಿಲ್ಲ	42
4.3.4	ಯೋಜನೆಯ ಮೌಲ್ಯಮಾಪನವನ್ನು ಕೈಗೊಳ್ಳಲಾಗಿಲ್ಲ	43
4.3.5	ಪ್ರತ್ಯೇಕ ಕುಂದುಕೊರತೆ ಪರಿಹಾರ ವ್ಯವಸ್ಥೆಯ ಅನುಪಸ್ಥಿತಿ	43
4.4	ಕೃಷಿ ಇಲಾಖೆಯ ಯೋಜನೆಗಳು	43
4.4.1	ಎನ್‌ಎಫ್‌ಎಸ್‌ಎಮ್ ಮತ್ತು ರೈತಸಿರಿ ಯೋಜನೆಗಳ ಅಡಿಯಲ್ಲಿ ದತ್ತಾಂಶ ವರ್ಗಾವಣೆ	43
4.4.2	ತಾಂತ್ರಿಕ ಪಾಲುದಾರರೊಂದಿಗೆ ಪರಸ್ಪರ ತಿಳುವಳಿಕೆ ಪತ್ರ ಇಲ್ಲದಿರುವುದು	44
4.4.3	ಅಸಮರ್ಪಕ ಮೇಲ್ವಿಚಾರಣಾ ವ್ಯವಸ್ಥೆ	44
ಅಧ್ಯಾಯ–5	**ತೀರ್ಮಾನ ಮತ್ತು ಶಿಫಾರಸುಗಳು**	
	ತೀರ್ಮಾನ	45
	ಶಿಫಾರಸುಗಳು	47
	ಅನುಬಂಧಗಳು	49

ಅನುಬಂಧಗಳ ಪಟ್ಟಿ

ಅನುಬಂಧ ಸಂಖ್ಯೆ	ವಿವರಗಳು	ಪುಟ ಸಂಖ್ಯೆ
2.1	2018–20ರ ಅವಧಿಯಲ್ಲಿನ ವಹಿವಾಟುಗಳ ಸ್ಥಿತಿ	49
2.2	ಡಿಬಿಟಿ ಪ್ರಕ್ರಿಯೆ	52
2.3	ಸೇವೆಯ ಸಮಯೋಚಿತ ವಿತರಣೆ	53
2.4	ವಹಿವಾಟುಗಳ ವಿಫಲತೆಗೆ ದಾಖಲಿಸಿದ ಕಾರಣಗಳು	54
2.5	ವಿವಿಧ ವಹಿವಾಟು ಘಟ್ಟಗಳಲ್ಲಿ ಬಾಕಿಯಿರುವ ವಹಿವಾಟುಗಳು	55
2.6	ತಿರಸ್ಕೃತ ವಹಿವಾಟುಗಳಿಗೆ ಕಾರಣಗಳು	55
2.7	ಡಿಬಿಟಿಯ ಮಾಡ್ಯೂಲ್‌ವಾರು ಸವಿವರ ಕಾರ್ಯಹರಿವು	56
2.8	ರಾಜ್ಯ ಡಿಬಿಟಿ ಪೋರ್ಟಲ್‌ನೊಂದಿಗೆ ಏಕೀಕರಣ ಪ್ರಗತಿಯಲ್ಲಿದೆ	57
2.9	ಹೆಸರು ಹೊಂದಾಣಿಕೆ ಸ್ಕೋರ್‌ನಲ್ಲಿನ ವ್ಯತ್ಯಾಸಗಳು	58
3.1	ಕೋರ್ ಡಿಬಿಟಿ ಮತ್ತು ಕ್ಷೀರಸಿರಿ ಅಪ್ಲಿಕೇಶನ್‌ಗಳ ದತ್ತಾಂಶದಲ್ಲಿನ ವ್ಯತ್ಯಾಸಗಳು	63
3.2	ಆಯ್ದ ಹಾಲು ಮಾರುವವರಿಂದ ಸರಬರಾಜು ಮಾಡಿದ ಹಾಲಿನ ಗುಣಮಟ್ಟದಲ್ಲಿ ಗಮನಿಸಿದ ವ್ಯತ್ಯಯಗಳು	64
3.3	ವ್ಯಾಪಾರ ನಿಯಮಗಳನ್ನು ತಪ್ಪಾಗಿ ಹೊಂದಾಣಿಕೆ ಮಾಡಿದ ಕಾರಣ ಅಧಿಕ ಪಾವತಿ	65

ಮುನ್ನುಡಿ

1. 31 ಮಾರ್ಚ್ 2021ಕ್ಕೆ ಕೊನೆಗೊಂಡ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯನ್ನು ಭಾರತದ ಸಂವಿಧಾನದ 151(2)ನೇ ವಿಧಿಯಡಿಯಲ್ಲಿ ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸಲು ಕರ್ನಾಟಕ ಸರ್ಕಾರದ ರಾಜ್ಯಪಾಲರಿಗೆ ಸಲ್ಲಿಸುವುದಕ್ಕೆ ತಯಾರಿಸಲಾಗಿದೆ.

2. 2018–20 ಅವಧಿಯನ್ನು ವ್ಯಾಪಿಸಿರುವ ಈ ವರದಿಯು 'ನೇರ ನಗದು ವರ್ಗಾವಣೆ' ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿದೆ.

3. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಜಾರಿ ಮಾಡಿರುವ ಲೆಕ್ಕಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ಈ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

4. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

ಕಾರ್ಯನಿರ್ವಹಣಾ ಸಾರಾಂಶ

ರಾಜ್ಯ ಸರ್ಕಾರವು ನೇರ ನಗದು ವರ್ಗಾವಣೆಯನ್ನು (ಡಿಬಿಟಿ) ಇಲಾಖೆಗಳಾದ್ಯಂತ ವಿತರಣಾ ಕಾರ್ಯವಿಧಾನವನ್ನಾಗಿ ಪರಿಚಯಿಸಿತು ಮತ್ತು ರಾಜ್ಯದಲ್ಲಿ ಡಿಬಿಟಿ ಅನುಷ್ಠಾನ ಮತ್ತು ಮೇಲ್ವಿಚಾರಣೆಗಾಗಿ ಮತ್ತು ಬಳಕೆದಾರ ಇಲಾಖೆಗಳೊಂದಿಗೆ ಸಮನ್ವಯಗೊಳಿಸಲು ಸಲಹಾ ಮಂಡಳಿ ಮತ್ತು ಸಂಚಾಲನಾ ಸಮಿತಿಯನ್ನು ಒಳಗೊಂಡಿರುವ ಡಿಬಿಟಿ ಕೋಶವನ್ನು ಸ್ಥಾಪಿಸಿತು. ಡಿಬಿಟಿಯು ಫಲಾನುಭವಿಯ ಆಧಾರ್ ಜೋಡಣೆ ಮಾಡಿದ ಬ್ಯಾಂಕ್ ಖಾತೆಯ ಮೂಲಕ ಪಾವತಿಗಳನ್ನು ವಿತರಿಸುವ ಗುರಿಯನ್ನು ಹೊಂದಿತ್ತು. ದ್ವಿಪಾವತಿಗಳನ್ನು ತಪ್ಪಿಸಲು ಮತ್ತು ಫಲಾನುಭವಿಗಳಿಗೆ ಗುರುತಿನ ಮತ್ತು ಹಣಕಾಸಿನ ವಿಳಾಸ ದೃಢೀಕರಣಕ್ಕಾಗಿ ಕೇಂದ್ರೀಕೃತ ಕೋರ್ ಡಿಬಿಟಿ ಪೋರ್ಟಲ್ ಅನ್ನು ಸರ್ಕಾರವು ಜಾರಿಗೆ ತಂದಿತು. ಗುರುತಿಸಲಾದ ಫಲಾನುಭವಿಗಳಿಗೆ ನಗದು ಪಾವತಿಗಾಗಿ ಹಸ್ತಚಾಲಿತ ಸಂವಹನಗಳಿಲ್ಲದೆ ಸ್ಥಳೀಯ ಅಪ್ಲಿಕೇಶನ್‌ಗಳಿಂದ ಡಿಬಿಟಿ ದತ್ತಾಂಶದ ನೇರ ಸಿಸ್ಟಮ್-ಟು-ಸಿಸ್ಟಮ್ ವಿನಿಮಯವನ್ನು ಸಕ್ರಿಯಗೊಳಿಸಲು ವಿವಿಧ ಇಲಾಖೆಗಳ ಎಲ್ಲಾ ಡಿಬಿಟಿ ಯೋಜನೆಗಳನ್ನು ಸಮಗ್ರ ಪರಿಸರದಲ್ಲಿ ತರಲು ಇದು ಯೋಜಿಸಿತ್ತು.

ಮಧ್ಯವರ್ತಿಗಳ ಮಟ್ಟವನ್ನು ಕಡಿಮೆ ಮಾಡಲು, ಉದ್ದೇಶಿತ ಫಲಾನುಭವಿಗಳಿಗೆ ನಗದು ಪಾವತಿ ವಿಳಂಬವನ್ನು ಕಡಿಮೆ ಮಾಡಲು, ಸೋರಿಕೆ ಮತ್ತು ದ್ವಿಪಾವತಿಗಳನ್ನು ತಡೆಯಲು ಅಗತ್ಯ ಪ್ರಕ್ರಿಯೆಗಳನ್ನು ಪುನರ್‌ವ್ಯವಸ್ಥೆ ಮಾಡಲಾಗಿತ್ತೇ ಹಾಗೂ ಡಿಬಿಟಿಯ ಮೂಲಸೌಕರ್ಯ, ಸಂಘಟನೆ ಮತ್ತು ನಿರ್ವಹಣೆಯು ಸಮರ್ಪಕವಾಗಿದ್ದಿತೇ ಹಾಗೂ ಪರಿಣಾಮಕಾರಿಯಾಗಿತ್ತೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಪ್ರಯತ್ನವಾಗಿತ್ತು. ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ರಾಜ್ಯ ಪಾಲು), ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ (ಡಿಬಿಟಿಗೆ ಸಂಬಂಧಿಸಿದಂತೆ) ಮತ್ತು ಕೃಷಿ ಇಲಾಖೆಯ ರೈತಸಿರಿ ಯೋಜನೆಗಳ ದತ್ತಾಂಶದ ವಿಶ್ಲೇಷಣೆಯೊಂದಿಗೆ ಕೋರ್ ಡಿಬಿಟಿ ಪೋರ್ಟಲ್ ಮತ್ತು ಕ್ಷೀರಸಿರಿ ಅಪ್ಲಿಕೇಶನ್‌ನ ದತ್ತಾಂಶ ವಿಶ್ಲೇಷಣೆ ಮತ್ತು ಮಾಹಿತಿ ತಂತ್ರಜ್ಞಾನ ಲೆಕ್ಕಪರಿಶೋಧನೆಯನ್ನು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯು ಒಳಗೊಂಡಿತ್ತು.

ಕೋರ್ ಡಿಬಿಟಿ ಪೋರ್ಟಲ್ ಮತ್ತು ಡಿಬಿಟಿ ಕೋಶ

ಏಪ್ರಿಲ್ 2021ರಲ್ಲಿದ್ದಂತೆ ಗುರುತಿಸಲಾದ 239ರಲ್ಲಿ 83 ಯೋಜನೆಗಳನ್ನು ಮಾತ್ರ ಕೋರ್ ಡಿಬಿಟಿ ಪೋರ್ಟಲ್‌ಗೆ ಸೇರ್ಪಡೆ ಮಾಡಿದ್ದರಿಂದ ಯೋಜನೆಗಳ ಸೇರ್ಪಡೆ ಪ್ರಕ್ರಿಯೆಯು ನಿಧಾನಗತಿಯಲ್ಲಿದ್ದಿತು. ಈ ನಿಧಾನ ಪ್ರಕ್ರಿಯೆಯು 22 ಇಲಾಖೆಗಳಿಂದ 168 ಯೋಜನೆಗಳಡಿಯಲ್ಲಿ ₹2,829.02 ಕೋಟಿ ಮೌಲ್ಯದ ನಗದನ್ನು ಕೋರ್ ಡಿಬಿಟಿ ಪೋರ್ಟಲ್‌ನ ಹೊರಗೆ ವಿತರಿಸುವಲ್ಲಿ ಪರಿಣಮಿಸಿತು.

(ಕಂಡಿಕೆ 2.1)

ಒಟ್ಟಾರೆ ಶೇಕಡಾ 83ರಷ್ಟು ವಹಿವಾಟು ಯಶಸ್ವಿಯಾಗಿದ್ದರೆ, ಶೇಕಡಾ 14ರಷ್ಟು ವಹಿವಾಟುಗಳು ತಿರಸ್ಕೃತವಾಗಿದ್ದವು. ಪರೀಕ್ಷಾ-ತನಿಖೆ ನಡೆಸಿದ ಯೋಜನೆಗಳಡಿಯಲ್ಲಿ ಯಶಸ್ವಿ ವಹಿವಾಟುಗಳು ಶೇಕಡಾ 57ರಿಂದ 97ರ ನಡುವೆ ಇದ್ದವು.

(ಕಂಡಿಕೆ 2.2.1)

ವಿವಿಧ ವಹಿವಾಟು ಬಿಂದುಗಳಾದ್ಯಂತ ಡಿಬಿಟಿ ಸೇವೆಗಳ ವಿತರಣೆಯ ಸಮಯಾವಧಿಯನ್ನು ನಿಗದಿಪಡಿಸದೇ ಇದ್ದುದು ಸೇವೆಗಳ ವಿಳಂಬ ವಿತರಣೆಯಲ್ಲಿ ಪರಿಣಮಿಸಿತು. ಎರಡು ಹಂತಗಳಲ್ಲಿ ವಿಳಂಬಗಳು ಹೆಚ್ಚಾಗಿದ್ದವು – ಕೆ2 ನಲ್ಲಿ ಸ್ಕ್ರೋಲ್/ಅಂತಿಮ ಅನುಮೋದನೆ (ಶೇಕಡಾ 75) ಮತ್ತು ಡಿಡಿಒ ಅನುಮೋದನೆ (ಶೇಕಡಾ 13).

(ಕಂಡಿಕೆ 2.2.1.1)

'ಹೆಸರು ಹೊಂದಾಣಿಕೆ ಸ್ಕೋರ್' ಪರಿಶೀಲನೆಯ ವಿಶ್ಲೇಷಣೆಯು ವಾಸ್ತವಿಕ ಫಲಾನುಭವಿಗಳನ್ನು ಹೊರತುಪಡಿಸಿ ಇತರ ವ್ಯಕ್ತಿಗಳ ಖಾತೆಗಳಿಗೆ ಜಮೆ ಮಾಡಿರುವ ನಿದರ್ಶನಗಳನ್ನು ತಿಳಿಯಪಡಿಸಿತು. ಫೆಬ್ರುವರಿಯಿಂದ ಅಕ್ಟೋಬರ್ 2020ರ ಅವಧಿಯಲ್ಲಿ ನಗದು ಜಮೆ ಆಗದಿರುವ ಬಗ್ಗೆ 21 ದೂರುಗಳನ್ನು ಸ್ವೀಕರಿಸಲಾಗಿದೆಯಾದರೂ, ಪರಿಹಾರಕ ಕ್ರಮಗಳನ್ನು ಇನ್ನೂ ಪ್ರಾರಂಭಿಸಿಲ್ಲ.

(ಕಂಡಿಕೆ 2.2.1.2)

ವಿಫಲವಾದ ವಹಿವಾಟುಗಳನ್ನು ಸರಿಪಡಿಸಲು ಮತ್ತು ಮರುಪ್ರಾರಂಭಿಸಲು ಬಳಕೆದಾರ ಇಲಾಖೆಗಳು ವಿಫಲವಾಗಿದ್ದವು. ವಿಫಲವಾದ ದಿನಾಂಕದಿಂದ 30 ದಿನಗಳು ಕಳೆದರೂ 91,283 ವಹಿವಾಟುಗಳು ಮರು–ಪ್ರಾರಂಭಕ್ಕಾಗಿ ಕಾಯುತ್ತಿದ್ದವು ಮತ್ತು 36,824 ವಹಿವಾಟುಗಳಿಗೆ (ಶೇಕಡಾ 29) ವಹಿವಾಟಿನ ದಿನಾಂಕವನ್ನು ಕೋರ್ ಡಿಬಿಟಿ ಪೋರ್ಟಲ್‌ನಲ್ಲಿ ಸೆರೆಹಿಡಿಯಲಾಗಿಲ್ಲ.

(ಕಂಡಿಕೆ 2.2.2)

ವಹಿವಾಟುಗಳು ಬಾಕಿಯುಳಿದ ವ್ಯಾಪ್ತಿಯು ಮೂರರಿಂದ 673 ದಿನಗಳಷ್ಟಿತ್ತು. ಅಗತ್ಯ ಕ್ರಮಗಳನ್ನು ಪ್ರಾರಂಭಿಸಲು ವಿಫಲವಾದ ಕಾರಣ 2018–19 ಮತ್ತು 2019–20ರ ಅವಧಿಯಲ್ಲಿ 6.67 ಲಕ್ಷ ಫಲಾನುಭವಿಗಳು ₹153.30 ಕೋಟಿ ಆರ್ಥಿಕ ಪ್ರಯೋಜನಗಳಿಂದ ವಂಚಿತರಾಗಿದ್ದರು.

(ಕಂಡಿಕೆ 2.2.3)

ತಿರಸ್ಕೃತ ವಹಿವಾಟುಗಳ ಮರುಪ್ರಕ್ರಿಯೆ ಮೇಲ್ವಿಚಾರಣೆ ಮಾಡಲು ಯಾವುದೇ ಕಾರ್ಯವಿಧಾನವಿರಲಿಲ್ಲ. 42.02 ಲಕ್ಷ ವಹಿವಾಟುಗಳಿಗೆ ಸಂಬಂಧಿಸಿದಂತೆ ₹814.55 ಕೋಟಿ ಪಾವತಿ ಮಾಡಲು ತೆಗೆದುಕೊಂಡಿರುವ ಪರಿಹಾರಕ ಕ್ರಮಗಳನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿಲಿಲ್ಲ.

(ಕಂಡಿಕೆ 2.2.4)

ಪ್ರತಿಕ್ರಿಯೆ ಫೈಲ್‌ಗಳ ರವಾನೆಯಲ್ಲಿ ವಿಳಂಬಗಳು ಮತ್ತು ಕೋರ್ ಡಿಬಿಟಿಯಿಂದ ಕೆ2 ವರೆಗಿನ ಪಾವತಿ ಫೈಲ್‌ಗಳನ್ನು ಪ್ರಕ್ರಿಯೆಗೊಳಿಸುವ ದಕ್ಷತೆಯಲ್ಲಿನ ನ್ಯೂನತೆಗಳಿದ್ದುದು ಸಕಾಲಿಕ ತಿದ್ದುಪಡಿ ಹಾಗೂ ಬಾಕಿ ಇರುವ ಮತ್ತು ತಿರಸ್ಕೃತ ವಹಿವಾಟುಗಳ ಪುನಃ ಪ್ರಕ್ರಿಯೆಗೆ ಅಡ್ಡಿಯುಂಟುಮಾಡಿತ್ತು.

(ಕಂಡಿಕೆಗಳು 2.2.5 ಮತ್ತು 2.2.6)

ಸಮನ್ವಯಕ್ಕಾಗಿ ಸ್ಥಳೀಯ ಅಪ್ಲಿಕೇಶನ್‌ಗಳೊಂದಿಗೆ ಕೆ2ವಿನ ಸಂಯೋಜನೆಯ ಅನುಪಸ್ಥಿತಿಯಿದ್ದುದು ದತ್ತಾಂಶಗಳ ನಡುವಿನ ಹೊಂದಾಣಿಕೆ ಇಲ್ಲದಿರುವಲ್ಲಿ ಪರಿಣಮಿಸಿತು.

(ಕಂಡಿಕೆ 2.3.2)

ಪಾವತಿ ಅನುಸೂಚಿ ಫೈಲ್‌ಗಳನ್ನು ಸರ್ವರ್ ಪ್ರಮಾಣಪತ್ರ/ಡಿಜಿಟಲ್ ಸಹಿ ಇಲ್ಲದೆಯೇ ದತ್ತಾಂಶ ದೃಢೀಕರಣಕ್ಕಾಗಿ ಕಳುಹಿಸಲಾಗಿತ್ತು. ಆಧಾರ್ ಅಧಿನಿಯಮ ಹಾಗೂ ಸಂಬಂಧಿತ ಸುತ್ತೋಲೆಗಳು ಮತ್ತು ಮಾರ್ಗಸೂಚಿಗಳನ್ನು ಉಪೇಕ್ಷಿಸಿ, ಇಲಾಖೆಗಳು ಆಧಾರ್ ವಿವರಗಳನ್ನು ಸ್ಥಳೀಯ ದತ್ತಸಂಚಯದಲ್ಲಿ ಸಂಗ್ರಹಿಸುತ್ತಿದ್ದವು. ದುರ್ಬಲತೆಯ ಮೌಲ್ಯಮಾಪನ ಮತ್ತು ಒಳಭೇದನ ಪರೀಕ್ಷೆಗಳನ್ನು ಒಳಗೊಂಡಿರದ ಕಾರಣ ಭದ್ರತಾ ಲೆಕ್ಕಪರಿಶೋಧನೆಯು ಸಾಕಷ್ಟಿರಲಿಲ್ಲ.

(ಕಂಡಿಕೆಗಳು 2.4.1 – 2.4.3)

ಕ್ಷೀರಸಿರಿ ಅಪ್ಲಿಕೇಶನ್ ಹಾಗೂ ಹಾಲು ಪ್ರೋತ್ಸಾಹಧನ ಯೋಜನೆ

ಅಸಮರ್ಪಕ ಅಂಕೀಕರಣ ಮತ್ತು ವಿವಿಧ ಸ್ವತಂತ್ರ ಅಪ್ಲಿಕೇಶನ್‌ಗಳ ನಡುವೆ ಏಕರೂಪತೆಯ ಕೊರತೆಯು ಸ್ವಯಂಚಾಲಿತ ಮೌಲ್ಯಾಂಕನ ಪರಿಶೀಲನೆಗಳ ಅನುಪಸ್ಥಿತಿಯಲ್ಲಿ ಪರಿಣಮಿಸಿತು. ಇನ್‌ಪುಟ್ ದೃಢೀಕರಣ ನಿಯಂತ್ರಣಗಳ ಅನುಪಸ್ಥಿತಿ, ವೈರುಧ್ಯತೆ ಪ್ರಕರಣಗಳ ವರದಿ ಮಾಡುವುದನ್ನು ಮತ್ತು ಲೆಕ್ಕಪರಿಶೋದನೆ ಮಾಡ್ಯೂಲ್‌ಗಳನ್ನು ಅನುಷ್ಠಾನಗೊಳಿಸದಿರುವುದು ಹಾಗೂ ಹಾಕಿದ ಹಾಲಿನ ಗುಣಮಟ್ಟ ಮತ್ತು ಪ್ರಮಾಣದ ಮೇಲೆ ಖಚಿತತೆ ಇಲ್ಲದಿರುವುದು ಅನಧಿಕೃತ ಮಾರ್ಪಾಡುಗಳಿಗೆ ಅನುವಾಯಿತು ಮತ್ತು ತತ್ಪರಿಣಾಮವಾಗಿ ಅಧಿಕ ಪಾವತಿಗಳಾಗಿ ದತ್ತಾಂಶದ ಗುಣಮಟ್ಟವನ್ನು ವಿಶ್ವಾಸಾರ್ಹವಲ್ಲವಾಗಿಸಿತು.

(ಕಂಡಿಕೆ 3.1.2.1)

ಪಾವತಿ ಅನುಸೂಚಿ ಫೈಲ್‌ಗಳ ರಚನೆಯಲ್ಲಿನ ಮತ್ತು ಡಿಡಿಒ ಅನುಮೋದನೆಗಳ ವಿಳಂಬವು ಫಲಾನುಭವಿಗಳಿಗೆ ಸೇವೆಗಳ ವಿತರಣೆಯು ವಿಳಂಬವಾಗುವಲ್ಲಿ ಪರಿಣಮಿಸಿತು. 8,464 ಹಾಲು ಹಾಕುವವರಿಗೆ ಸಂಬಂಧಿಸಿದಂತೆ ಜನವರಿ 2020ರಿಂದ ಬಾಕಿ ಉಳಿದಿರುವ ₹56.08 ಲಕ್ಷ ಮೊತ್ತವನ್ನು ಪಾವತಿಸಲಾಗಿಲ್ಲ.

(ಕಂಡಿಕೆ 3.1.2.2)

ಕೃಷಿ ಇಲಾಖೆಯ ಯೋಜನೆಗಳು

ಕೋರ್ ಡಿಬಿಟಿ ಪೋರ್ಟಲ್‌ಗೆ ಸೇರ್ಪಡೆ ಮಾಡಿದ್ದರೂ ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ ಮತ್ತು ರೈತಸಿರಿ ಯೋಜನೆಗಳಿಗಾಗಿ ₹5.94 ಕೋಟಿ ಡಿಬಿಟಿ ಪಾವತಿಗಳನ್ನು ಕೋರ್ ಡಿಬಿಟಿ ಪೋರ್ಟಲ್ ಮೂಲಕ ಮಾಡಲಾಗಿಲ್ಲ.

(ಕಂಡಿಕೆಗಳು 3.2.1.1 ಮತ್ತು 3.2.2.2)

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿಯಲ್ಲಿ ₹91.99 ಕೋಟಿ ಡಿಬಿಟಿ ಪಾವತಿಯು 2019–20ರಿಂದ ಪ್ರಕ್ರಿಯೆಗೆ ಬಾಕಿ ಇದ್ದು ಫಲಾನುಭವಿಗಳು ತಮಗೆ ದೊರಕಬೇಕಿದ್ದ ಪ್ರಯೋಜನಗಳಿಂದ ವಂಚಿತರಾಗುವಲ್ಲಿ ಪರಿಣಮಿಸಿತು. ಅಸಮರ್ಪಕ ದೃಢೀಕರಣ ಮತ್ತು ನಿಯಂತ್ರಣಗಳು ಅನರ್ಹ ಫಲಾನುಭವಿಗಳಿಗೆ ಪ್ರಯೋಜನಗಳು ದೊರಕುವಲ್ಲಿ ಪರಿಣಮಿಸಿತು.

(ಕಂಡಿಕೆ 3.2.3.1 ಮತ್ತು 3.2.3.2)

ಪಾವತಿ ಫೈಲ್‌ಗಳ ಪ್ರಕ್ರಿಯೆಗೆ ಮತ್ತು ಆ ಫೈಲ್‌ಗಳ ತಿದ್ದುಪಡಿಗೆ ಸಮಯ ನಿಗದಿಪಡಿಸದಿರುವುದು, ಅನುಷ್ಠಾನದ ನಂತರದ ಮೌಲ್ಯಮಾಪನವನ್ನು ನಡೆಸದಿರುವುದು, ಪರಿಣಾಮಕಾರಿಯದ ಫಲಾನುಭವಿಗಳ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ಅನುಪಸ್ಥಿತಿ ಮತ್ತು ಕೃಷಿ ಯೋಜನೆಗಳ ಅನುಷ್ಠಾನದಲ್ಲಿ ಅಸಮರ್ಪಕ ಐಟಿ ನೀತಿಗಳು ಮುಂತಾದ ಮೇಲ್ವಿಚಾರಣಾ ಕಾರ್ಯವಿಧಾನದಲ್ಲಿನ ಅಸಮರ್ಪಕತೆಗಳಿದ್ದವು.

(ಕಂಡಿಕೆ 4.4.3)

ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

ವಿವಿಧ ಯೋಜನೆಗಳಲ್ಲಿ ಫಲಾನುಭವಿಗಳ ಕುಂದುಕೊರತೆಗಳನ್ನು ಪರಿಹರಿಸುವುದಕ್ಕೆ ಅನುವಾಗಲು ಡಿಬಿಟಿ ಕೋಶದಲ್ಲಿ ಕೇಂದ್ರೀಕೃತ ಸಾರ್ವಜನಿಕ ಕುಂದುಕೊರತೆ ಕಾರ್ಯವಿಧಾನವನ್ನು ಸ್ಥಾಪಿಸಿರಲಿಲ್ಲ.

(ಕಂಡಿಕೆ 4.1.4)

ವಿಫಲವಾದ/ತಿರಸ್ಕೃತ/ಬಾಕಿಯುಳಿದಿರುವ ವಹಿವಾಟುಗಳಿಗೆ ಸಂಬಂಧಿಸಿದಂತೆ ಪರಿಹಾರ ಕೈಗೊಳ್ಳಲು ಇಲಾಖೆಯು ಯಾವುದೇ ಸಮಯಾವಧಿಯನ್ನು ನಿಗದಿಪಡಿಸಿರಲಿಲ್ಲ, ಇದು ಸೇವೆಗಳ ವಿಳಂಬ ವಿತರಣೆಯಲ್ಲಿ ಅಥವಾ ಸೇವೆಗಳ ವಿತರಣೆ ಆಗದೇ ಇರುವಲ್ಲಿ ಪರಿಣಮಿಸಿತು.

(ಕಂಡಿಕೆಗಳು 4.3.2 ಮತ್ತು 4.4.3)

ಡಿಬಿಟಿಯ ಅನುಷ್ಠಾನದ ಪರಿಣಾಮಕಾರಿತ್ವವನ್ನು ನಿರ್ಣಯಿಸಲು ಕೋರ್ ಡಿಬಿಟಿ ಪೋರ್ಟಲ್, ಕ್ಷೀರಸಿರಿ ಅಪ್ಲಿಕೇಶನ್ ಮತ್ತು ಪರೀಕ್ಷಾ-ತನಿಖೆ ನಡೆಸಿದ ಯೋಜನೆಗಳ ಮೌಲ್ಯಾಂಕನ ಮತ್ತು ಪ್ರಭಾವ ಮಾಪನವನ್ನು ನಡೆಸಲಾಗಿಲ್ಲ.

(ಕಂಡಿಕೆಗಳು 4.2, 4.3.4 ಮತ್ತು 4.4.3)

ಅಧ್ಯಾಯ–1

ಪರಿಚಯ

ಅಧ್ಯಾಯ-1

ಪರಿಚಯ

1.1 ನೇರ ನಗದು ವರ್ಗಾವಣೆ

ನೇರ ನಗದು ವರ್ಗಾವಣೆಯು (ಡಿಬಿಟಿ) ಆಧುನಿಕ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು (ಐಸಿಟಿ) ಬಳಸಿಕೊಂಡು ಅಸ್ತಿತ್ವದಲ್ಲಿರುವ ಸರ್ಕಾರದ ಪ್ರಯೋಜನಗಳ ವಿತರಣಾ ಪ್ರಕ್ರಿಯೆಗಳನ್ನು ಪುನರ್‌ವ್ಯವಸ್ಥೆ ಮಾಡುವ ಪ್ರಮುಖ ಸುಧಾರಣಾ ಉಪಕ್ರಮವಾಗಿದೆ. ಈ ಯೋಜನೆಯು, ಫಲಾನುಭವಿಗಳ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣವನ್ನು ವರ್ಗಾಯಿಸುವ ಗುರಿಯನ್ನು ಹೊಂದಿದೆ.

ನಗದು ವಿತರಣೆಯ ಕಾರ್ಯವಿಧಾನವಾಗಿ ಎಲ್ಲಾ ಇಲಾಖೆಗಳಲ್ಲೂ ಡಿಬಿಟಿಯನ್ನು ಜಾರಿಗೆ ತರಲು ಮತ್ತು ಡಿಬಿಟಿ ಕೋಶವನ್ನು ಸ್ಥಾಪಿಸಲು ರಾಜ್ಯ ಸರ್ಕಾರವು[1] ತಾತ್ವಿಕವಾಗಿ ಅನುಮತಿ ನೀಡಿತು (ನವೆಂಬರ್ 2016). ಸರ್ಕಾರವು ನಿಗದಿಪಡಿಸಿದಂತೆ ಕೇಂದ್ರ/ರಾಜ್ಯ ಬೊಕ್ಕಸದಿಂದ ಹಣ ಬಿಡುಗಡೆಯಾಗುವ ಎಲ್ಲಾ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಾಯಧನಗಳು ಮತ್ತು ಪ್ರಯೋಜನಗಳಿಗೆ ಆಧಾರ್ ಕಾರ್ಡ್ ಗುರುತು ಕಡ್ಡಾಯವಾಗಿತ್ತು. ಫಲಾನುಭವಿಯ ಆಧಾರ್ ಜೋಡಣೆ ಮಾಡಿದ ಬ್ಯಾಂಕ್ ಖಾತೆಯ ಮೂಲಕ ಹಣದ ವರ್ಗಾವಣೆ ನಡೆಯಬೇಕಿತ್ತು. ತರುವಾಯ, ರಾಜ್ಯ ಸರ್ಕಾರವು (ಡಿಸೆಂಬರ್ 2017) ಎಲ್ಲಾ ಇಲಾಖೆಗಳ ಮುಖ್ಯಸ್ಥರು ಮತ್ತು ಯೋಜನಾ ಆಡಳಿತಾಧಿಕಾರಿಗಳಿಗೆ ನಗದು ವರ್ಗಾವಣೆಗಾಗಿ ಡಿಬಿಟಿಯನ್ನು ಬಳಸುವಲ್ಲೆಲ್ಲಾ ಅನುಸರಿಸಬೇಕಾದ ವಿವರವಾದ ಕಾರ್ಯವಿಧಾನ/ಶಿಷ್ಟಾಚಾರನ್ನು ನಿಗದಿಪಡಿಸಿತು.

1.1.1 ಡಿಬಿಟಿಯ ಅನುಷ್ಠಾನಕ್ಕಾಗಿನ ಸಾಂಸ್ಥಿಕ ರಚನೆ

ರಾಜ್ಯದಲ್ಲಿ ಡಿಬಿಟಿ ಅನುಷ್ಠಾನಕ್ಕಾಗಿ ಆರ್ಥಿಕ ಇಲಾಖೆಯು ನೋಡಲ್ ಇಲಾಖೆಯಾಗಿದೆ. ರಚಿಸಲಾದ ರಾಜ್ಯ ಡಿಬಿಟಿ ಕೋಶವು ಡಿಬಿಟಿ ಅನುಷ್ಠಾನ ಮತ್ತು ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊಂದಿದೆ. ಇದು ಸಲಹಾ ಮಂಡಳಿ ಮತ್ತು ಸಂಚಾಲನಾ ಸಮಿತಿಯನ್ನು ಹೊಂದಿರುತ್ತದೆ ಮತ್ತು ಯೋಜನೆಗಳಲ್ಲಿ ಡಿಬಿಟಿ ಅನುಷ್ಠಾನಕ್ಕೆ ತರಲು ಎಲ್ಲಾ ರೀತಿಯಲ್ಲೂ ಸಹಕರಿಸುತ್ತದೆ.

ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ಸಲಹಾ ಮಂಡಳಿಯು ಡಿಬಿಟಿ ಕೋಶದ ಉನ್ನತಾಧಿಕಾರ ಹೊಂದಿದ ಮಾರ್ಗದರ್ಶಿ ಸಮಿತಿಯಾಗಿದ್ದು ಪ್ರಾಜ್ಞ ನಾಯಕತ್ವವನ್ನು ಒದಗಿಸಲು, ಡಿಬಿಟಿಯನ್ನು ಅತ್ಯಂತ ದಕ್ಷ ಮತ್ತು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವಲ್ಲಿ ನವೀನ ತಂತ್ರಗಾರಿಕೆ ಪರಿಚಯಿಸುತ್ತದೆ ಮತ್ತು ಕಾರ್ಯತಂತ್ರ ಸಲಹೆಗಳನ್ನು ನೀಡುತ್ತದೆ. ಈ ಮಂಡಳಿಯು ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ಅಪರ ಮುಖ್ಯ ಕಾರ್ಯದರ್ಶಿ (ಆರ್ಥಿಕ ಇಲಾಖೆ), ಪ್ರಧಾನ ಕಾರ್ಯದರ್ಶಿ (ಕಂದಾಯ), ಪ್ರಧಾನ ಕಾರ್ಯದರ್ಶಿ (ಯೋಜನೆ) ಮತ್ತು ಪ್ರಧಾನ ಕಾರ್ಯದರ್ಶಿ (ಇ-ಆಡಳಿತ), ಇವರುಗಳನ್ನು ಅದರ ಖಾಯಂ ಸದಸ್ಯರನ್ನಾಗಿ ಮತ್ತು ಡಿಬಿಟಿ ವ್ಯಾಪ್ತಿಗೆ ಒಳಪಡುವ ಪ್ರಯೋಜನ ಯೋಜನೆಗಳನ್ನು ಜಾರಿಗೊಳಿಸುವ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳನ್ನು ಆಹ್ವಾನಿತ ಸದಸ್ಯರನ್ನಾಗಿ ಹೊಂದಿರುತ್ತದೆ.

---

[1] ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ.06 ಸಿಎಎಮ್ 2013 ದಿನಾಂಕ 23.11.2016

ಡಿಬಿಟಿ ಯೋಜನಾ ನಿರ್ದೇಶಕರು ಮುಖ್ಯಸ್ಥರಾಗಿರುವ ಡಿಬಿಟಿ ಕೋಶದ ಸಂಚಾಲನಾ ಸಮಿತಿಯು ಈ ಕೆಳಗೆ ತೋರಿಸಿರುವಂತೆ ಮೂರು ಗುಂಪುಗಳನ್ನು ಹೊಂದಿರುತ್ತದೆ:



ತಂಡದ ಸಂಯೋಜನೆ	•ನಿರ್ದೇಶಕರು (ಎಎಸ್(ಎಫ್ಆರ್)) •ಜಂಟಿ ನಿರ್ದೇಶಕರು/ಜಂಟಿ ನಿಯಂತ್ರಕರು/ಉಪ ಕಾರ್ಯದರ್ಶಿಗಳು •ಉಪನಿರ್ದೇಶಕರು/ಲೆಕ್ಕಪರಿಶೋಧನಾ ಅಧಿಕಾರಿ/ಅಧೀನ ಕಾರ್ಯದರ್ಶಿ •ಸೆಕ್ಷನ್ ಆಫೀಸರ್ •ಹಿರಿಯ/ಕಿರಿಯ ಸಹಾಯಕರು	•ಸಿಇಜಿ–ಕರ್ನಾಟಕ ರೆಸಿಡೆಂಟ್ ಡಾಟಾ ಹಬ್ (ಕೆಆರ್‌ಡಿಹೆಚ್) •ನ್ಯಾಶನಲ್ ಇನ್‌ಫರ್‌ಮೇಟಿಕ್ ಸೆಂಟರ್ (ಎನ್‌ಐಸಿ) •ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ (ಯುಐಡಿಎಐ)	•ಖಜಾನೆ ಮತ್ತು ಖಜಾನೆ–2ರ ಪ್ರತಿನಿಧಿಗಳು •ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ (ಎಸ್‌ಎಲ್‌ಬಿಸಿ) •ಪ್ರಧಾನ ಬ್ಯಾಂಕ್‌ನ ಪ್ರತಿನಿಧಿಗಳು •ಭಾರತೀಯ ರಿಸರ್ವ್ ಬ್ಯಾಂಕ್ •ದೂರಸಂವಹನಾ ಸೇವಾದಾರರು
ತಂಡಗಳ ಜವಾಬ್ದಾರಿಗಳು	•ಡಿಬಿಟಿಯ ವ್ಯಾಪ್ತಿಯೊಳಗೆ ಬರುವ ಇಲಾಖೆಗಳ/ಯೋಜನೆಗಳ ಗುರುತಿಸುವಿಕೆ •ಇಲಾಖೆಗಳಿಂದ ದತ್ತಾಂಶದ ಸಂಗ್ರಹಣೆ •ಯೋಜನೆಗಳನ್ನು ಡಿಬಿಟಿ ವ್ಯಾಪ್ತಿಗೆ ಒಳಪಡಿಸಲು ಗುರಿ ಮತ್ತು ಸಮಯಾವಧಿ ನಿಗದಿಪಡಿಸುವಿಕೆ •ಐಸಿಟಿ ಅಪ್ಲಿಕೇಶನ್‌ಗಳ ಅನುಷ್ಠಾನ •ಪ್ರತಿಯೊಂದು ಇಲಾಖೆಯ ಪ್ರಗತಿಯ ಮೇಲ್ವಿಚಾರಣೆ •ಕೊನೆಯ ಹಂತದವರೆಗೆ ಪ್ರಯೋಜನಗಳನ್ನು ತಲುಪಿಸುವ ಕಡೆಗೆ ಗಮನ •ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣ ಆಯೋಜನೆ •ಗುಣಮಟ್ಟದ ಅಧ್ಯಯನ, ಮತ್ತು •ತಾಂತ್ರಿಕ ಮತ್ತು ಹಣಕಾಸು ನಿರ್ವಹಣಾ ತಂಡಗಳ ಜೊತೆಗೆ ಸಮನ್ವಯ	•ಡಿಬಿಟಿಯ ಅನುಷ್ಠಾನಕ್ಕೆ ತಾಂತ್ರಿಕ ಬೆಂಬಲ ನೀಡುವುದು •ಯೋಜನಾ ನಿರ್ದಿಷ್ಟ ಐಸಿಟಿ ಅಪ್ಲಿಕೇಶನ್‌ಗಳ ಅಭಿವೃದ್ಧಿ •ಎನ್‌ಐಸಿ, ದೂರಸಂವಹನಾ ಸೇವಾದಾರರು ಮುಂತಾದ ಮಾಹಿತಿ ತಂತ್ರಜ್ಞಾನ ಜವಾಬ್ದಾರಸ್ಥರೊಂದಿಗೆ ಸಂಪರ್ಕ ಮತ್ತು ಸಮನ್ವಯ •ಎಮ್‌ಐಎಸ್ ಪೋರ್ಟಲ್‌ನಲ್ಲಿ ಎಲ್ಲ ಯೋಜನೆಗಳ ಸೇರ್ಪಡೆ •ಜೆಎಎಮ್ ಉಪಕ್ರಮವಾಗಿ ಮೊಬೈಲ್ ನಂಬರ್‌ಗಳನ್ನು ದತ್ತಸಂಚಯದಲ್ಲಿ ದಾಖಲಿಸುವುದು	•ಎಲ್ಲ ಯೋಜನೆಗಳಿಗೆ ಹಣದ ಹರಿವು ಮತ್ತು ವಹಿವಾಟಿನ ಹರಿವನ್ನು ನಿರ್ವಹಿಸುವುದು •ಎಲ್ಲ ಜವಾಬ್ದಾರಸ್ಥರಿಗೆ ಅಗತ್ಯವಿರುವ ಎಮ್‌ಐಎಸ್ ಅನ್ನು ಒದಗಿಸುವುದು •ಡಿಬಿಟಿ ವಹಿವಾಟುಗಳನ್ನು ಸಂಸ್ಕರಿಸಲು ಅಗತ್ಯವಿರುವ ಎನ್‌ಪಿಸಿಐ ಪರಿಶೀಲನೆಗಳನ್ನು ಒದಗಿಸುವುದು

1.1.2 ಡಿಬಿಟಿಯ ಜವಾಬ್ದಾರಸ್ಥರು

ಡಿಬಿಟಿಯ ಅನುಷ್ಠಾನವು ಕೆಳಗಿನ ಜವಾಬ್ದಾರಸ್ಥರನ್ನು ಒಳಗೊಂಡಿರುತ್ತದೆ:

- ಸ್ಥಳೀಯ ಬಳಕೆದಾರರ ಇಲಾಖೆಗಳು – ಫಲಾನುಭವಿಗಳನ್ನು ಗುರುತಿಸಿ, ಡಿಬಿಟಿಗಾಗಿ ಪಾವತಿ ಅನುಸೂಚಿ ಫೈಲ್‌ಗಳನ್ನು ಸಿದ್ಧಪಡಿಸಿ ದೃಢೀಕರಣಕ್ಕಾಗಿ ಕೋರ್ ಡಿಬಿಟಿ ಪೋರ್ಟಲ್‌ಗೆ ರವಾನಿಸುವುದು ಮತ್ತು ಪಾವತಿ ಪ್ರತಿಕ್ರಿಯೆ ಫೈಲ್‌ಗಳ ಅನುಸಾರ ತಿದ್ದುಪಡಿಗಳನ್ನು ಮಾಡುವುದು.

- ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ (ಯುಐಡಿಎಐ) – ಕೋರ್ ಡಿಬಿಟಿ ಪೋರ್ಟಲ್ ಯುಐಡಿಎಐ ದತ್ತಾಂಶವನ್ನು ಬಳಸಿಕೊಂಡು ಫಲಾನುಭವಿಗಳ ಗುರುತಿನ ದೃಢೀಕರಣವನ್ನು ಕೈಗೊಳ್ಳುತ್ತದೆ.

- ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್‌ಪಿಸಿಐ) – ಎನ್‌ಪಿಸಿಐ ಮ್ಯಾಪರ್ ಅನ್ನು ಹಣಕಾಸಿನ ವಿಳಾಸದ (ಖಾತೆಯ) ದೃಢೀಕರಣಕ್ಕಾಗಿ ಬಳಸಲಾಗುತ್ತದೆ ಮತ್ತು ಫಲಾನುಭವಿಗಳ ಆಧಾರ್ ಜೋಡಣೆ ಮಾಡಲಾದ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆಗಳನ್ನು ಮಾಡಲು ಬಳಸಲಾಗುತ್ತದೆ.

- ಖಜಾನೆ–2 (ಕೆ2) – ರಾಜ್ಯ ಡಿಬಿಟಿ ಎರಡು ಪಾವತಿ ವಿಧಾನಗಳನ್ನು ಅಳವಡಿಸಿಕೊಂಡಿದೆ – ಕೆ2 ವಿಧಾನ ಮತ್ತು ಬ್ಯಾಂಕ್ ವಿಧಾನ. ಕೆ2 ಪಾವತಿಯ ಅಡಿಯಲ್ಲಿ, ಕೋರ್ ಡಿಬಿಟಿ ಪೋರ್ಟಲ್ ಪಾವತಿ ಫೈಲ್‌ಗಳನ್ನು ಕೆ2 ಪೋರ್ಟಲ್‌ಗೆ ರವಾನಿಸುತ್ತದೆ, ಅದು ಡಿಬಿಟಿ ಪಾವತಿಗಳನ್ನು ಮಾಡಲು ಸಹಕರಿಸುತ್ತದೆ ಮತ್ತು ಪಾವತಿ ಪ್ರತಿಕ್ರಿಯೆ ಫೈಲ್‌ಗಳನ್ನು ಕೋರ್ ಡಿಬಿಟಿ ಪೋರ್ಟಲ್‌ಗೆ ಒದಗಿಸುತ್ತದೆ.
- ಪ್ರಾಯೋಜಿತ ಬ್ಯಾಂಕ್‌ಗಳು ಮತ್ತು ಗಮ್ಯಸ್ಥಾನ ಬ್ಯಾಂಕ್‌ಗಳು – ಪ್ರಾಯೋಜಿತ ಬ್ಯಾಂಕ್‌ಗಳು ಫಲಾನುಭವಿಗಳ ಖಾತೆಗಳಿಗೆ ಜಮಾ ಮಾಡಲು ಗಮ್ಯಸ್ಥಾನದ ಬ್ಯಾಂಕ್‌ಗಳಿಗೆ ಪಾವತಿಗಳನ್ನು ಒದಗಿಸುತ್ತವೆ.
- ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ)–ಕೋರ್ ಡಿಬಿಟಿ ಪೋರ್ಟಲ್‌ನ ತಾಂತ್ರಿಕ ಪಾಲುದಾರ ಮತ್ತು ಬಳಕೆದಾರರ ಇಲಾಖೆಗಳ ಅಪ್ಲಿಕೇಶನ್‌ಗಳ ಪಾಲುದಾರ

1.1.3 ಪ್ರಯೋಜನಗಳ ನೇರ ವರ್ಗಾವಣೆಯ ವರ್ಗಗಳು

ನೇರ ನಗದು ವರ್ಗಾವಣೆಯಲ್ಲಿ ಮೂರು ಮುಖ್ಯ ವಿಧಾನಗಳಿವೆ:

ಎ) ವೈಯಕ್ತಿಕ ಫಲಾನುಭವಿಗೆ ನಗದು ವರ್ಗಾವಣೆ – ಈ ವರ್ಗವು ಸರ್ಕಾರವು ವೈಯಕ್ತಿಕ ಫಲಾನುಭವಿಗಳಿಗೆ ನಗದು ಪ್ರಯೋಜನಗಳನ್ನು ವರ್ಗಾಯಿಸುವ ಯೋಜನೆಗಳು ಅಥವಾ ಯೋಜನೆಗಳ ಘಟಕಗಳನ್ನು ಒಳಗೊಂಡಿರುತ್ತದೆ.

ಬಿ) ವೈಯಕ್ತಿಕ ಫಲಾನುಭವಿಗೆ ವಸ್ತುರೂಪದಲ್ಲಿ ವರ್ಗಾವಣೆ – ಈ ವರ್ಗವು ಮಧ್ಯಂತರ ಸಂಸ್ಥೆಯ ಮೂಲಕ ವ್ಯಕ್ತಿಗಳಿಗೆ ವಸ್ತುರೂಪದಲ್ಲಿ ಪ್ರಯೋಜನಗಳನ್ನು ನೀಡುವ ಯೋಜನೆಗಳು ಅಥವಾ ಯೋಜನೆಗಳ ಘಟಕಗಳನ್ನು ಒಳಗೊಂಡಿರುತ್ತದೆ.

ಸಿ) ಇತರ ವರ್ಗಾವಣೆಗಳು – ಈ ವರ್ಗವು ಸರ್ಕಾರದ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ ಅನುವು ಮಾಡಿಕೊಡುವ ಸಮುದಾಯ ಕಾರ್ಯಕರ್ತರು ಮತ್ತು ಸರ್ಕಾರೇತರ ಸಂಸ್ಥೆಗಳು ಇತ್ಯಾದಿಗಳಿಗೆ ವೇತನ, ಗೌರವಧನ, ಪ್ರೋತ್ಸಾಹಧನ ಇತ್ಯಾದಿಗಳ ರೂಪದಲ್ಲಿ ಮಾಡುವ ವರ್ಗಾವಣೆಗಳನ್ನು ಒಳಗೊಂಡಿರುತ್ತದೆ.

1.2 ಲೆಕ್ಕಪರಿಶೋಧನಾ ಚೌಕಟ್ಟು

1.2.1 ಲೆಕ್ಕಪರಿಶೋಧನಾ ಉದ್ದೇಶಗಳು

ಈ ಕೆಳಗಿನವುಗಳು ಲೆಕ್ಕಪರಿಶೋಧನಾ ಉದ್ದೇಶಗಳಾಗಿದ್ದವು:

- ಮಧ್ಯವರ್ತಿ ಮಟ್ಟಗಳು, ಉದ್ದೇಶಿತ ಫಲಾನುಭವಿಗಳಿಗೆ ಪಾವತಿಗಳಲ್ಲಿ ವಿಳಂಬ, ಸೋರಿಕೆ ಮತ್ತು ದ್ವಿಪಾವತಿ ಇವುಗಳನ್ನು ಕಡಿಮೆ ಮಾಡಲು ಡಿಬಿಟಿಯ ಅನುಷ್ಠಾನಕ್ಕೆ ಅಗತ್ಯವಾದ ಪ್ರಕ್ರಿಯೆಯ ಪುನರ್‌ವ್ಯವಸ್ಥಾಕ್ರಿಯೆಯನ್ನು[2] ಕೈಗೊಳ್ಳಲಾಯಿತೆ; ಮತ್ತು
- ಡಿಬಿಟಿಯ ಮೂಲಸೌಕರ್ಯ, ಸಾಂಸ್ಥಿಕ ರಚನೆ ಮತ್ತು ನಿರ್ವಹಣೆಯು ಸಾಕಷ್ಟಿದ್ದಿತೇ ಮತ್ತು ಪರಿಣಾಮಕಾರಿಯಾಗಿತ್ತೇ.

1.2.2 ಲೆಕ್ಕಪರಿಶೋಧನಾ ಮಾನದಂಡಗಳು

ಈ ಕೆಳಗಿನವುಗಳು ಲೆಕ್ಕಪರಿಶೋಧನಾ ಮಾನದಂಡಗಳಾಗಿದ್ದವು:

- ಸೂಚಿತ ಕಾರ್ಯಾಚರಣೆ ವಿಧಾನ, ಡಿಬಿಟಿ ಮೇಲಿನ ಕೈಪಿಡಿ ಮತ್ತು ಡಿಬಿಟಿ ಮಿಷನ್ ನೀಡಿದ ರಾಜ್ಯ ಡಿಬಿಟಿ ಕೋಶಕ್ಕಾಗಿನ ಮಾರ್ಗಸೂಚಿಗಳು;
- ಫಲಾನುಭವಿಗಳು ಮತ್ತು ಪಾವತಿಗಳ ಗುರುತಿಸುವಿಕೆ ಮತ್ತು ದೃಢೀಕರಣದ ಪ್ರಕ್ರಿಯೆ ಮೇಲಿನ ಯೋಜನಾ ಮಾರ್ಗಸೂಚಿಗಳು;
- ದತ್ತಸಂಚಯ ನಿರ್ವಹಣೆ, ವಿವಿಧ ವರದಿಗಳ ರಚನೆ ಮತ್ತು ಮಾಹಿತಿ ತಂತ್ರಜ್ಞಾನ ನಿಯಂತ್ರಣಗಳಿಗೆ ಸಂಬಂಧಿಸಿದ ಸೂಚನೆಗಳು; ಹಾಗೂ
- ಡಿಬಿಟಿ ಮಿಷನ್, ಕೇಂದ್ರ ಸಚಿವಾಲಯ ಮತ್ತು ರಾಜ್ಯ ಸರ್ಕಾರಗಳಿಂದ ಹೊರಡಿಸಲಾದ ದಾಖಲೆಗಳು, ಸುತ್ತೋಲೆಗಳು, ಆದೇಶಗಳು, ಸೂಚನೆಗಳು ಮತ್ತು ಅಧಿಸೂಚನೆಗಳು.

1.2.3 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

2018–19 ಮತ್ತು 2019–20ರ ಅವಧಿಯನ್ನು ಒಳಗೊಂಡಿರುವ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯು ಆರಂಭದಲ್ಲಿ ಕೋರ್ ಡಿಬಿಟಿ ಪೋರ್ಟಲ್‌ನ[3] ಹಾಗೂ ರಾಜ್ಯ ಡಿಬಿಟಿ ಮೂಲಕ ಅತಿ ಹೆಚ್ಚು ನಗದು ವರ್ಗಾವಣೆಯ ಆಧಾರದ ಮೇಲೆ ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ವಿಜ್ಞಾನ ಇಲಾಖೆಯ ಹಾಲು ಪ್ರೋತ್ಸಾಹಧನ ಯೋಜನೆ ದತ್ತಾಂಶದ (20 ಅಕ್ಟೋಬರ್ 2020ರಲ್ಲಿದ್ದಂತೆ) ವಿಶ್ಲೇಷಣೆಯನ್ನು ಒಳಗೊಂಡಿತ್ತು. ಲೆಕ್ಕಪರಿಶೋಧನಾ ಉದ್ದೇಶಗಳು, ವ್ಯಾಪ್ತಿ ಮತ್ತು ಮಾನದಂಡಗಳನ್ನು ಚರ್ಚಿಸಲು 14 ಸೆಪ್ಟೆಂಬರ್ 2020ರಂದು ಇ–ಆಡಳಿತ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳೊಂದಿಗೆ ಪ್ರವೇಶ ಸಮ್ಮೇಳನವನ್ನು ನಡೆಸಲಾಯಿತು. ಅಪರ ಮುಖ್ಯ ಕಾರ್ಯದರ್ಶಿಗಳ ವಿನಂತಿಯ ಮೇರೆಗೆ, ಕೃಷಿ ಇಲಾಖೆಯ ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ (ಎನ್‌ಎಫ್‌ಎಸ್‌ಎಮ್), ರೈತಸಿರಿ ಮತ್ತು ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಮ್‌ಕೆಎಸ್‌ಎನ್) ಯೋಜನೆಗಳ ದತ್ತಾಂಶ ವಿಶ್ಲೇಷಣೆಯನ್ನು ಒಳಗೊಳ್ಳಲು ಕಾರ್ಯನಿರ್ವಹಣಾ ವ್ಯಾಪ್ತಿಯನ್ನು ವಿಸ್ತರಿಸಲಾಯಿತು. ಪಿಎಮ್‌ಕೆಎಸ್‌ಎನ್ ದತ್ತಾಂಶ ವಿಶ್ಲೇಷಣೆಯನ್ನು ರಾಜ್ಯ ಸರ್ಕಾರದಿಂದ ನಗದು

---

[2] ಡಿಬಿಟಿ ಪ್ರಕ್ರಿಯೆಯಲ್ಲಿ ಮಾಹಿತಿ ತಂತ್ರಜ್ಞಾನ ಪರಿಹಾರಗಳನ್ನು ಅಳವಡಿಸುವುದು ಮತ್ತು ಪಾವತಿ ಕಡತಗಳಲ್ಲಿ ದ್ವಿಪಾವತಿ ತಡೆಯಲು ಹಾಗು ಸಕಾಲದಲ್ಲಿ ಡಿಬಿಟಿ ಪಾವತಿಗಳನ್ನು ಅನುವುಮಾಡಲು, ಗುರುತು ಮತ್ತು ಹಣಕಾಸು ವಿಳಾಸವನ್ನು ದೃಢೀಕರಿಸುವುದಕ್ಕಾಗಿ ಡಿಬಿಟಿ ವ್ಯವಸ್ಥೆಯನ್ನು ಇತರ ಜವಾಬ್ದಾರಸ್ಥ ವ್ಯವಸ್ಥೆಗಳೊಂದಿಗೆ ಜೋಡಿಸುವುದು

[3] ಕೋರ್ ಡಿಬಿಟಿ ಪೋರ್ಟಲ್ ಕೇಂದ್ರೀಕೃತ ಪೋರ್ಟಲ್ ಆಗಿದ್ದು ಅದು ಎಲ್ಲಾ ವಹಿವಾಟುಗಳ ದೃಢೀಕರಣ ಮತ್ತು ದ್ವಿಪಾವತಿ ತಡೆಯನ್ನು ನಿರ್ವಹಿಸುತ್ತದೆ. ಎಲ್ಲಾ ಬಳಕೆದಾರರ ಇಲಾಖೆಗಳು ಅದರ ಮೂಲಕವೇ ವಹಿವಾಟುಗಳನ್ನು ಪ್ರಕ್ರಿಯೆಗೊಳಿಸಬೇಕು.

ವಿತರಣೆಗೆ ಸೀಮಿತಗೊಳಿಸಲಾಯಿತು. ಲೆಕ್ಕಪರಿಶೋಧನಾ ವ್ಯಾಪ್ತಿಯು ಕೋರ್ ಡಿಬಿಟಿ ಮತ್ತು ಕ್ಷೀರಸಿರಿ (ಹಾಲು ಪ್ರೋತ್ಸಾಹಧನ ಯೋಜನೆಗಾಗಿ ಸ್ಥಳೀಯ ಪೋರ್ಟಲ್) ಅಪ್ಲಿಕೇಶನ್‌ಗಳ ಮಾಹಿತಿ ತಂತ್ರಜ್ಞಾನ ಲೆಕ್ಕಪರಿಶೋಧನೆಯನ್ನೂ ಸಹ ಒಳಗೊಂಡಿತ್ತು.

28 ಡಿಸೆಂಬರ್ 2021ರಂದು ನಡೆದ ನಿರ್ಗಮನ ಸಮ್ಮೇಳನದಲ್ಲಿ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಆವಿಷ್ಕಾರಗಳನ್ನು ಅಪರ ಮುಖ್ಯ ಕಾರ್ಯದರ್ಶಿಗಳೊಂದಿಗೆ ಚರ್ಚಿಸಲಾಯಿತು. ರಾಜ್ಯ ಸರ್ಕಾರವು (13 ಡಿಸೆಂಬರ್ 2021 ಮತ್ತು 3 ಜನವರಿ 2022) ಒದಗಿಸಿದ ಉತ್ತರಗಳನ್ನು ಈ ವರದಿಯು ಪರಿಗಣನೆಗೆ ತೆಗೆದುಕೊಂಡಿದೆ.

1.2.4 ಕೃತಜ್ಞತೆ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸುವಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ಡಿಬಿಟಿ ಕೋಶ ಮತ್ತು ಕೆ2 ನೀಡಿದ ಸಹಕಾರವನ್ನು ಲೆಕ್ಕಪರಿಶೋಧನೆಯು ಸ್ಮರಿಸುತ್ತದೆ.

ಅಧ್ಯಾಯ–2

ಡಿಬಿಟಿಯ

ಅನುಷ್ಠಾನ ಮತ್ತು ನಿರ್ವಹಣೆ



ಅಧ್ಯಾಯ-2

ಡಿಬಿಟಿಯ ಅನುಷ್ಠಾನ ಮತ್ತು ನಿರ್ವಹಣೆ

2.1 ಆಯ್ಕೆ ಮಾಡಲಾದ ಯೋಜನೆಗಳ ಅನುಷ್ಠಾನದ ಸ್ಥಿತಿ

ನಾಗರಿಕರಿಗೆ ನಗದು ವರ್ಗಾಯಿಸುವ ಸಲುವಾಗಿ ಎಲ್ಲಾ ಇಲಾಖೆಗಳಿಗೆ ಸಮಗ್ರ ಡಿಬಿಟಿ ವ್ಯವಸ್ಥೆಯ (ಕೋರ್ ಡಿಬಿಟಿ ಪೋರ್ಟಲ್) ಸ್ಥಾಪನೆಗೆ ರಾಜ್ಯ ಸರ್ಕಾರವು ಆದೇಶ ನೀಡಿತು (ಆಗಸ್ಟ್ 2018). 2018–19ರ ಅಂತ್ಯದ ವೇಳೆಗೆ ಎಲ್ಲಾ ಹಣ ವರ್ಗಾವಣೆಗಳಿಗೆ ಇಲಾಖೆಗಳು ಕೇಂದ್ರೀಕೃತ ಕೋರ್ ಡಿಬಿಟಿ ಪೋರ್ಟಲ್ ಅನ್ನು ಕಡ್ಡಾಯವಾಗಿ ಬಳಸಬೇಕಾಗಿತ್ತು. ಅಲ್ಲದೆ, ಕೇಂದ್ರೀಕೃತ ಸಮಗ್ರ ಕೋರ್ ಡಿಬಿಟಿ ಪೋರ್ಟಲ್ ಮೂಲಕ ರಚಿಸಲಾದ ಬಿಲ್ಲುಗಳನ್ನು ಹೊರತುಪಡಿಸಿ ಸಂಬಂಧಿತ ಯೋಜನೆಗಳು/ ಕಾರ್ಯಕ್ರಮಗಳಿಗಾಗಿ ಅಂತಹ ಇಲಾಖೆಗಳ ಯಾವುದೇ ಹಣ ಸೆಳೆಯುವ ಮತ್ತು ಪಾವತಿಸುವ ಅಧಿಕಾರಿಗಳ (ಡಿಡಿಒಗಳು) ಯಾವುದೇ ಇತರ ಬಿಲ್‌ಗಳನ್ನು ಖಜಾನೆ ಸ್ವೀಕರಿಸಬಾರದು.

ಬಳಕೆದಾರರ ಇಲಾಖೆಗಳು ಕೋರ್ ಡಿಬಿಟಿ ಪೋರ್ಟಲ್‌ನ ವ್ಯಾಪ್ತಿಯಲ್ಲಿ ತರಬೇಕಾದ ಯೋಜನೆಗಳನ್ನು ಇನ್ನೂ ಗುರುತಿಸುವ ಪ್ರಕ್ರಿಯೆಯಲ್ಲಿದ್ದವು. ಏಪ್ರಿಲ್ 2021ರಲ್ಲಿದ್ದಂತೆ, 15 ಇಲಾಖೆಗಳು ಜಾರಿಗೊಳಿಸಿದ 239 ಯೋಜನೆಗಳಲ್ಲಿ 83 ಯೋಜನೆಗಳನ್ನು (ಶೇಕಡಾ 35) ಕೋರ್ ಡಿಬಿಟಿ ಪೋರ್ಟಲ್‌ನ ವ್ಯಾಪ್ತಿಗೆ ಒಳಪಡಿಸಲಾಗಿತ್ತು. ಯೋಜನೆಗಳ ವ್ಯಾಪ್ತಿಯ ವರ್ಷವಾರು ಪ್ರಗತಿಯನ್ನು **ಕೋಷ್ಟಕ–2.1**ರಲ್ಲಿ ವಿವರಿಸಲಾಗಿದೆ.

ಕೋಷ್ಟಕ–2.1: ಕೋರ್ ಡಿಬಿಟಿ ಪೋರ್ಟಲ್ ವ್ಯಾಪ್ತಿಗೆ ಒಳಪಡಿಸಲಾದ ಯೋಜನೆಗಳ ಸ್ಥಿತಿ

ಕ್ರಮ ಸಂಖ್ಯೆ	ವರ್ಷ	ಜಾರಿಗೊಳಿಸಲಾದ ಯೋಜನೆಗಳ ಸಂಖ್ಯೆ
1.	2018–19	15
2.	2019–20	39
3.	2020–21	83

ಆಧಾರ: ಡಿಬಿಟಿ ಕೋಶ ಸಲ್ಲಿಸಿದ ಡಿಬಿಟಿ ದತ್ತಾಂಶ

ನಿಧಾನಗತಿಯ ಪ್ರಗತಿಯು 2018–20ರ ಅವಧಿಯಲ್ಲಿ ಡಿಬಿಟಿ ಪೋರ್ಟಲ್‌ನ ಹೊರಗೆ ನಗದನ್ನು ಪಾವತಿಸುವಲ್ಲಿ ಪರಿಣಮಿಸಿತು. ಕೋರ್ ಡಿಬಿಟಿ ಪೋರ್ಟಲ್‌ನ ಹೊರಗೆ ವಿತರಿಸಿದ ನಗದಿನ ಪ್ರಮಾಣವನ್ನು ನಿರ್ಣಯಿಸಲು ಲೆಕ್ಕಪರಿಶೋಧನೆಯು 42 ಇಲಾಖೆಗಳಿಂದ ಮಾಹಿತಿ ಕೇಳಿತು. 22 ಇಲಾಖೆಗಳು ಒದಗಿಸಿದ ಮಾಹಿತಿಯು, 168 ಯೋಜನೆಗಳ ಅಡಿಯಲ್ಲಿ ಕೋರ್ ಡಿಬಿಟಿ ಪೋರ್ಟಲ್‌ನ ಹೊರಗೆ ಒಟ್ಟು ₹2,829.02 ಕೋಟಿ ನಗದನ್ನು ಪಾವತಿಸಲಾಗಿದೆ ಎಂದು ತೋರಿಸಿತು.

ಐಸಿಟಿ ಅಪ್ಲಿಕೇಶನ್‌ಗಳ ಮತ್ತು ಫಲಾನುಭವಿ ದತ್ತಾಂಶದ ಅಂಕೀಕರಣದ ಕೊರತೆಯಿಂದಾಗಿ ಬಳಕೆದಾರರ ಇಲಾಖೆಗಳು ಯೋಜನೆಗಳನ್ನು ವ್ಯಾಪ್ತಿಗೆ ತರುವಲ್ಲಿನ ಪ್ರಗತಿಯು ನಿಧಾನಗತಿಯಲ್ಲಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಡಿಬಿಟಿ ವ್ಯಾಪ್ತಿಯಲ್ಲಿ ಬರುವ ಇಲಾಖೆಗಳು/ಯೋಜನೆಗಳನ್ನು ಗುರುತಿಸುವುದು ಮತ್ತು ಯೋಜನೆಗಳನ್ನು ಸಮಯೋಚಿತವಾಗಿ ವ್ಯಾಪ್ತಿಯಲ್ಲಿ ತರುವುದನ್ನು ಖಚಿತಪಡಿಸುವ ಜವಾಬ್ದಾರಿಯನ್ನು ಕಾರ್ಯಾಚರಣೆ ತಂಡವು

ಹೊಂದಿದ್ದರೂ ಮತ್ತು ಅಂತಹ ಅಪ್ಲಿಕೇಶನ್‌ಗಳು ಲಭ್ಯವಿಲ್ಲದಿದ್ದಲ್ಲಿ, ಯೋಜನಾ-ನಿರ್ದಿಷ್ಟ ಐಸಿಟಿ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಲು ತಾಂತ್ರಿಕ ಗುಂಪು ಜವಾಬ್ದಾರಿಯುತವಾಗಿದ್ದರೂ ಸಹ ಅದನ್ನು ಮಾಡಿರಲಿಲ್ಲ. ತತ್ಪರಿಣಾಮವಾಗಿ, ಈ ಕೆಳಗಿನ ವಿಷಯಗಳಿಗೆ ಡಿಬಿಟಿ ಕೋಶಕ್ಕೆ ಮಾಹಿತಿ ಇರಲಿಲ್ಲ:

- ವ್ಯಾಪ್ತಿಗೆ ತರುವುದಕ್ಕೆ ಗುರುತಿಸಲು ಅಗತ್ಯವಿರುವ ಯೋಜನೆಗಳ ಸಂಖ್ಯೆ;
- ಗುರುತಿಸಿದ ಯೋಜನೆಗಳಿಗೆ ಇಲಾಖೆಗಳಲ್ಲಿ ಐಸಿಟಿ ಮೂಲಸೌಕರ್ಯದ ಲಭ್ಯತೆ; ಮತ್ತು
- ವ್ಯಾಪ್ತಿಗೆ ತರುವುದಕ್ಕೆ ಅಗತ್ಯವಿರುವ ಫಲಾನುಭವಿ ದತ್ತಸಂಚಯದ ಅಂಕೀಕರಣದ ಸ್ಥಿತಿ, ದೃಢೀಕೃತ ಆಧಾರ್ ಸಂಖ್ಯೆಯೊಂದಿಗೆ ಫಲಾನುಭವಿ ದತ್ತಸಂಚಯದ ಜೋಡಣೆ, ಇತ್ಯಾದಿ.

ಹಲವು ಇಲಾಖೆಗಳಲ್ಲಿ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗಳು ಲಭ್ಯವಿಲ್ಲದ ಕಾರಣ ಯೋಜನೆಗಳನ್ನು ವ್ಯಾಪ್ತಿಗೆ ತರುವಲ್ಲಿ ವಿಳಂಬವಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021). ತಂತ್ರಜ್ಞಾನ ಕೌಶಲ್ಯದ ಕೊರತೆಯಿಂದಾಗಿ ಬಳಕೆದಾರರ ಇಲಾಖೆಗಳು ತಮ್ಮದೇ ಆದ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಲಿಲ್ಲ ಎಂದೂ ಸಹ ಸರ್ಕಾರವು ತಿಳಿಸಿತು. ಆದುದರಿಂದ, ಇ-ಆಡಳಿತ ಕೇಂದ್ರವು ಹಲವಾರು ಇಲಾಖಾ ಯೋಜನೆಗಳನ್ನು ವ್ಯಾಪ್ತಿಗೆ ಒಳಪಡಿಸಬಹುದಾದ 'ಸುವಿಧಾ'[4] ಎಂಬ ಮಾರ್ಪಡಿಸಬಹುದಾದ ತಂತ್ರಜ್ಞಾನ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿತು, ಡಿಬಿಟಿ ಕೋಶದ ಕಾರ್ಯಾಚರಣೆ ಮತ್ತು ತಾಂತ್ರಿಕ ಗುಂಪುಗಳು ಡಿಬಿಟಿ ಪೋರ್ಟಲ್‌ನಲ್ಲಿ ಯೋಜನೆಗಳನ್ನು ಸಕಾಲಿಕ ವ್ಯಾಪ್ತಿಗೆ ತರುವಲ್ಲಿ ಇಲಾಖೆಗಳನ್ನು ನಿಭಾಯಿಸಲು ವಿಫಲವಾಗಿವೆ ಎಂಬುದು ವಾಸ್ತವಾಂಶವಾಗಿದೆ.

2.2 ಡಿಬಿಟಿ ಅನುಷ್ಠಾನದ ದಕ್ಷತೆ

ಡಿಬಿಟಿಯ ದಕ್ಷತೆಯನ್ನು ಯಶಸ್ವಿ ವಹಿವಾಟುಗಳ ಪ್ರಮಾಣ ಮತ್ತು ಸೇವೆಗಳ ಸಕಾಲಿಕ ವಿತರಣೆಯನ್ನು ಉಲ್ಲೇಖಿಸಿ ಅಳೆಯಲಾಗುತ್ತದೆ.

2.2.1 ಯಶಸ್ವಿ ವಹಿವಾಟುಗಳು

2018-20ರ[5] ಅವಧಿಯ ಕೋರ್ ಡಿಬಿಟಿ ದತ್ತಾಂಶದ (20 ಅಕ್ಟೋಬರ್ 2020ರಂತೆ) ವಹಿವಾಟಿನ ವಿಶ್ಲೇಷಣೆಯು, **ಕೋಷ್ಟಕ-2.2**ರಲ್ಲಿ ವಿವರಿಸಿದಂತೆ, ಒಟ್ಟಾರೆ ಯಶಸ್ಸಿನ ಪ್ರಮಾಣವು ಶೇಕಡಾ 83 (**ಅನುಬಂಧ-2.1**ರಲ್ಲಿ ವಿವರಿಸಲಾಗಿದೆ) ಮತ್ತು ಪರೀಕ್ಷಾ-ತನಿಖೆ ನಡೆಸಿದ ಯೋಜನೆಗಳಡಿಯಲ್ಲಿ ಶೇಕಡಾ 57ರಿಂದ 97ರ ನಡುವೆ ಇದ್ದಿತು ಎಂದು ತಿಳಿಯಪಡಿಸಿತು.

ಕೋಷ್ಟಕ-2.2: 2018-20ರ ಅವಧಿಯ ವಹಿವಾಟುಗಳ ಸ್ಥಿತಿ

ಕ್ರಮ ಸಂಖ್ಯೆ	ಯೋಜನೆ	ಕೋರ್ ಡಿಬಿಟಿ ಪೋರ್ಟಲ್	ಹಾಲಿನ ಪ್ರೋತ್ಸಾಹಧನ	ರೈತಸಿರಿ (ರಾಜ್ಯ)	ರೈತಸಿರಿ (ಕೇಂದ್ರ)	ಎನ್‌ಎಫ್‌ಎಸ್‌ಎಮ್	ಪಿಎಮ್‌ಕೆಎಸ್‌ಎನ್
1	**ಒಟ್ಟು ವಹಿವಾಟುಗಳು**	2,90,49,520	1,01,33,244	52,054	62,037	1,78,535	78,85,464
2	**ಮೊತ್ತ**	5,883.57	1,198.97	16.08	27.8	60.13	1,577.09
3	**ಯಶಸ್ವಿ ವಹಿವಾಟುಗಳು**	2,40,51,851 (83)	97,88,078 (97)	35,862 (69)	45,309 (73)	1,46,455 (82)	45,28,808 (57)
4	**ಮೊತ್ತ**	4,679.78	1,164.44	10.99	20.47	51.88	905.76
5	**ವಿಫಲ ವಹಿವಾಟುಗಳು**	1,28,705 (<1)	49,419 (<1)	235 (<1)	107 (<1)	410 (<1)	10,083 (<1)

[4] ಸುವಿಧಾ ತಂತ್ರಾಂಶವನ್ನು 25 ನವೆಂಬರ್ 2021ರಿಂದ ಅನುಷ್ಠಾನಗೊಳಿಸಲಾಯಿತು

[5] ಲೆಕ್ಕಪರಿಶೋಧನಾ ಅವಧಿಯಾದ 2018-20ರಲ್ಲಿ ಡಿಬಿಟಿ ಮೂಲಕ ಅನುಷ್ಠಾನಗೊಳಿಸಲಾದ ಆಯ್ದ ಯೋಜನೆಗಳ ಆಧಾರದಲ್ಲಿ 2019-20 ಅವಧಿಗೆ ಹಾಲು ಪ್ರೋತ್ಸಾಹಧನ, ರೈತಸಿರಿ (ಕೇಂದ್ರ ಮತ್ತು ರಾಜ್ಯ) ಮತ್ತು ಪಿಎಮ್‌ಕೆಎಸ್‌ಎನ್ ಮತ್ತು 2018-20 ಅವಧಿಗೆ ಎನ್‌ಎಫ್‌ಎಸ್‌ಎಮ್ ಯೋಜನೆಗಳ ವಿಶ್ಲೇಷಣೆ ಮಾಡಲಾಗಿದೆ.

ಕ್ರಮ ಸಂಖ್ಯೆ	ಯೋಜನೆ	ಕೋರ್ ಡಿಬಿಟಿ ಪೋರ್ಟಲ್	ಹಾಲಿನ ಪ್ರೋತ್ಸಾಹಧನ	ರೈತಸಿರಿ (ರಾಜ್ಯ)	ರೈತಸಿರಿ (ಕೇಂದ್ರ)	ಎನ್‌ಎಫ್‌ಎಸ್‌ಎಮ್	ಪಿಎಮ್‌ಕೆಎಸ್‌ಎನ್
6	**ಮೊತ್ತ**	235.94	6.33	0.05	0.048	0.13	2.01
7	**ಬಾಕಿಯಿರುವ ವಹಿವಾಟುಗಳು**	6,66,949 (2)	1,21,452 (1)	406 (<1)	109 (<1)	389 (<1)	39,491 (<1)
8	**ಮೊತ್ತ**	153.30	10.92	0.12	0.05	0.13	7.89
9	**ತಿರಸ್ಕೃತ ವಹಿವಾಟುಗಳು**	42,02,015 (14)	1,74,295 (2)	15,551 (30)	16,512 (27)	31,281 (18)	33,07,082 (42)
10	**ಮೊತ್ತ**	814.55	17.26	4.9	7.23	7.98	661.41

ವಹಿವಾಟುಗಳು ಸಂಖ್ಯೆಯಲ್ಲಿವೆ, ಮೊತ್ತವು ಕೋಟಿಯಲ್ಲಿದೆ ಮತ್ತು ಆವರಣದಲ್ಲಿರುವ ಅಂಕಿಗಳು ಶೇಕಡಾವಾರನ್ನು ಸೂಚಿಸುತ್ತವೆ.

ಆಧಾರ: ಡಿಬಿಟಿ ಕೋಶ ಸಲ್ಲಿಸಿದ ಡಿಬಿಟಿ ದತ್ತಾಂಶ

ಎಲ್ಲಾ ಯೋಜನೆಗಳಲ್ಲಿ ವಿಫಲವಾದ ವಹಿವಾಟುಗಳ ಪ್ರಮಾಣವು ಶೇಕಡಾ ಒಂದಕ್ಕಿಂತ ಕಡಿಮೆಯಿದ್ದರೆ, ಪರೀಕ್ಷಾ–ತನಿಖೆ ನಡೆಸಿದ ಯೋಜನೆಗಳಲ್ಲಿ ತಿರಸ್ಕೃತ ವಹಿವಾಟುಗಳು ಶೇಕಡಾ ಎರಡರಿಂದ 42ರ ವ್ಯಾಪ್ತಿಯಲ್ಲಿದ್ದವು.

ಇಲಾಖೆಯ ಅಪ್ಲಿಕೇಶನ್‌ನಲ್ಲಿನ ತಾಂತ್ರಿಕ ಸಮಸ್ಯೆಗಳಿಂದಾಗಿ ಹೆಚ್ಚಿನ ಸಂಖ್ಯೆಯ ಪಿಎಮ್‌ಕೆಎಸ್‌ಎನ್ ವಹಿವಾಟುಗಳು ತಿರಸ್ಕೃತಗೊಂಡಿದ್ದವು ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021). ಆದರೆ, ಈ ಸಮಸ್ಯೆಗಳನ್ನು ಸರಿಪಡಿಸಲು ತೆಗೆದುಕೊಂಡಿರುವ ಕ್ರಮದ ವಿವರಗಳನ್ನು ಒದಗಿಸಲಿಲ್ಲ. ಆದ್ದರಿಂದ, ಅಂತಹ ಸಮಸ್ಯೆಗಳನ್ನು ನಿವಾರಿಸಲು ತೆಗೆದುಕೊಂಡ ಪರಿಹಾರ ಕ್ರಮಗಳ ಬಗೆಗೆ ಪ್ರತಿಕ್ರಿಯೆ ನೀಡಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ.

2.2.1.1 ಸೇವೆಗಳ ಸಕಾಲಿಕ ವಿತರಣೆ

ಡಿಬಿಟಿ ಯೋಜನೆಯ ಯಶಸ್ಸಿಗೆ ಸೇವೆಗಳ ಸಮಯೋಚಿತ ವಿತರಣೆಯು ಅತಿಮುಖ್ಯವಾಗಿದೆ. ಸೇವೆಗಳ ವಿತರಣೆಯು, ಕಾಲಕಾಲಕ್ಕೆ ಸೂಚಿಸಿದಂತೆ ಒಟ್ಟಾರೆ ಕಾಲಮಿತಿಯೊಳಗೆ ವಹಿವಾಟುಗಳನ್ನು ಪ್ರಕ್ರಿಯೆಗೊಳಿಸಲು ವಿವಿಧ ಹಂತಗಳನ್ನು ಒಳಗೊಂಡಿರುತ್ತದೆ. ಸೇವೆಗಳನ್ನು ಸಕಾಲದಲ್ಲಿ ವಿತರಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು, ಪ್ರತಿ ಹಂತದಲ್ಲೂ ಸಮಯಾವಧಿಯನ್ನು

ನಿಗದಿಪಡಿಸಬೇಕು ಮತ್ತು ಅದಕ್ಕೆ ಬದ್ಧವಾಗಿರಬೇಕು. ಡಿಬಿಟಿ ಪ್ರಕ್ರಿಯೆಯಲ್ಲಿ ಒಳಗೊಂಡಿರುವ ವಿವಿಧ ವಹಿವಾಟು ಬಿಂದುಗಳನ್ನು ಕೆಳಗೆ ತೋರಿಸಲಾಗಿದೆ. ಡಿಬಿಟಿ ಪ್ರಕ್ರಿಯೆಯ ವಿವರವಾದ ಕಾರ್ಯಹರಿವನ್ನು **ಅನುಬಂಧ–2.2**ರಲ್ಲಿ ನೀಡಲಾಗಿದೆ.

ಇಲಾಖೆಯು ಪಾವತಿ ಅನುಸೂಚಿ ಫೈಲ್‌ಗಳನ್ನು (ವಹಿವಾಟು ದಿನಾಂಕ) ಉತ್ಪಾದಿಸುತ್ತದೆ ಮತ್ತು ಅವುಗಳನ್ನು ದ್ವಿಪಾವತಿ ತಡೆ, ಗುರುತು ದೃಢೀಕರಣಕ್ಕಾಗಿ ಕೋರ್ ಡಿಬಿಟಿ ಪೋರ್ಟಲ್‌ಗೆ ಸಲ್ಲಿಸಲಾಗುತ್ತದೆ ಮತ್ತು ಆಧಾರ್ ಜೋಡಣೆ ಸ್ಥಿತಿಯನ್ನು ಪರಿಶೀಲಿಸಲು ಎನ್‌ಪಿಸಿಐಗೆ ರವಾನಿಸಲಾಗುತ್ತದೆ. ನಂತರ ವಹಿವಾಟನ್ನು ಡಿಡಿಒ ಅನುಮೋದಿಸುತ್ತಾರೆ ಮತ್ತು ಯೋಜನೆಯ

ಪಾವತಿಯ ವಿಧಾನದ[6] ಆಧಾರದ ಮೇಲೆ ಪಾವತಿ ಪ್ರಕ್ರಿಯೆಗಾಗಿ ಕೆ2 ಅಥವಾ ಬ್ಯಾಂಕ್‌ಗೆ ಸಲ್ಲಿಸಲಾಗುತ್ತದೆ.

ಒಂದು ನಿರ್ದಿಷ್ಟ ವಹಿವಾಟನ್ನು ಪೂರ್ಣಗೊಳಿಸಲು ಅಗತ್ಯವಿರುವ ಯಾವುದೇ ಕಾಲಮಿತಿಯನ್ನು ರಾಜ್ಯ ಸರ್ಕಾರವು ಸೂಚಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದ್ದರಿಂದ, ಸರ್ಕಾರದ ಆದೇಶಗಳು ಮತ್ತು ಸೂಚನೆಗಳ ಪ್ರಕಾರ ಡಿಬಿಟಿ ಪಾವತಿಗಳ ಯಶಸ್ಸಿಗೆ ಮಾನದಂಡವಾಗಿರುವ ಸೇವೆಗಳ ಸಕಾಲಿಕ ವಿತರಣೆಯ ಮೇಲೆ ಭರವಸೆ ಪಡೆಯಲು ವಿವಿಧ ಹಂತಗಳಲ್ಲಿ ತೆಗೆದುಕೊಂಡ ಸಮಯವನ್ನು ಲೆಕ್ಕಪರಿಶೋಧನೆಯು ವಿಶ್ಲೇಷಿಸಿತು. ಸ್ಕ್ರೋಲ್/ಅಂತಿಮ ಅನುಮೋದನೆಯ ದಿನಾಂಕದಿಂದ ಕೆ2/ಡಿಬಿಟಿಯಲ್ಲಿ ಪ್ರತಿಕ್ರಿಯೆಯ ಸ್ವೀಕೃತಿಯ ದಿನಾಂಕದವರೆಗೆ ತೆಗೆದುಕೊಂಡ ಸಮಯವನ್ನು ವಿಶ್ಲೇಷಿಸಲು ಪಿಎಫ್ಎಮ್ಎಸ್ ಪಾವತಿಗಳಿಗಾಗಿ ನಿರ್ದಿಷ್ಟಪಡಿಸಲಾದ ಟಿ+4 ದಿನಗಳ ಭಾರತ ಸರ್ಕಾರದ ಮಾನದಂಡವನ್ನು ಲೆಕ್ಕಪರಿಶೋಧನೆಯು ಅಳವಡಿಸಿಕೊಂಡಿತು. ಅಂತೆಯೇ, ವಹಿವಾಟುಗಳನ್ನು ಎರಡು ಹಂತಗಳಾಗಿ ವರ್ಗೀಕರಿಸಲಾಯಿತು – ವಹಿವಾಟಿನ ದಿನಾಂಕದ ಸ್ಕ್ರೋಲ್/ಅಂತಿಮ ಅನುಮೋದನೆ (ಹಂತ–1) ಮತ್ತು ಬ್ಯಾಂಕ್ ಪಾವತಿ ಪ್ರತಿಕ್ರಿಯೆಯ ಸ್ವೀಕೃತಿಗೆ ಸ್ಕ್ರೋಲ್/ಅಂತಿಮ ಅನುಮೋದನೆ (ಹಂತ–2).

ಯಶಸ್ವಿ ವಹಿವಾಟುಗಳ ಲೆಕ್ಕಪರಿಶೋಧನಾ ವಿಶ್ಲೇಷಣೆಯು, ಸಂಪೂರ್ಣ ಪ್ರಕ್ರಿಯೆಗೆ ತೆಗೆದುಕೊಂಡ ಸರಾಸರಿ ಸಮಯಾವಧಿ 45 ದಿನಗಳು ಮತ್ತು ಹಂತ–1 ಮತ್ತು ಹಂತ–2ರ ಅಡಿಯಲ್ಲಿ ತೆಗೆದುಕೊಂಡ ಸಮಯಾವಧಿ ಕ್ರಮವಾಗಿ 41 ದಿನಗಳು ಮತ್ತು 4 ದಿನಗಳು ಎಂದು ತೋರಿಸಿತು. ಪ್ರತಿ ವಹಿವಾಟಿನ ಹಂತದಲ್ಲಿ ತೆಗೆದುಕೊಂಡ ಸಮಯವನ್ನು **ಕೋಷ್ಟಕ–2.3**ರಲ್ಲಿ ನೀಡಲಾಗಿದೆ. ವಾಸ್ತವಿಕ ಸಮಯದ ವಿವರಗಳನ್ನು **ಅನುಬಂಧ–2.3**ರಲ್ಲಿ ನೀಡಲಾಗಿದೆ.

ಕೋಷ್ಟಕ–2.3: ಪ್ರತಿ ವಹಿವಾಟಿಗೆ ತೆಗೆದುಕೊಂಡ ಸಮಯದ ಪ್ರಮಾಣ ತೋರಿಸುವ ತಃಖ್ತೆ

ಕ್ರಮ ಸಂಖ್ಯೆ	ಹಂತ	ವಹಿವಾಟು ಹಂತ	ತೆಗೆದುಕೊಂಡ ಸರಾಸರಿ ಸಮಯ (ದಿನಗಳು)	ವಾಸ್ತವಿಕವಾಗಿ ತೆಗೆದುಕೊಂಡ ಸಮಯದ ವ್ಯಾಪ್ತಿ ದಿನಗಳಲ್ಲಿ	ಲೆಕ್ಕಪರಿಶೋಧನಾ ಷರಾ
1	ಹಂತ–1	ಎನ್‌ಪಿಸಿಐ ಪರಿಶೀಲನೆ	1	0–61	ಶೇಕಡಾ 60ರಷ್ಟು ವಹಿವಾಟುಗಳನ್ನು ಒಂದೇ ದಿನದಲ್ಲಿ ಸಂಸ್ಕರಿಸಲಾಗಿದೆ.
2		ಡಿಡಿಒ ಅನುಮೋದನೆ	25	0–274	ಶೇಕಡಾ 17ರಷ್ಟು ವಹಿವಾಟುಗಳನ್ನು ಒಂದೇ ದಿನದಲ್ಲಿ ಸಂಸ್ಕರಿಸಬಹುದು
3		ಸ್ಕ್ರಾಲ್/ಅಂತಿಮ ಅನುಮೋದನೆ[7] -ಕೆ2 ವಿಧಾನ	23	1–187	ಕೇವಲ ಶೇಕಡಾ 0.01ರಷ್ಟು ವಹಿವಾಟುಗಳನ್ನು ಒಂದೇ ದಿನದಲ್ಲಿ ಮತ್ತು ಶೇಕಡಾ 18ರಷ್ಟು ವಹಿವಾಟುಗಳನ್ನು ಏಳು ದಿನಗಳಲ್ಲಿ ಸಂಸ್ಕರಿಸಬಹುದು.
		- ಬ್ಯಾಂಕ್ ವಿಧಾನ	12	0–268	ಶೇಕಡಾ 28ರಷ್ಟು ವಹಿವಾಟುಗಳನ್ನು ಒಂದೇ ದಿನದಲ್ಲಿ ಸಂಸ್ಕರಿಸಲಾಗಿದೆ
4	ಹಂತ–2 ಪಿಎಫ್ಎಮ್ಎಸ್	ಕೆ2/ಬ್ಯಾಂಕ್ ಪಾವತಿ	3	0–248	ಪಿಎಫ್ಎಮ್ಎಸ್ ಪ್ರಕಾರ (ಟಿ+3) ಶೇಕಡಾ 83ರಷ್ಟು ವಹಿವಾಟುಗಳನ್ನು 3

[6] ಡಿಬಿಟಿಯಲ್ಲಿ ಎರಡು ಪಾವತಿ ವಿಧಾನಗಳಿವೆ – ಕೆ2 ವಿಧಾನ ಮತ್ತು ಪ್ರಾಯೋಜಕ ಬ್ಯಾಂಕ್ ವಿಧಾನ (ಎಸ್‌ಬಿಐ). ಕೆ2 ಮತ್ತು ಬ್ಯಾಂಕ್ ಪಾವತಿ ವಿಧಾನಗಳೆರಡೂ ಫಲಾನುಭವಿಗಳ ಆಧಾರ್ ಜೋಡಿತ ಬ್ಯಾಂಕ್ ಖಾತೆಗಳಿಗಾಗಿವೆ.

[7] ಕೆ2 ಪಾವತಿ ವಿಧಾನದಲ್ಲಿ ಸ್ಕ್ರೋಲ್ ಅನುಮೋದನೆ ಮತ್ತು ಬ್ಯಾಂಕ್ ಪಾವತಿ ವಿಧಾನದಲ್ಲಿ ಅಂತಿಮ ಅನುಮೋದನೆ

ಕ್ರಮ ಸಂಖ್ಯೆ	ಹಂತ	ವಹಿವಾಟು ಹಂತ	ತೆಗೆದುಕೊಂಡ ಸರಾಸರಿ ಸಮಯ (ದಿನಗಳು)	ವಾಸ್ತವಿಕವಾಗಿ ತೆಗೆದುಕೊಂಡ ಸಮಯದ ವ್ಯಾಪ್ತಿ ದಿನಗಳಲ್ಲಿ	ಲೆಕ್ಕಪರಿಶೋಧನಾ ಷರಾ
	ಟಿ+4 ದಿನಗಳು				ದಿನಗಳೊಳಗೆ ಸಂಸ್ಕರಿಸಬಹುದು
5		ಎಸ್‌ಬಿಐನಿಂದ ಕೆ2ಗೆ ಪ್ರತಿಕ್ರಿಯೆಯ ಚಲನೆ	1	0–361	ಪಿಎಫ್‌ಎಮ್‌ಎಸ್ ಪ್ರಕಾರ 1 ದಿನ. ಶೇಕಡಾ 61ರಷ್ಟು ವಹಿವಾಟುಗಳನ್ನು ಅದೇ ದಿನದಲ್ಲಿ ಸಂಸ್ಕರಿಸಬಹುದು

ಆಧಾರ: ಡಿಬಿಟಿ ಕೋಶ ಒದಗಿಸಿದ ದತ್ತಾಂಶಗುಚ್ಛ

ವಿವರವಾದ ವಿಶ್ಲೇಷಣೆಯು, ಕೆ2ನಲ್ಲಿ ಸ್ಕ್ರೋಲ್/ಅಂತಿಮ ಅನುಮೋದನೆಯ ಹಂತದಲ್ಲಿ (ಶೇಕಡಾ 75) ಮತ್ತು ತದನಂತರ ಡಿಡಿಒ ಅನುಮೋದನೆ ಹಂತದಲ್ಲಿ (ಶೇಕಡಾ 13) ಹೆಚ್ಚು ವಿಳಂಬವಾಗಿರುವುದನ್ನು ತಿಳಿಯಪಡಿಸಿತು. ಎರಡೂ ಸಂದರ್ಭಗಳಲ್ಲಿ ಪ್ರಕ್ರಿಯೆಗೊಳಿಸಿದ ಪಾವತಿ ಫೈಲ್‌ಗಳಿಗೆ ಅನುಮೋದನೆ ನೀಡುವ ಜವಾಬ್ದಾರಿಯು ಇಲಾಖೆಗಳ ಮೇಲಿದ್ದಿತು. ನಿರ್ದಿಷ್ಟ ಸಮಯಾವಧಿಯನ್ನು ಸೂಚಿಸುವಲ್ಲಿನ ರಾಜ್ಯ ಸರ್ಕಾರದ ವಿಫಲತೆ ಮತ್ತು ಬಳಕೆದಾರರ ಇಲಾಖೆಗಳು ಸಮಯೋಚಿತ ಕ್ರಮವನ್ನು ಕೈಗೊಳ್ಳದಿರುವುದು ಸೇವೆಗಳ ವಿಳಂಬದ ವಿತರಣೆಯಲ್ಲಿ ಪರಿಣಮಿಸಿತು ಮತ್ತು ಡಿಬಿಟಿ ಅನುಷ್ಠಾನದ ಉದ್ದೇಶವನ್ನು ವಿಫಲಗೊಳಿಸಿತು.

ಆರಂಭದಲ್ಲಿ ಎನ್‌ಪಿಸಿಐ ಪರಿಶೀಲನೆಗಳಲ್ಲಿ ಸಮಸ್ಯೆಗಳಿದ್ದು ಅದನ್ನು ನಂತರ ಪರಿಹರಿಸಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021). ಇತರ ವಹಿವಾಟು ಹಂತಗಳಲ್ಲಿ ವಿಳಂಬಕ್ಕೆ ಕಾರಣಗಳನ್ನು ಒದಗಿಸಲಿಲ್ಲ.

2.2.1.2 ತಪ್ಪಾದ ಖಾತೆಗಳಿಗೆ ಜಮೆ

ಫಲಾನುಭವಿಗಳು ತಮ್ಮ ಬ್ಯಾಂಕ್ ಖಾತೆಗಳನ್ನು ಆಧಾರ್‌ನೊಂದಿಗೆ ಜೋಡಣೆ ಮಾಡಿದಾಗ ಮಾತ್ರ ಡಿಬಿಟಿ ಮೂಲಕ ಪ್ರಯೋಜನಗಳನ್ನು ಪಡೆಯಲು ಅರ್ಹರಾಗುತ್ತಾರೆ. ಆಧಾರ್ ಸಂಖ್ಯೆಯನ್ನು ತಪ್ಪಾದ ಖಾತೆಗೆ ಹೊಂದಿಕೆ ಮಾಡಿದಾಗ ತಪ್ಪಾದ ಖಾತೆಗಳಿಗೆ ಜಮೆಗಳು ಸಂಭವಿಸುತ್ತವೆ. ತಪ್ಪಾದ ಹೊಂದಿಕೆ ಮಾಡುವುದು ಬ್ಯಾಂಕ್ ಮಟ್ಟದಲ್ಲಿ ಸಂಭವಿಸುತ್ತದೆ ಮತ್ತು ಹಾಗಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗಳೊಂದಿಗೆ ಆಧಾರ್ ಅನ್ನು ಜೋಡಣೆ ಮಾಡುವಾಗ ಬ್ಯಾಂಕುಗಳು ಹೆಚ್ಚಿನ ಕಾಳಜಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಹಾಗಾಗಿ, ಇಂತಹ ತಪ್ಪು ಜಮೆಗಳನ್ನು ಮಾಡಿದಾಗ ಮೂಲ ಇಲಾಖೆಗಳಿಗೆ ಹಣ ಹಿಂದಿರುಗಿಸಲು ಬ್ಯಾಂಕುಗಳು ಜವಾಬ್ದಾರರಾಗಿರುತ್ತವೆ. ನಿರ್ದಿಷ್ಟ ಆಧಾರ್ ಸಂಖ್ಯೆಯನ್ನು ಬ್ಯಾಂಕ್ ಖಾತೆಗೆ ಜೋಡಣೆ ಮಾಡಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಎನ್‌ಪಿಸಿಐ ಒದಗಿಸಿರುವ ಜಾಲತಾಣವು ತಿಳಿಯಪಡಿಸುತ್ತದೆ. ಆದರೆ, ಈ ಜಾಲತಾಣದಲ್ಲಿ ಬ್ಯಾಂಕ್ ಹೆಸರನ್ನು ಕಾಣದಂತೆ ಮಾಡಲಾಗಿರುತ್ತದೆ. ತತ್ಪರಿಣಾಮವಾಗಿ, ಇಲಾಖೆ ಸೂಚಿಸಿದಂತೆ ಬ್ಯಾಂಕ್ ಖಾತೆಗೆ ಆಧಾರ್ ಅನ್ನು ಜೋಡಣೆ ಮಾಡಲಾಗಿದೆಯೇ ಎಂಬುದನ್ನು ಡಿಬಿಟಿ ವ್ಯವಸ್ಥೆಯು ಖಚಿಪಡಿಸಿಕೊಳ್ಳಲು ಆಗುವುದಿಲ್ಲ. ಫಲಾನುಭವಿಗಳು ನಗದನ್ನು ಪಡೆದಿಲ್ಲ ಎಂದು ದೂರು ನೀಡಿದಾಗ ಮಾತ್ರ ಜೋಡಣೆ ದೋಷವು ತಿಳಿಯುತ್ತದೆ.

ಫಲಾನುಭವಿಗಳಿಗೆ ಒಟ್ಟು ₹12.95 ಲಕ್ಷ ಹಣವು ಜಮಾ ಆಗದಿರುವ ಬಗ್ಗೆ ಡಿಬಿಟಿ ಕೋಶವು ಇಲಾಖೆಗಳ ಮೂಲಕ ಫಲಾನುಭವಿಗಳಿಂದ 21 ದೂರುಗಳನ್ನು ಸ್ವೀಕರಿಸಿರುವುದನ್ನು (ಫೆಬ್ರವರಿಯಿಂದ ಅಕ್ಟೋಬರ್ 2020) ಲೆಕ್ಕಪರಿಶೋಧನೆಯು ಗಮನಿಸಿತು. ಇವುಗಳನ್ನು ತಪ್ಪಾದ ಖಾತೆಗಳಿಗೆ ಜಮಾ ಮಾಡಲಾಗಿತ್ತು. ಈ ಪ್ರಕರಣಗಳಲ್ಲಿ ತೆಗೆದುಕೊಂಡ ಕ್ರಮಗಳ ಬಗ್ಗೆ ತಿಳಿದುಬರಲಿಲ್ಲ.

ಅಂತಹ ದೋಷಗಳನ್ನು ತೋರಿಸಲು ಡಿಬಿಟಿ ಪೋರ್ಟಲ್ ಮತ್ತು ಬ್ಯಾಂಕ್ ಮಟ್ಟದಲ್ಲಿ ಯಾವುದೇ ದೃಢೀಕರಣ ಪರಿಶೀಲನೆಗಳು ಇರಲಿಲ್ಲವಾಗಿ ಅದು ವಿಫಲ ಪಾವತಿಗಳಲ್ಲಿ ಪರಿಣಮಿಸಿತು. ಹಾಗಿದ್ದಾಗ್ಯೂ, ಕೆ2/ಬ್ಯಾಂಕ್‌ನಿಂದ ಪಾವತಿ ಫೈಲ್ ಅನ್ನು ಸ್ವೀಕರಿಸಿದ ನಂತರ 'ಹೆಸರು ಹೊಂದಾಣಿಕೆ ಅಂಕ' ಎಂದು ಕರೆಯಲ್ಪಡುವ ಪರಿಶೀಲನೆಯನ್ನು ಡಿಬಿಟಿ ಕೈಗೊಳ್ಳುವ ವ್ಯವಸ್ಥೆಯು ಅಸ್ತಿತ್ವದಲ್ಲಿದೆ. ಹೆಸರು ಹೊಂದಾಣಿಕೆ ಅಂಕ ಎನ್ನುವುದು ಆಧಾರ್ ಪ್ರಕಾರ ಫಲಾನುಭವಿಯ ಹೆಸರನ್ನು, ವಾಸ್ತವವಾಗಿ ಖಾತೆಗೆ ಜಮಾ ಮಾಡಲಾದ ವ್ಯಕ್ತಿಯ ಹೆಸರಿನೊಂದಿಗೆ ಹೋಲಿಸಿದಾಗ ವಹಿವಾಟಿಗೆ (0 ರಿಂದ 100 ರವರೆಗೆ) ನಿಗದಿಪಡಿಸಿದ ಸ್ಕೋರ್ ಆಗಿದೆ. ಈ ಸ್ಕೋರ್ ಸಿ-ಡಿಎಸಿ, ಬೆಂಗಳೂರು ರೂಪಿಸಿದ ಕ್ರಮಾವಳಿಯನ್ನು ಆಧರಿಸಿದೆ. ಈ ಸ್ಕೋರಿಂಗ್ ಪ್ರಕ್ರಿಯೆಯಲ್ಲಿನ ನ್ಯೂನತೆಗಳನ್ನು ಕಂಡಿಕೆ-2.3.4ರಲ್ಲಿ ವಿವರಿಸಲಾಗಿದೆ.

ಸ್ಕೋರ್ 0 ಯಿಂದ 20ರ ನಡುವೆ ಇರುವ ವಹಿವಾಟುಗಳನ್ನು ಲೆಕ್ಕಪರಿಶೋಧನೆಯು ವಿಶ್ಲೇಷಿಸಿತು, ಏಕೆಂದರೆ ಅಂತಹ ಸಂದರ್ಭಗಳಲ್ಲಿ ತಪ್ಪು ಫಲಾನುಭವಿಗೆ ಪ್ರಯೋಜನಗಳು ಲಭ್ಯವಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ. ವಿವರಗಳು ಕೆಳಕಂಡಂತಿವೆ:

- ಹೊಂದಾಣಿಕೆಯನ್ನು ಹಸ್ತಚಾಲಿತವಾಗಿ ನಿರ್ವಹಿಸಬೇಕಾಗಿದ್ದ ಕಾರಣ, ಹಾಲು ಪ್ರೋತ್ಸಾಹಧನ ಯೋಜನೆಯಡಿಯಲ್ಲಿ ಒಟ್ಟು 1,22,653 ವಹಿವಾಟುಗಳಲ್ಲಿ (₹14.52 ಕೋಟಿ ಮೌಲ್ಯದ) ಶೇಕಡಾ 45ರಷ್ಟು ವಿಶ್ಲೇಷಿಸಲಾಯಿತು. 2,499 ಪ್ರಕರಣಗಳಲ್ಲಿ ಒಟ್ಟು ₹30.59 ಲಕ್ಷ ಮೊತ್ತವನ್ನು ವಾಸ್ತವಿಕ ಫಲಾನುಭವಿಯನ್ನು ಬಿಟ್ಟು ಇತರರಿಗೆ ಜಮಾ ಮಾಡಿರುವುದನ್ನು ಗಮನಿಸಲಾಯಿತು.
- ಕೋರ್ ಡಿಬಿಟಿ ಪೋರ್ಟಲ್ ಅಡಿಯಲ್ಲಿ ವಿಶ್ಲೇಷಿಸಲಾದ 50,000 ಯಾದೃಚ್ಛಿಕ ಪ್ರಕರಣಗಳಲ್ಲಿ, ₹97.14 ಲಕ್ಷ ಮೊತ್ತದ 523 ಪ್ರಕರಣಗಳಲ್ಲಿ ತಪ್ಪಾದ ಜಮೆಗಳನ್ನು ಗಮನಿಸಲಾಯಿತು.

ಈ ತಪ್ಪಾದ ಜಮೆಗಳನ್ನು ಡಿಬಿಟಿ ಪೋರ್ಟಲ್‌ನಲ್ಲಿ ಯಶಸ್ವಿ ವಹಿವಾಟುಗಳೆಂದು ತೋರಿಸಿರುವುದು ಅವುಗಳ ತಿದ್ದುಪಡಿ ಮತ್ತು ಕುಂದುಕೊರತೆ ಪರಿಹಾರವನ್ನು ಸಂಕೀರ್ಣಗೊಳಿಸುತ್ತದೆ ಎಂಬುದನ್ನು ತಿಳಿಸುವುದು ಇಲ್ಲಿ ಸೂಕ್ತವಾಗಿದೆ. ವಹಿವಾಟುಗಳನ್ನು ಸರಿಪಡಿಸುವ ಮೊದಲು ತಪ್ಪಾಗಿ ಜಮೆಯಾದ ಖಾತೆಯ ಫಲಾನುಭವಿಗಳು ಹಣವನ್ನು ಸೆಳೆದುಕೊಂಡಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ.

ಸತತ ಪ್ರಯತ್ನಗಳ ಪರಿಣಾಮವಾಗಿ, ಎನ್‌ಪಿಸಿಐ ಬ್ಯಾಂಕ್ ಹೆಸರನ್ನು ತೋರಿಸುವ ಒಂದು ವೆಬ್-ಸೇವೆಯನ್ನು ಈಗ ಒದಗಿಸಿದೆ ಮತ್ತು ಇಲಾಖಾ ಅಪ್ಲಿಕೇಶನ್‌ಗೆ ಅದನ್ನು ಪ್ರತಿಕ್ರಿಯೆಯಾಗಿ ಕಳುಹಿಸಲಾಗುತ್ತಿದೆಯೆಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021). ಪಾವತಿ ಫೈಲ್ ಪ್ರತಿಕ್ರಿಯೆಯ ಭಾಗವಾಗಿ ಡಿಬಿಟಿ ಸೆಲ್ ಇಲಾಖೆಯೊಂದಿಗೆ ಹೆಸರು ಹೊಂದಾಣಿಕೆ ಅಂಕ ಅನ್ನು ಹಂಚಿಕೊಳ್ಳುತ್ತದೆ ಮತ್ತು ಅದನ್ನು ಸರಿಯಾದ ಫಲಾನುಭವಿ ಖಾತೆಗೆ ಪಾವತಿ ಮಾಡಲಾಗಿದೆಯೇ ಎಂಬುದನ್ನು ಪರಿಶೀಲಿಸಲು ಇಲಾಖೆಯು ಅದನ್ನು ಬಳಸಬೇಕಾಗಿದೆ ಎಂದೂ ಸಹ ಸರ್ಕಾರವು ತಿಳಿಸಿತು. ಇಲಾಖಾ ಅಪ್ಲಿಕೇಶನ್‌ಗಳು ಈ ಮಾಹಿತಿಯನ್ನು ಬಳಸದ ಕಾರಣ, ಡಿಬಿಟಿಯು ಈಗ ಡಿಬಿಟಿ ಪೋರ್ಟಲ್‌ನಲ್ಲಿ ಇಲಾಖಾ ಅಧಿಕಾರಿಯವರಿಗೆ ಲಭ್ಯವಿರುವ 'ಪಾವತಿಯ ನಂತರ ಹೆಸರು ಹೊಂದಾಣಿಕೆಯ ಸ್ಕೋರ್ ವರದಿ' ಎಂಬ ವರದಿಯನ್ನು ಪ್ರಕಟಿಸುತ್ತಿದೆ. ಬಳಕೆದಾರ ಇಲಾಖೆಯು ವರದಿಯನ್ನು ವೀಕ್ಷಿಸಿ ಸರಿಪಡಿಸುವ ಕ್ರಮ ಕೈಗೊಳ್ಳಬೇಕಿದೆ.

ಪರಿಹಾರ ಕ್ರಮ ಕೈಗೊಳ್ಳುವಲ್ಲಿ ಇಲಾಖೆ ವಿಫಲವಾಗಿರುವುದು ಉತ್ತರದಿಂದ ಸ್ಪಷ್ಟವಾಗಿದೆ. ತಪ್ಪಾದ ಜಮೆಗಳನ್ನು ಸರಿಪಡಿಸಲು ಮತ್ತು ಸರಿಯಾದ ಫಲಾನುಭವಿಗಳಿಗೆ ಪ್ರಯೋಜನಗಳನ್ನು ನೀಡಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ತೆಗೆದುಕೊಂಡ ಕ್ರಮವನ್ನು ಉತ್ತರವು ಸೂಚಿಸುವುದಿಲ್ಲ.

2.2.2 ವಿಫಲ ವಹಿವಾಟುಗಳು

ಕೋಷ್ಟಕ 2.2ರಲ್ಲಿ ಗಮನಿಸಿದಂತೆ ₹235.94 ಕೋಟಿ ಮೌಲ್ಯದ 1,28,705 ವಹಿವಾಟುಗಳಿಗೆ ಸಂಬಂಧಿಸಿದಂತೆ ಫಲಾನುಭವಿಗಳಿಗೆ ಪಾವತಿಗಳನ್ನು ಮಾಡಲಾಗಿಲ್ಲ. ವೈಫಲ್ಯಕ್ಕೆ ದಾಖಲಾದ ಕಾರಣಗಳನ್ನು **ಅನುಬಂಧ–2.4**ರಲ್ಲಿ ನೀಡಲಾಗಿದೆ.

ಅಮಾನ್ಯವಾದ ಬ್ಯಾಂಕ್ ಗುರುತಿಸುವಿಕೆ, ನಿಷ್ಕ್ರಿಯವಾದ ಆಧಾರ್ ಜೋಡಣೆ, ನಿರ್ಬಂಧಿತ ಅಥವಾ ನಿಷ್ಕ್ರಿಯವಾದ ಖಾತೆ ಮತ್ತು ಆಧಾರ್ ಸಂಖ್ಯೆಯನ್ನು ಖಾತೆ ಸಂಖ್ಯೆಗೆ ಹೊಂದಾಣಿಕೆ ಮಾಡದಿರುವುದು ಪರೀಕ್ಷಾ–ತನಿಖೆ ನಡೆಸಿದ ಯೋಜನೆಗಳಡಿಯಲ್ಲಿ ವಿಫಲವಾದ ವಹಿವಾಟುಗಳಿಗೆ ಪ್ರಮುಖ ಕಾರಣಗಳಾಗಿದ್ದವು. ಬ್ಯಾಂಕ್ ಖಾತೆಗಳೊಂದಿಗೆ ಆಧಾರ್ ಜೋಡಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಸುಗಮಗೊಳಿಸಲು ಇಲಾಖೆಗಳು ಜವಾಬ್ದಾರರಾಗಿದ್ದರೂ, ಅಗತ್ಯ ಜೋಡಣೆಯನ್ನು ಖಚಿತಪಡಿಸಿಕೊಳ್ಳಲು ಅವುಗಳು ವಿಫಲವಾಗಿದ್ದು, ನಗದನ್ನು ವಿತರಿಸದಿರುವಲ್ಲಿ ಮತ್ತು ಅರ್ಹ ಫಲಾನುಭವಿಗಳಿಗೆ ನಷ್ಟ ಉಂಟಾಗುವಲ್ಲಿ ಪರಿಣಮಿಸಿತು.

2018–19 ಮತ್ತು 2019–20ರ ಅವಧಿಯಲ್ಲಿನ ವಿಫಲ ವಹಿವಾಟುಗಳನ್ನು ಮರು–ಪ್ರಕ್ರಿಯೆಗೊಳಿಸಲು ಸಾಧ್ಯವಾಗಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದರೆ, ವಹಿವಾಟುಗಳನ್ನು ಮರು–ಪ್ರಕ್ರಿಯೆಗೊಳಿಸದಿರಲು ಕಾರಣಗಳನ್ನು ಒದಗಿಸಲಾಗಿಲ್ಲ.

ವೈಫಲ್ಯದ ದಿನಾಂಕದಿಂದ 30 ದಿನಗಳು ಕಳೆದರೂ ಸಹ 91,283 ವಹಿವಾಟುಗಳು ಮರು–ಪ್ರಕ್ರಿಯೆಗೆ ಕಾಯುತ್ತಿವೆ ಮತ್ತು ₹211.30 ಕೋಟಿ ಮೊತ್ತದ 36,824 ವಹಿವಾಟುಗಳಿಗೆ (ಶೇಕಡಾ 29) ಸಂಬಂಧಿಸಿದಂತೆ, **ನಕ್ಷೆ–2.1**ರಲ್ಲಿ ಸೂಚಿಸಿದಂತೆ, ವಹಿವಾಟಿನ ದಿನಾಂಕವನ್ನು ಕೋರ್ ಡಿಬಿಟಿ ಪೋರ್ಟಲ್‌ನಲ್ಲಿ ದಾಖಲಿಸಲಾಗಿಲ್ಲ ಎಂದು ವಯೋಮಾನ ವಿಶ್ಲೇಷಣೆಯು ತಿಳಿಯಪಡಿಸಿತು.

ನಕ್ಷೆ–2.1: ಮರು–ಪ್ರಕ್ರಿಯೆಗೆ ಕಾಯುತ್ತಿರುವ ವಿಫಲ ವಹಿವಾಟುಗಳ ವಯೋಮಾನ ವಿಶ್ಲೇಷಣೆ



66,494 ವಹಿವಾಟುಗಳಲ್ಲಿ (ಶೇಕಡಾ 52), ಬ್ಯಾಂಕ್ ವಿವರಗಳನ್ನು ದಾಖಲಿಸಲಾಗಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಉಳಿದ ಶೇಕಡಾ 48 ಪ್ರಕರಣಗಳಲ್ಲಿ, ಶೇಕಡಾ 32ರಷ್ಟು ವಿಫಲ ವಹಿವಾಟುಗಳು ಸಹಕಾರಿ ಬ್ಯಾಂಕ್‌ಗಳಿಗೆ ಸಂಬಂಧಿಸಿದ್ದಾಗಿದ್ದವು. ಅಗತ್ಯವಿರುವ ಎಲ್ಲಾ ವಿವರಗಳನ್ನು ದಾಖಲಿಸಲು ಮತ್ತು ಆಧಾರ್‌ನ ಸರಿಯಾದ ಜೋಡಣೆಯನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಕಾರ್ಯವಿಧಾನವನ್ನು ಸ್ಥಾಪಿಸುವ ಅಗತ್ಯವನ್ನು ಇದು ಸ್ಪಷ್ಟವಾಗಿ ಹೇಳುತ್ತದೆ.

ಡಿಬಿಟಿ ವ್ಯವಸ್ಥೆಯು ವಿಫಲವಾದ ಪಾವತಿಗಳನ್ನು ಮರು–ಪ್ರಕ್ರಿಯೆಗೊಳಿಸುವ ಸೌಲಭ್ಯವನ್ನು ಒದಗಿಸಿದೆ ಮತ್ತು ಪಾವತಿ ವಿಫಲವಾಗುವುದಕ್ಕೆ ಕಾರಣವಾದ ಸಮಸ್ಯೆಯನ್ನು ಸರಿಪಡಿಸಿದ ನಂತರ ಪಾವತಿಗಾಗಿ ಇಲಾಖಾ ಅಪ್ಲಿಕೇಶನ್‌ಗಳು ದತ್ತಾಂಶವನ್ನು ಡಿಬಿಟಿಗೆ ಕಳುಹಿಸಬೇಕಿತ್ತು ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ಡಿಸೆಂಬರ್ 2021). ಆದರೆ, ವಿಫಲವಾದ ವಹಿವಾಟುಗಳನ್ನು ಮರು–ಪ್ರಕ್ರಿಯೆಗೊಳಿಸಲು ತೆಗೆದುಕೊಂಡ ಸರಿಪಡಿಸುವ ಕ್ರಮ ಮತ್ತು ಆ ವಹಿವಾಟಿನ ಪ್ರಸ್ತುತ ಸ್ಥಿತಿಯನ್ನು ಉತ್ತರದಲ್ಲಿ ಸೂಚಿಸಿಲ್ಲ.

2.2.3 ಬಾಕಿ ಉಳಿದಿರುವ ವಹಿವಾಟುಗಳು

ಕೋಷ್ಟಕ-2.2ರ ಪ್ರಕಾರ, ಒಟ್ಟು ವಹಿವಾಟುಗಳಲ್ಲಿ ಶೇಕಡಾ 2ರಷ್ಟನ್ನು ಬಾಕಿಯಿರುವ ವಹಿವಾಟುಗಳನ್ನಾಗಿ ತೋರಿಸಲಾಗಿದೆ. **ಅನುಬಂಧ-2.5**ರಲ್ಲಿ ತೋರಿಸಿರುವಂತೆ, ಆಯ್ದ ಯೋಜನೆಗಳಲ್ಲಿ ಅನೇಕ ವಹಿವಾಟುಗಳು ಡಿಡಿಒ ಮಟ್ಟದಲ್ಲಿ ಮತ್ತು ಕೆ2 ಮಟ್ಟದ ವಹಿವಾಟು ಹಂತಗಳಲ್ಲಿ ಬಾಕಿ ಉಳಿದಿರುವುದನ್ನು ವಿಶ್ಲೇಷಣೆಯು ತೋರಿಸಿತು. **ಕೋಷ್ಟಕ-2.4**ರಲ್ಲಿ ತೋರಿಸಿರುವಂತೆ ಬಾಕಿಯಿರುವ ವಹಿವಾಟುಗಳ ವ್ಯಾಪ್ತಿಯು 3ರಿಂದ 673 ದಿನಗಳಷ್ಟಿತ್ತು

ಕೋಷ್ಟಕ 2.4: ಬಾಕಿಯಿರುವ ವಹಿವಾಟುಗಳನ್ನು ತೋರಿಸುವ ತಃಖ್ತೆ

ದಿನಗಳ ಸಂಖ್ಯೆ	ವಹಿವಾಟುಗಳ ಸಂಖ್ಯೆ	ಮೊತ್ತ (₹ ಕೋಟಿಗಳಲ್ಲಿ)
0-4 ದಿನಗಳು	4,436	5.14
5-7 ದಿನಗಳು	5,071	4.24
8-15 ದಿನಗಳು	13,515	11.86
16-90 ದಿನಗಳು	1,78,118	74.29
91-180 ದಿನಗಳು	64,364	12.10
181-365 ದಿನಗಳು	2,33,553	27.73
>365 ದಿನಗಳು (ಅತ್ಯಧಿಕ 673)	1,67,892	17.94
ಒಟ್ಟು	**6,66,949**	**153.30**

ಆಧಾರ: ಡಿಬಿಟಿ ಕೋಶ ಸಲ್ಲಿಸಿದ ಡಿಬಿಟಿ ದತ್ತಾಂಶ

ಪ್ರತಿ ಇಲಾಖೆಯ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಮತ್ತು ಕೊನೆಯ ಹಂತದವರೆಗೆ ನಗದು ವಿತರಣೆಯ ಮೇಲ್ವಿಚಾರಣೆಗೆ ಜವಾಬ್ದಾರವಾದ ಡಿಬಿಟಿ ಕೋಶವು ವಿವಿಧ ಹಂತಗಳಲ್ಲಿ ಬಾಕಿ ಉಳಿದಿರುವ ವಹಿವಾಟುಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಬಾಕಿ ಉಳಿದಿರುವುದಕ್ಕೆ ಇರುವ ಕಾರಣಗಳನ್ನು ಪರಿಹರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ವಿಫಲವಾಗಿತ್ತು. ತತ್ಪರಿಣಾಮವಾಗಿ, 2018-19 ಮತ್ತು 2019-20ರ ಅವಧಿಯಲ್ಲಿ 6.67 ಲಕ್ಷ ಫಲಾನುಭವಿಗಳು ₹153.30 ಕೋಟಿ ಆರ್ಥಿಕ ಲಾಭದಿಂದ ವಂಚಿತರಾದರು.

ಈ ಚಟುವಟಿಕೆಯನ್ನು ಮೇಲ್ವಿಚಾರಣೆ ಮಾಡುವುದು ಬಳಕೆದಾರ ಇಲಾಖೆಯ ಜವಾಬ್ದಾರಿಯಾಗಿದೆ ಮತ್ತು ಅದಕ್ಕಾಗಿ ಅಗತ್ಯವಿರುವ ಎಮ್‌ಐಎಸ್ ಅನ್ನು ಡಿಬಿಟಿ ಪೋರ್ಟಲ್‌ನಲ್ಲಿ ಈಗಾಗಲೇ ಪ್ರಕಟಿಸಲಾಗಿದೆ ಎಂದು ರಾಜ್ಯ ಸರ್ಕಾರವು (ಡಿಸೆಂಬರ್ 2021) ತಿಳಿಸಿತು. ಡಿಬಿಟಿ ಪೋರ್ಟಲ್ ಅನ್ನು ನಿರ್ವಹಿಸುವುದು ಮತ್ತು ಪೋರ್ಟಲ್ ಅನ್ನು ಬಳಸುವಲ್ಲಿ ಇಲಾಖೆಗಳಿಗೆ ತಾಂತ್ರಿಕ ಸಹಾಯವನ್ನು ಒದಗಿಸುವುದು ಡಿಬಿಟಿ ಕೋಶದ ಜವಾಬ್ದಾರಿಯಾಗಿದೆ ಎಂದೂ ಸಹ ಸರ್ಕಾರವು ತಿಳಿಸಿತು. ಪ್ರತಿ ಇಲಾಖೆಯ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವ ಮತ್ತು ಕೊನೆಯ ಹಂತದವರೆಗೆ ನಗದು ವಿತರಿಸುವುದನ್ನು ಖಚಿತಪಡಿಸುವ ಜವಾಬ್ದಾರಿಯನ್ನು ಡಿಬಿಟಿ ಕೋಶದ ಕಾರ್ಯಾಚರಣೆಗಳ ಗುಂಪಿಗೆ ವಹಿಸಲಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

2.2.4 ತಿರಸ್ಕೃತ ವಹಿವಾಟುಗಳು

ಕೋರ್ ಡಿಬಿಟಿ ಅಡಿಯಲ್ಲಿನ ಒಟ್ಟು ವಹಿವಾಟುಗಳಲ್ಲಿ ಶೇಕಡಾ 14ರಷ್ಟು ವಹಿವಾಟುಗಳು ವಿವಿಧ ಹಂತಗಳಲ್ಲಿ ತಿರಸ್ಕೃತಗೊಂಡಿದ್ದವು. ಡಿಡಿಒ ಮಟ್ಟದಲ್ಲಿ (ಶೇಕಡಾ 60) ಮತ್ತು ಕೆ2 ಮಟ್ಟದಲ್ಲಿ (ಶೇಕಡಾ 38) ತಿರಸ್ಕೃತ ವಹಿವಾಟುಗಳು ಅಧಿಕವಾಗಿದ್ದವು ಎಂದು ವಿಶ್ಲೇಷಣೆಯು ತೋರಿಸಿತು. ತಿರಸ್ಕೃತ ವಹಿವಾಟುಗಳಿಗೆ ಇಲಾಖೆಯ ಕೋರಿಕೆಯಂತೆ "ಫೈಲ್‌ಗಳನ್ನು ಇಲಾಖೆಗೆ ಮರಳಿಸಲಾಗಿದೆ" (ಶೇಕಡಾ 57) ಎಂಬುದು ಪ್ರಮುಖ ಕಾರಣವಾಗಿದ್ದರೆ, ತದನಂತರದ ಕಾರಣಗಳು "ಕೆ2-BMSER-01: ನೀಡಲಾದ ಆಯವ್ಯಯ ಸಾಲಿನ ಹೊಂದಾಣಿಕೆ ಮತ್ತು ಡಿಡಿಒ ಲಭ್ಯವಿಲ್ಲ" (ಶೇಕಡಾ 20) ಮತ್ತು "ಕೆಲವು ಫಲಾನುಭವಿಗಳಿಗೆ ಮಂಜೂರಾತಿ ಆದೇಶವನ್ನು ಈಗಾಗಲೇ ರಚಿಸಲಾಗಿದೆ" (ಶೇಕಡಾ 8) ಎಂಬುದಾಗಿದ್ದವು. ವಿವರಗಳನ್ನು **ಅನುಬಂಧ 2.6**ರಲ್ಲಿ ತೋರಿಸಲಾಗಿದೆ.

ಪಾವತಿಗಾಗಿ ಕಳುಹಿಸುವ ಮೊದಲು ಸಂಬಂಧಿಸಿದ ಇಲಾಖೆಗಳು ಆಯವ್ಯಯ ಅವಕಾಶದ ಲಭ್ಯತೆ ಮತ್ತು ಪಾವತಿ ಫೈಲ್‌ಗಳ ಸೂಕ್ತತೆಯನ್ನು ಖಚಿತಪಡಿಸಿಕೊಳ್ಳುತ್ತಿರಲಿಲ್ಲ ಎಂಬುದನ್ನು ಇದು ಸೂಚಿಸುತ್ತದೆ. ಅಲ್ಲದೆ, ಈ ತಿರಸ್ಕರಿಸಿದ ವಹಿವಾಟುಗಳನ್ನು ಮುಂದಿನ ಪ್ರಕ್ರಿಯೆಗಾಗಿ ಮೇಲ್ವಿಚಾರಣೆ ಮಾಡಲು ಯಾವುದೇ ಕಾರ್ಯವಿಧಾನವು ಅಸ್ತಿತ್ವದಲ್ಲಿರಲಿಲ್ಲ. ಇದರ ಪರಿಣಾಮವಾಗಿ 42.02 ಲಕ್ಷ ವಹಿವಾಟುಗಳಿಗೆ ಸಂಬಂಧಿಸಿ ₹814.55 ಕೋಟಿಗಳನ್ನು ವಿತರಿಸಲು ಪರಿಹಾರ ಕ್ರಮವನ್ನು ಪ್ರಾರಂಭಿಸಲಾಗಿದೆಯೇ ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಡಿಬಿಟಿ ಮತ್ತು ಕೆ2 ಮಟ್ಟದಲ್ಲಿ ದೃಢೀಕರಣ ವಿಫಲತೆಗಳು, ಎನ್‌ಪಿಸಿಐ ಮಟ್ಟದಲ್ಲಿ ವಿಫಲತೆಗಳು ಮುಂತಾದ ವಿವಿಧ ಕಾರಣಗಳಿಂದ ವಹಿವಾಟುಗಳು ತಿರಸ್ಕೃತಗೊಂಡಿದ್ದವು ಮತ್ತು ಡಿಡಿಒಗಳು ಸಹ ಡಿಬಿಟಿ ಮತ್ತು ಕೆ2ನಲ್ಲಿನ ದಾಖಲೆಗಳನ್ನು ತಿರಸ್ಕರಿಸಬಹುದಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2022). ಹಣದ ಲಭ್ಯತೆಯಿಲ್ಲದ ಕಾರಣ ಕೆಲವು ಪ್ರಕರಣಗಳು ತಿರಸ್ಕೃತವಾಗಿರಬಹುದು ಮತ್ತು ಅಂತಹ ಪ್ರಕರಣಗಳನ್ನು ಮರು–ಪ್ರಕ್ರಿಯೆಗೊಳಿಸಲಾಗದೇ ಇರಬಹುದು ಎಂದೂ ಸಹ ಸರ್ಕಾರವು ತಿಳಿಸಿತು. ಹಾಗಿದ್ದಾಗ್ಯೂ, ತಿರಸ್ಕರಿಸಿದ ವಹಿವಾಟುಗಳನ್ನು ಮೇಲ್ವಿಚಾರಣೆ ಮಾಡಲು ಕಾರ್ಯವಿಧಾನವನ್ನು ರಚಿಸಲು ಅದು ಒಪ್ಪಿಕೊಂಡಿತು ಮತ್ತು ತಿರಸ್ಕರಿಸಿದ ವಹಿವಾಟುಗಳನ್ನು ಮರು–ಪ್ರಕ್ರಿಯೆಗೊಳಿಸಲು ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಲು ಸಂಬಂಧಿಸಿದ ಇಲಾಖೆಗಳಿಗೆ ನಿರ್ದೇಶನಗಳನ್ನು ನೀಡುವುದಾಗಿ ತಿಳಿಸಿತು.

ಹಣದ ಲಭ್ಯತೆಯಿಲ್ಲದ ಕಾರಣ ತಿರಸ್ಕರಿಸಿದ ವಹಿವಾಟುಗಳನ್ನು ಮರು–ಪ್ರಕ್ರಿಯೆಗೊಳಿಸಲಾಗದು ಎಂಬ ಉತ್ತರವನ್ನು ಲೆಕ್ಕಪರಿಶೋಧನೆಯು ಒಪ್ಪುವುದಿಲ್ಲ. ವಹಿವಾಟುಗಳನ್ನು ಪಾವತಿಗಳಿಗೆ ಪ್ರಕ್ರಿಯೆಗೊಳಿಸುವ ಮೊದಲು ಅಗತ್ಯವಾದ ಆಯವ್ಯಯ ಅವಕಾಶ ಲಭ್ಯತೆಯ ಪರಿಶೀಲನೆಯ ಅನುಪಸ್ಥಿತಿಯನ್ನು ಉತ್ತರವು ಸೂಚಿಸಿದರೆ ತಿರಸ್ಕೃತ ವಹಿವಾಟುಗಳನ್ನು ಮರು–ಪ್ರಕ್ರಿಯೆಗೊಳಿಸದಿರುವುದು ಅರ್ಹ ಫಲಾನುಭವಿಗಳಿಗೆ ಸೇವೆಗಳನ್ನು ಸಮಯೋಚಿತವಾಗಿ ತಲುಪಿಸಲು, ಅಂತಹ ವಹಿವಾಟುಗಳನ್ನು ಗಮನಿಸಿ ಪ್ರಕ್ರಿಯೆಗೊಳಿಸಲು ಅಸ್ತಿತ್ವದಲ್ಲಿರುವ ಕಾರ್ಯವಿಧಾನದ ವಿಫಲತೆಯನ್ನು ಸೂಚಿಸುತ್ತದೆ.

2.2.5 ಪ್ರತಿಕ್ರಿಯೆ ಫೈಲ್‌ಗಳ ಸಮಯೋಚಿತ ಚಲನೆ

ಕೆ2ವಿನಲ್ಲಿ ಬ್ಯಾಂಕ್‌ನಿಂದ ಪ್ರತಿಕ್ರಿಯೆ ಫೈಲ್ ಅನ್ನು ಸ್ವೀಕರಿಸಿದ ನಂತರ ಅದನ್ನು ಕೋರ್ ಡಿಬಿಟಿಗೆ ಮತ್ತು ಸ್ಥಳೀಯ ಅಪ್ಲಿಕೇಶನ್‌ಗೆ ಕಳುಹಿಸಲಾಗುತ್ತದೆ. ಕೆ2ವಿನಿಂದ ಕೋರ್ ಡಿಬಿಟಿ ಪೋರ್ಟಲ್‌ಗೆ ಪ್ರತಿಕ್ರಿಯೆ ಫೈಲ್‌ಗಳ ಚಲನೆಗೆ ತೆಗೆದುಕೊಂಡ ಸರಾಸರಿ ಸಮಯವು 38 ದಿನಗಳು (0–270 ದಿನಗಳ ವ್ಯಾಪ್ತಿ) ಮತ್ತು ಕೋರ್ ಡಿಬಿಟಿಯಿಂದ ಸ್ಥಳೀಯ ಅಪ್ಲಿಕೇಶನ್‌ಗೆ 21 ದಿನಗಳಾಗಿರುವುದನ್ನು (0–367 ದಿನಗಳ ನಡುವಿನ ವ್ಯಾಪ್ತಿ) ಲೆಕ್ಕಪರಿಶೋಧನೆಯು ಗಮನಿಸಿತು. ಒಂದು ದಿನದಲ್ಲಿ ಕ್ರಮವಾಗಿ ಶೇಕಡಾ 29 ಮತ್ತು 18 ಪ್ರತಿಕ್ರಿಯೆಗಳನ್ನಷ್ಟೇ ಹಂಚಿಕೊಳ್ಳಲಾಗಿದೆ. ಇಲಾಖೆಗಳಿಂದ ಪ್ರತಿಕ್ರಿಯೆ ಫೈಲ್‌ನ ತಡವಾದ ಸ್ವೀಕೃತಿಯು ವಿಫಲವಾದ/ಬಾಕಿಯಿರುವ/ತಿರಸ್ಕೃತ ವಹಿವಾಟುಗಳ ಸಕಾಲಿಕ ತಿದ್ದುಪಡಿ ಮತ್ತು ಮರು–ಪ್ರಕ್ರಿಯೆಗೆ ಅಡ್ಡಿಯಾಗುತ್ತದೆ.

ಆರಂಭದಲ್ಲಿ ಡಿಬಿಟಿ ವ್ಯವಸ್ಥೆಯು ಫೈಲ್‌ವಾರು ಪ್ರತಿಕ್ರಿಯೆಯನ್ನು ಇಲಾಖೆಯೊಂದಿಗೆ ಹಂಚಿಕೊಳ್ಳುತ್ತಿತ್ತು ಮತ್ತು ಯಾವುದೇ ಹಂತದಲ್ಲಿ ಒಂದು ದಾಖಲೆಯ ಯಾವುದೇ ವಿಳಂಬದಿಂದಾಗಿ ಸಂಪೂರ್ಣ ಫೈಲ್‌ನ ಪ್ರತಿಕ್ರಿಯೆಯನ್ನು ಕಳುಹಿಸಲಾಗುತ್ತಿರಲಿಲ್ಲ ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021). ಆದ್ದರಿಂದ, ಈಗ ದಾಖಲೆವಾರು ಪ್ರತಿಕ್ರಿಯೆಯನ್ನು ಹಂಚಿಕೊಳ್ಳಲು ಇಲಾಖೆಯು ಪ್ರಾರಂಭಿಸಿದೆ ಅಂದರೆ, ಯಾವುದೇ ಫಲಾನುಭವಿಗೆ ಪಾವತಿ ಮಾಡಿದಾಗ ಅದರ ವಿವರಗಳನ್ನು ಇಲಾಖೆಗೆ ಕಳುಹಿಸಲಾಗುತ್ತಿದೆ.

ಕೆ2ವಿನಿಂದ ಕೋರ್ ಡಿಬಿಟಿ ಪೋರ್ಟಲ್‌ಗೆ ಪ್ರತಿಕ್ರಿಯೆ ಫೈಲ್‌ಗಳ ಚಲನೆಯಲ್ಲಿನ ವಿಳಂಬಕ್ಕೆ ಕಾರಣವನ್ನು ಉತ್ತರದಲ್ಲಿ ತಿಳಿಸಿಲ್ಲ ಮತ್ತು ಲೆಕ್ಕಪರಿಶೋಧನಾ ಅವಧಿಯಲ್ಲಿ ವಿವಿಧ ಹಂತಗಳಲ್ಲಿ ಫೈಲ್‌ಗಳ ಚಲನೆಯಲ್ಲಿ ವಿಳಂಬವಾಗಿರುವುದು ವಾಸ್ತವಾಂಶವಾಗಿದೆ.

2.2.6 ಕೋರ್ ಡಿಬಿಟಿ ಪೋರ್ಟಲ್‌ನ ಸಂಸ್ಕರಣಾ ದಕ್ಷತೆ

ಗುರುತು ಮತ್ತು ಹಣಕಾಸಿನ ವಿಳಾಸದ ದೃಢೀಕರಣದ ನಂತರ ಕೋರ್ ಡಿಬಿಟಿ ಪೋರ್ಟಲ್ ಪಾವತಿ ಫೈಲ್‌ಗಳನ್ನು ಕೆ2ಗೆ ಕಳುಹಿಸುತ್ತದೆ. ಕೋರ್ ಡಿಬಿಟಿ ಪೋರ್ಟಲ್ ಕೆ2ಗೆ ಕಳುಹಿಸಿದ 43,340[8] ಪಾವತಿ ಫೈಲ್‌ಗಳ ಲೆಕ್ಕಪರಿಶೋಧನಾ ವಿಶ್ಲೇಷಣೆಯು, ಕೆ2ನಲ್ಲಿನ ಆರಂಭಿಕ ಫೈಲ್ ಮಟ್ಟದ ಪರಿಶೀಲನೆಯಲ್ಲಿ 30,315 ಫೈಲ್‌ಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ತೋರಿಸಿದ್ದು, ಸಂಸ್ಕರಣೆಯ ದಕ್ಷತೆಯು ಶೇಕಡಾ 70 ಆಗಿತ್ತು. ಆ 30,315 ಫೈಲ್‌ಗಳಲ್ಲಿ, 28,164 ಫೈಲ್‌ಗಳು ಸಕ್ರಿಯ ಸ್ಥಿತಿಯಲ್ಲಿದ್ದವು, 405 ಫೈಲ್‌ಗಳು (2019-20ರಲ್ಲಿ 310, 2020-21ರಲ್ಲಿ 7 ಮತ್ತು 2021-22ರಲ್ಲಿ 88) ಸಂಸ್ಕರಣೆಯಲ್ಲಿದ್ದವು ಮತ್ತು ಉಳಿದ 1,746 ಫೈಲ್‌ಗಳು ನಿಷ್ಕ್ರಿಯವಾಗಿದ್ದವು (ಇದು 2018-19ಕ್ಕೆ ಸಂಬಂಧಿಸಿದ ಫೈಲ್‌ಗಳನ್ನು ಸಹ ಒಳಗೊಂಡಿತ್ತು). ತತ್ಪರಿಣಾಮವಾಗಿ ಸಂಸ್ಕರಣಾ ದಕ್ಷತೆಯು ಶೇಕಡಾ 65ರಷ್ಟಿತ್ತು. ಆದ್ದರಿಂದ, ಕೋರ್ ಡಿಬಿಟಿ ಪೋರ್ಟಲ್‌ನಲ್ಲಿ ಆ ಮಟ್ಟಿಗೆ ನ್ಯೂನತೆಯಿಂದ ಕೂಡಿತ್ತು.

2.2.7 ಸ್ಥಳೀಯ ಅಪ್ಲಿಕೇಶನ್‌ಗಳಲ್ಲಿ ದೃಢೀಕರಣ ಪರಿಶೀಲನೆಗಳ ಅನುಪಸ್ಥಿತಿ

ಸ್ಥಳೀಯ ಅಪ್ಲಿಕೇಶನ್‌ಗಳು ಪಾವತಿ ಅನುಸೂಚಿ ಫೈಲ್‌ಗಳನ್ನು ಸಿದ್ಧಪಡಿಸುತ್ತವೆ ಮತ್ತು ಮುಂದಿನ ಪ್ರಕ್ರಿಯೆಗಾಗಿ ಡಿಬಿಟಿಗೆ ಕಳುಹಿಸುತ್ತವೆ. 2019-20ರ ಅವಧಿಯಲ್ಲಿ ಡಿಬಿಟಿ ಪೋರ್ಟಲ್‌ನಲ್ಲಿ ಶೇಕಡಾ 17ರಷ್ಟು ಫೈಲ್‌ಗಳು ಪ್ರಾಥಮಿಕ ಪರಿಶೀಲನೆಯಲ್ಲಿ ವಿಫಲವಾಗಿವೆ ಎಂದು ಸಂಬಂಧಿತ ದತ್ತಾಂಶದ ವಿಶ್ಲೇಷಣೆಯು ತೋರಿಸಿತು. 2021-22ರ ಅವಧಿಯಲ್ಲಿ ಇದು ಶೇಕಡಾ 29ಕ್ಕೆ ಏರಿಕೆಯಾಗಿತ್ತು. 'ಇನ್‌ಪುಟ್ ಎಕ್ಸ್‌ಎಮ್‌ಎಲ್ ಫೈಲ್ ಈಗಾಗಲೇ ಪ್ರಕ್ರಿಯೆಗೊಂಡಿದೆ', 'ಇನ್‌ಪುಟ್ ಎಕ್ಸ್‌ಎಮ್‌ಎಲ್ ಫೈಲ್ ಎಕ್ಸ್‌ಎಸ್‌ಡಿ ದೃಢೀಕರಣ ವಿಫಲವಾಗಿದೆ' ಮತ್ತು 'ನಕಲು ಪಾವತಿ ದಾಖಲೆ ಕಂಡುಬಂದಿದೆ' ಇವುಗಳು ವಿಫಲತೆಗೆ ಪ್ರಮುಖ ಕಾರಣಗಳಾಗಿದ್ದವು. ಕೋರ್ ಡಿಬಿಟಿ ಪೋರ್ಟಲ್‌ಗೆ ಯೋಜನೆಗಳ ಸೇರ್ಪಡೆಯ ಹೆಚ್ಚಳದೊಂದಿಗೆ ವಿಫಲತೆಯ ಸಂಖ್ಯೆಯಲ್ಲೂ ಹೆಚ್ಚಳ ಉಂಟಾಗಿತ್ತು. ಸ್ಥಳೀಯ ಅಪ್ಲಿಕೇಶನ್‌ಗಳ ಬಳಕೆದಾರರಿಂದ ಅಸಮರ್ಪಕ ಪರಿಶೀಲನೆ ಮತ್ತು ದೃಢೀಕರಣಗಳಿದ್ದುದು ಸ್ಪಷ್ಟವಾಗುತ್ತದೆ.

2.3 ಕೋರ್ ಡಿಬಿಟಿ ಪೋರ್ಟಲ್‌ನ ನಿರ್ವಹಣೆ

ಕೋರ್ ಡಿಬಿಟಿ ಪೋರ್ಟಲ್ ಕಾರ್ಯಹರಿವು, ಪರಿಣಾಮಕಾರಿ ಹಣಕಾಸು ನಿರ್ವಹಣೆ, ಮೇಲ್ವಿಚಾರಣಾ ಪರಿಕರಗಳು ಮತ್ತು ಹಲವು ಬಗೆಯ ಮಾರ್ಗಗಳಿಂದ ತಡೆರಹಿತ ಸೇವನೆಯನ್ನು ಸುವ್ಯವಸ್ಥಿತಗೊಳಿಸಲು ಪ್ರಯೋಜನಗಳ ಹಣಕಾಸು ವಹಿವಾಟಿನ ವಿವಿಧ ಪದರಗಳನ್ನು ಸಂಯೋಜಿಸುತ್ತದೆ. ಇದು ಅಧಿಕಾರಿಗಳು ಮತ್ತು ಇಲಾಖೆಗಳಿಗೆ ಹೆಚ್ಚಿನ ಅಧಿಕಾರ ನೀಡುವ ಮೂಲಕ ಸಹಯೋಗ ಮತ್ತು ಸಂಯೋಜನೆಯನ್ನು ಹೆಚ್ಚಿಸುವುದರ ಜೊತೆಗೆ ಪಾರದರ್ಶಕ ಸಹಯೋಗ, ಉತ್ತಮ ಮೇಲ್ವಿಚಾರಣೆ ಮತ್ತು ಹಣದ ಹರಿವಿನ ವೇಗವನ್ನು ಅನುಮತಿಸುತ್ತದೆ. ಇದಕ್ಕೆ ಪೋರ್ಟಲ್‌ನ ಸಮರ್ಥ ನಿರ್ವಹಣೆ ಮತ್ತು ವಿವಿಧ ಜವಾಬ್ದಾರಸ್ಥರ ಅಪ್ಲಿಕೇಶನ್‌ಗಳೊಂದಿಗೆ ಅದರ ತಡೆರಹಿತ ಏಕೀಕರಣದ ಅಗತ್ಯವಿದೆ. ವಿವರವಾದ ಕಾರ್ಯಹರಿವನ್ನು **ಅನುಬಂಧ-2.7**ರಲ್ಲಿ ನೀಡಲಾಗಿದೆ.

---

[8] 22 ಅಕ್ಟೋಬರ್ 2021ರಲ್ಲಿನ ದತ್ತಾಂಶದಂತೆ

2.3.1 ಕೋರ್ ಡಿಬಿಟಿ ಪೋರ್ಟಲ್ ಮಾಡ್ಯೂಲ್‌ಗಳ ಅನುಷ್ಠಾನದ ಸ್ಥಿತಿ

ಈ ಪೋರ್ಟಲ್ ಒಂಭತ್ತು ಮಾಡ್ಯೂಲ್‌ಗಳನ್ನು ಹೊಂದಿದೆ. ಮಾಡ್ಯೂಲ್‌ಗಳ ಅನುಷ್ಠಾನದ ಸ್ಥಿತಿಯನ್ನು ಕೆಳಗೆ ನೀಡಲಾಗಿದೆ:

ಅನುಷ್ಠಾನ ಮಾಡಿರುವುದು	ಪ್ರಾಯೋಗಿಕ ಅನುಷ್ಠಾನ ನಡೆದಿರುವುದು	ಪರೀಕ್ಷಾ ಹಂತದಲ್ಲಿರುವುದು
ಗುರುತಿನ ದೃಢೀಕರಣ	ಸರಳ ಫಲಾನುಭವಿ ನಿರ್ವಹಣಾ ವ್ಯವಸ್ಥೆ	ಹಣಕಾಸು ವಿಳಾಸ ಪರಿಶೀಲನೆ (ಬ್ಯಾಂಕ್ ಖಾತೆ ಪರಿಶೀಲನೆ)
ಪಾವತಿ ಮಾಡ್ಯೂಲ್– • **ಕೆ2 ವಿಧಾನ** • **ಕೆ2 ವಿಫಲ ಪಾವತಿ** • **ಬ್ಯಾಂಕ್ ವಿಧಾನ**	ಫಲಾನುಭವಿಯ ಬದಲಿಗೆ ಸಂಸ್ಥೆಗೆ ಪಾವತಿ	ಸೇವೆಯಾಗಿ ಆಧಾರ್
ಏಕೀಕರಣ ಮಾಡ್ಯೂಲ್ • **ಸ್ಥಳೀಯ ಅಪ್ಲಿಕೇಶನ್‌ದೊಂದಿಗೆ ಏಕೀಕರಣ** • **ಕೆ2ನೊಂದಿಗೆ ಏಕೀಕರಣ** • **ಎಸ್‌ಬಿಐನೊಂದಿಗೆ ಏಕೀಕರಣ (ಬ್ಯಾಂಕ್ ವಿಧಾನ ಪಾವತಿ)**		ತಪ್ಪು ಜಮೆಗಳನ್ನು ನಿರ್ವಹಿಸುವುದು
ತಮ್ಮ ಪಾವತಿಯ ಮತ್ತು ಜೋಡಣೆ ಸ್ಥಿತಿಯ ಬಗ್ಗೆ ತಿಳಿದುಕೊಳ್ಳಲು ಫಲಾನುಭವಿಗಳಿಗೆ ಮೊಬೈಲ್ ಅಪ್ಲಿಕೇಶನ್		

ಎಲ್ಲಾ ಮಾಡ್ಯೂಲ್‌ಗಳು ಈಗ ಕಾರ್ಯ ನಿರ್ವಹಿಸುತ್ತಿವೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021), ಆದರೆ ಈ ನಿಟ್ಟಿನಲ್ಲಿ ಪುರಾವೆಗಳನ್ನು ಒದಗಿಸಲಿಲ್ಲ.

2.3.2 ಏಕೀಕರಣದ ಸ್ಥಿತಿ

ಕೋರ್ ಡಿಬಿಟಿ ಪೋರ್ಟಲ್‌ನ ಏಕೀಕರಣ ಮಾಡ್ಯೂಲ್ ಡಿಬಿಟಿ ವ್ಯವಸ್ಥೆಯನ್ನು ಒಂದು ಬದಿಯಲ್ಲಿ ಸ್ಥಳೀಯ ಅಪ್ಲಿಕೇಶನ್‌ನೊಂದಿಗೆ ಮತ್ತು ಇನ್ನೊಂದು ಬದಿಯಲ್ಲಿ ಪಾವತಿಗಾಗಿ ಕೆ2 ವಿಧಾನ/ ಬ್ಯಾಂಕ್‌ಗಳೊಂದಿಗೆ ಸಂಯೋಜಿಸಲು ಯೋಜಿಸಿತ್ತು. ಇದು ಸ್ಥಳೀಯ ಅಪ್ಲಿಕೇಶನ್‌ನಿಂದ ಡಿಬಿಟಿ ವ್ಯವಸ್ಥೆಗೆ ಎಕ್ಸ್‌ಎಮ್‌ಎಲ್[9] ಅನ್ನು ಬಳಸಿಕೊಂಡು ಡಿಬಿಟಿ ಫೈಲ್ ಚಲನೆಯನ್ನು ಸುಗಮಗೊಳಿಸುತ್ತದೆ (ಗುರುತು ದೃಢೀಕರಣ ಫೈಲ್/ಎಫ್‌ಎವಿ ಫೈಲ್, ಪಾವತಿ ಫೈಲ್) ಮತ್ತು ಡಿಬಿಟಿ ವ್ಯವಸ್ಥೆಯಿಂದ ಕೆ2/ಬ್ಯಾಂಕ್‌ಗೆ ಎಕ್ಸ್‌ಎಮ್‌ಎಲ್ ಅನ್ನು ಕಳುಹಿಸುತ್ತದೆ. ಫೈಲ್‌ಗಳನ್ನು ಕೆ2/ಬ್ಯಾಂಕ್‌ನಲ್ಲಿ ಯಶಸ್ವಿಯಾಗಿ ಸಂಸ್ಕರಣೆಗೊಳಿಸಿದ ನಂತರ, ಪ್ರತಿಕ್ರಿಯೆಯನ್ನು ಪುನಃ ಸ್ಥಳೀಯ ಅಪ್ಲಿಕೇಶನ್‌ನೊಂದಿಗೆ ಹಂಚಿಕೊಳ್ಳಲಾಗುತ್ತದೆ. ಕೋರ್ ಡಿಬಿಟಿ ಪೋರ್ಟಲ್ ಅನ್ನು ಯುಐಡಿಎಐ ಮತ್ತು ಎನ್‌ಪಿಸಿಐಗೆ ಅನುಕ್ರಮವಾಗಿ ಗುರುತು ಮತ್ತು ಹಣಕಾಸು ವಿಳಾಸ ದೃಢೀಕರಣದ ಉದ್ದೇಶಕ್ಕಾಗಿ ಸಂಯೋಜಿಸಲಾಗಿದೆ.

ಎಕ್ಸ್‌ಎಮ್‌ಎಲ್ ಫೈಲ್ ಚಲನೆ ಮತ್ತು ಪ್ರತಿಕ್ರಿಯೆಯ ಹಂಚಿಕೆಗೆ ಸಂಬಂಧಿಸಿದಂತೆ ಸ್ಥಳೀಯ ಅಪ್ಲಿಕೇಶನ್‌ದೊಂದಿಗೆ ಏಕೀಕರಣವು ಅಸ್ತಿತ್ವದಲ್ಲಿದೆಯಾದರೂ, ಸ್ಥಳೀಯ ಅಪ್ಲಿಕೇಶನ್‌ಗಳಿಂದ ಪ್ರತಿಕ್ರಿಯೆ ಫೈಲ್‌ಗಳ ಬಳಕೆಗೆ ಯಾವುದೇ ಸ್ವಯಂಚಾಲಿತ ಪ್ರಕ್ರಿಯೆ ಇಲ್ಲದಿರುವುದರಿಂದ ಎರಡೂ ಅಪ್ಲಿಕೇಶನ್‌ಗಳ ನಡುವಿನ ಸಮನ್ವಯಕ್ಕಾಗಿ ಏಕೀಕರಣವು ಅಸಮಂಜಸವಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದರಿಂದಾಗಿ, ಕ್ಷೀರಸಿರಿ ಯೋಜನೆಯಲ್ಲಿ ಗಮನಿಸಿದಂತೆ, ಸ್ಥಳೀಯ ಅಪ್ಲಿಕೇಶನ್ ಮತ್ತು

---

[9] ಎಕ್ಸ್‌ಟೆನ್ಸಿಬಲ್ ಮಾರ್ಕಪ್ ಲಾಂಗ್ವೇಜ್ – ಇದು ಕಂಪ್ಯೂಟರ್ ಬಳಕೆ ಭಾಷೆಯಾಗಿದ್ದು, ಮಾನವ ಮತ್ತು ಯಾಂತ್ರಿಕವಾಗಿ ಎರಡೂ ಓದಬಹುದಾದ ರೀತಿಯಲ್ಲಿ ದಾಖಲೆಗಳ ಲಿಪೀಕರಣಕ್ಕಾಗಿ ನಿಯಮಗಳನ್ನು ಸೂಚಿಸುತ್ತದೆ

ಡಿಬಿಟಿ ಅಪ್ಲಿಕೇಶನ್‌ನ ವಹಿವಾಟಿನ ದತ್ತಾಂಶಗಳ ನಡುವಿನ ಹೊಂದಾಣಿಕೆಯಿರಲಿಲ್ಲ (**ಕೋಷ್ಟಕ-3.2**ರಲ್ಲಿ ವಿವರಿಸಲಾಗಿದೆ).

ಅಂತೆಯೇ, ಕೆ2ನೊಂದಿಗೆ ಸಮನ್ವಯಕ್ಕಾಗಿ ಸಹ ಏಕೀಕರಣ ಇರಲಿಲ್ಲ. ಕೆ2 ಪ್ರಕಾರ ಯಶಸ್ವಿ ವಹಿವಾಟುಗಳ ಸಂಖ್ಯೆ 1,97,44,251 ಆಗಿದ್ದರೆ ಅದು ಕೋರ್ ಡಿಬಿಟಿ ಪೋರ್ಟಲ್‌ನ ಪ್ರಕಾರ 2,40,51,851 ಆಗಿದ್ದವು. ಕೆ2 ಒದಗಿಸಿದ ಮಾಹಿತಿಯ ಪ್ರಕಾರ, ಕೋರ್ ಡಿಬಿಟಿ ಪೋರ್ಟಲ್ ಜನವರಿ 2018ರಿಂದ ಡಿಸೆಂಬರ್ 2020ರ ಅವಧಿಯಲ್ಲಿ 35,518 ಪಾವತಿ ಫೈಲ್‌ಗಳನ್ನು ಕೆ2ಗೆ ರವಾನಿಸಿತ್ತು. ಆದಾಗ್ಯೂ, ಕೋರ್ ಡಿಬಿಟಿ ಪೋರ್ಟಲ್‌ನಲ್ಲಿ 31,113 ಫೈಲ್‌ಗಳನ್ನು ಮಾತ್ರ ಪತ್ತೆ ಹಚ್ಚಲು ಸಾಧ್ಯವಾಯಿತು ಮತ್ತು 4,405 ಫೈಲ್‌ಗಳು ಪತ್ತೆಯಾದೇ ಉಳಿದವು. ಇದು ಸಮನ್ವಯ, ದ್ವಿಪಾವತಿ ತಡೆ ಮತ್ತು ಪ್ರತಿಕ್ರಿಯೆ ಫೈಲ್‌ಗಳ ಹೊಂದಾಣಿಕೆ ಮತ್ತು ಸರಿಪಡಿಸುವಿಕೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಕಾರಣವಾಗಬಹುದು. ಇದರ ಹೊರತಾಗಿ, 2019-20ರ ಅವಧಿಯಲ್ಲಿ ಏಕೀಕರಣವು ಕಡಿತಗೊಂಡ ಕಾರಣ ಕೆ2 ಪ್ರತಿಕ್ರಿಯೆ ದತ್ತಾಂಶದಲ್ಲಿ ಅಸಂಗತೆಗಳಿದ್ದರಿಂದ, ಪೂರ್ಣ ಪ್ರತಿಕ್ರಿಯೆಗಳನ್ನು ಸೆರೆಹಿಡಿಯಲು ಸಾಧ್ಯವಾಗಲಿಲ್ಲ.

ಇದಲ್ಲದೆ, ಭಾರತ ಸರ್ಕಾರವು ಹೊರಡಿಸಿದ ಮಾರ್ಗಸೂಚಿಗಳ ಅನುಸಾರ ರಾಜ್ಯ ಡಿಬಿಟಿ ಪೋರ್ಟಲ್ ಅನ್ನು ಡಿಬಿಟಿ ಭಾರತ್ ಪೋರ್ಟಲ್ ಜೊತೆಗೆ ದತ್ತಾಂಶದ ತಡೆರಹಿತ ವಿನಿಮಯಕ್ಕಾಗಿ ಏಕೀಕರಿಸುವ ಅಗತ್ಯವಿದ್ದಿತು. ಏಕೀಕರಣ ಮತ್ತು ದತ್ತಾಂಶ ವಿನಿಮಯದ ಆಧಾರದ ಮೇಲೆ, ರಾಜ್ಯಗಳಿಗೆ ಡಿಬಿಟಿ ಕಾರ್ಯಕ್ಷಮತೆಯ ಶ್ರೇಯಾಂಕವನ್ನು ನೀಡಲಾಗುತ್ತದೆ. ಆರಂಭದಿಂದಲೂ 28 ರಾಜ್ಯಗಳ ಪೈಕಿ ಕರ್ನಾಟಕ 25ನೇ ಸ್ಥಾನದಲ್ಲಿತ್ತು. ಏಕೀಕರಣ ಮಾಡದಿದ್ದುದರಿಂದ ಮತ್ತು ರಾಜ್ಯ ಪೋರ್ಟಲ್‌ನಿಂದ ಭಾರತ್ ಪೋರ್ಟಲ್‌ಗೆ ದತ್ತಾಂಶ ವಿನಿಮಯ ಚೌಕಟ್ಟಿನ ಅನುಪಸ್ಥಿತಿಯಿಂದಾಗಿ ಇದು ಸಂಭವಿಸಿದತ್ತು. ರಾಜ್ಯ ಡಿಬಿಟಿಯು ದತ್ತಾಂಶ ವರದಿ ಮತ್ತು ಮತ್ತು ವರದಿ ಉಳಿಕೆ ಅನುಸರಣೆ ಮಾನ್ಯದಂಡಗಳಿಗೆ ಶೂನ್ಯ ಅಂಕ ಮತ್ತು ಪೋರ್ಟಲ್ ಅನುಸರಣೆಗಾಗಿ 50 ಅಂಕ ಪಡೆದುಕೊಂಡಿತ್ತು. ಮಾಹಿತಿಯ ಅಲಭ್ಯತೆಯು ನಿರ್ಧಾರಣೆ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರಿತ್ತು ಮತ್ತು ದತ್ತಾಂಶದ ವ್ಯಾಪಕ ಪ್ರಚಾರದ ವ್ಯಾಪ್ತಿಯನ್ನು ಸೀಮಿತಗೊಳಿಸಿತು. "ರಾಜ್ಯ ಡಿಬಿಟಿ ಪೋರ್ಟಲ್‌ನೊಂದಿಗೆ ಏಕೀಕರಣವು ಪ್ರಗತಿಯಲ್ಲಿದೆ" ಎಂದು ತೋರಿಸುವ ಪರದೆಚಿತ್ರವನ್ನು **ಅನುಬಂಧ-2.8**ರಲ್ಲಿ ತೋರಿಸಲಾಗಿದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಒಪ್ಪಿಕೊಂಡಿತು ಮತ್ತು ಬಳಕೆದಾರ ಇಲಾಖೆಗಳು ಮತ್ತು ಕೆ2ನೊಂದಿಗೆ ನಿಯತಕಾಲಿಕವಾಗಿ ಸಮನ್ವಯಗೊಳಿಸಲು ಡಿಬಿಟಿ ಕೋಶದಲ್ಲಿ ಕಾರ್ಯವಿಧಾನವನ್ನು ಸ್ಥಾಪಿಸುವುದಾಗಿ ಹೇಳಿತು (ಜನವರಿ 2022). ಡಿಬಿಟಿ ಭಾರತ್‌ನೊಂದಿಗೆ ಏಕೀಕರಣವನ್ನು ಕೈಗೆತ್ತಿಗೊಂಡು ಪೂರ್ಣಗೊಳಿಸಲಾಗಿದೆ (ಡಿಸೆಂಬರ್ 2021) ಮತ್ತು ಶ್ರೇಯಾಂಕದ ಸ್ಥಿತಿಯನ್ನು ಉನ್ನತೀಕರಿಸಲು ಕಾರ್ಯೋನ್ಮುಖವಾಗಿದೆ ಎಂದೂ ಸಹ ಸರ್ಕಾರವು ತಿಳಿಸಿತು. ಏಕೀಕರಣವು ಇನ್ನೂ ಪ್ರಗತಿಯಲ್ಲಿದ್ದಿತು ಎಂಬುದು ಉತ್ತರದಿಂದ ಸ್ಪಷ್ಟವಾಗುತ್ತದೆ.

2.3.3 ನಾಗರಿಕರಿಗೆ ಲಭ್ಯವಿರದ ರಾಜ್ಯ ಡಿಬಿಟಿ ಪೋರ್ಟಲ್

ರಾಜ್ಯ ಡಿಬಿಟಿ ಪೋರ್ಟಲ್, ದತ್ತಾಂಶಕ್ಕೆ ವೈಶಿಷ್ಟ್ಯರಹಿತ ಮತ್ತು ವಿಶೇಷ ಸವಲತ್ತು ಲಭ್ಯತೆ ಒದಗಿಸುವ ವೈಶಿಷ್ಟ್ಯಗಳನ್ನು ಒಳಗೊಂಡಿದೆ. ರಾಜ್ಯ ಡಿಬಿಟಿ ಪೋರ್ಟಲ್‌ನ ಮಾರ್ಗಸೂಚಿಗಳ ಪ್ರಕಾರ, ಇದು ರಾಜ್ಯದಲ್ಲಿ ಡಿಬಿಟಿಯ ಅವಲೋಕನ, ಸೇರ್ಪಡೆಯಾಗಿರುವ ಮತ್ತು ಸೇರ್ಪಡೆ ಆಗಬೇಕಾಗಿರುವ ಯೋಜನೆಗಳ ಪಟ್ಟಿ, ರಾಜ್ಯ ಡಿಬಿಟಿ ಸೆಲ್‌ನ ವಿವರಗಳು ಮತ್ತು ಹಲವಾರು ಇಲಾಖೆಗಳಿಗೆ ಸೂಚಿತ ಕಾರ್ಯಾಚರಣೆ ವಿಧಾನದೊಂದಿಗೆ ಪೋರ್ಟಲ್ ಅನ್ನು ನಿರ್ವಹಿಸುವ ಮತ್ತು ಮೇಲ್ವಿಚಾರಣೆ ಮಾಡುವ ವ್ಯಕ್ತಿಗಳು, ನಾಗರಿಕರು/ಫಲಾನುಭವಿಗಳಿಗೆ ಮಾಹಿತಿ ಹಕ್ಕಿನ ವಿವರಗಳು, ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳ ವಿವರಗಳು ಮತ್ತು ಪ್ರತಿಕ್ರಿಯೆ ಕಾರ್ಯವಿಧಾನದ ವಿವರಗಳನ್ನು ಹೊಂದಿರಬೇಕು. ಈ ಕಾರ್ಯವಿಧಾನಗಳು ನಾಗರಿಕರು/ಸಾರ್ವಜನಿಕರಿಗೆ ಲಾಗಿನ್ ಬಳಸದೆಯೇ ಪೋರ್ಟಲ್ ಅನ್ನು ಬಳಸಲು ಅನುವು ಮಾಡಿಕೊಡಬೇಕಿತ್ತು.

ರಾಜ್ಯ ಪೋರ್ಟಲ್‌ನಲ್ಲಿ ಮೇಲಿನ ಕಾರ್ಯಚಟುವಟಿಕೆಗಳ ಅನುಪಸ್ಥಿತಿಯನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಇದು ನಾಗರಿಕರು/ಫಲಾನುಭವಿಗಳಿಗೆ ಅಗತ್ಯವಾದ ಮಾಹಿತಿಯನ್ನು ನೀಡದಂತಾಯಿತು. ಮಾಹಿತಿ ಲಭ್ಯತೆ ಲಾಗಿನ್ ಮೂಲಕ ಮಾತ್ರ ಸಾಧ್ಯವಾಗಿತ್ತು.

ಕೋರ್ ಡಿಬಿಟಿ ಪೋರ್ಟಲ್ ಪ್ರಾಥಮಿಕವಾಗಿ ಇಲಾಖಾ ಅಧಿಕಾರಿಗಳಿಗೆ ಪಾವತಿಯ ಉದ್ದೇಶಕ್ಕಾಗಿರುವ ಪೋರ್ಟಲ್ ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2022). ಆದರೆ, ಸಾರ್ವಜನಿಕರಿಗೂ ಡಿಬಿಟಿ ಪೋರ್ಟಲ್‌ನಲ್ಲಿ ಸೌಲಭ್ಯ ಒದಗಿಸಲು ಒಪ್ಪಿಗೆ ಸೂಚಿಸಿತು. ಸಾರ್ವಜನಿಕರಿಗೆ ಸೌಲಭ್ಯ ಒದಗಿಸಲು ಸರ್ಕಾರ ಒಪ್ಪಿರುವುದನ್ನು ಲೆಕ್ಕಪರಿಶೋಧನೆಯು ಶ್ಲಾಘಿಸುತ್ತದೆ. ಆದಾಗ್ಯೂ, ರಾಜ್ಯ ಡಿಬಿಟಿ ಪೋರ್ಟಲ್ ನಾಗರಿಕರಿಗೆ ರಾಜ್ಯದ ವಿವಿಧ ಇಲಾಖೆಗಳಾದ್ಯಂತ ಲಭ್ಯವಿರುವ ವಿವಿಧ ಯೋಜನೆಗಳು ಮತ್ತು ಪ್ರಯೋಜನಗಳ ಮಾಹಿತಿಯನ್ನು ಒದಗಿಸುವುದರಿಂದ ಡಿಬಿಟಿ ಪೋರ್ಟಲ್ ಪಾವತಿ ಉದ್ದೇಶಕ್ಕಾಗಿ ಮಾತ್ರ ಎಂಬ ಉತ್ತರವು ಸಮರ್ಥನೀಯವಲ್ಲ.

2.3.4 ಪಾವತಿ ನಂತರದ ಹೆಸರು ಹೊಂದಾಣಿಕೆ ಅಂಕ ಪ್ರಕ್ರಿಯೆಯಲ್ಲಿನ ನ್ಯೂನತೆಗಳು

ಕಂಡಿಕೆ 2.2.1.2ರಲ್ಲಿ ಚರ್ಚಿಸಿದಂತೆ, ಪಾವತಿ ನಂತರದ ಹೆಸರು ಹೊಂದಾಣಿಕೆ ಅಂಕ ಪ್ರಕ್ರಿಯೆಯು ಆಧಾರ್ ಪ್ರಕಾರ ಫಲಾನುಭವಿಯ ಹೆಸರನ್ನು ವಾಸ್ತವವಾಗಿ ಜಮೆಯಾದ ಖಾತೆಯ ವ್ಯಕ್ತಿಯ ಹೆಸರಿನೊಂದಿಗೆ ಹೋಲಿಕೆ ಮಾಡುತ್ತದೆ ಮತ್ತು ಇದಕ್ಕಾಗಿ ಅಂಕವನ್ನು ನಿಗದಿಪಡಿಸಲಾಗುತ್ತದೆ. ಈ ಪ್ರಕ್ರಿಯೆಯನ್ನು ಪ್ರತಿಯೊಂದು ವಹಿವಾಟಿಗೂ ಕೈಗೊಳ್ಳಲಾಗುತ್ತದೆ. ಪಾವತಿಯ ನಂತರದ ಹೆಸರಿನ ಹೊಂದಾಣಿಕೆಯ ಅಂಕ ಪ್ರಕ್ರಿಯೆಯ ಪರಿಶೀಲನೆಯು, ವಿಭಿನ್ನ ವಹಿವಾಟುಗಳ ಒಂದೇ ಹೋಲಿಕೆಯ ಫಲಿತಾಂಶಗಳಿಗೆ ವಿಭಿನ್ನ ಅಂಕಗಳನ್ನು ನೀಡಿರುವುದನ್ನು ತೋರಿಸಿತು ಮತ್ತು ಇದು ಪ್ರಕ್ರಿಯೆಯಲ್ಲಿನ ಅಸಮಂಜಸತೆಯನ್ನು ಸೂಚಿಸುತ್ತದೆ. ಕೆಲವು ಉದಾಹರಣಾತ್ಮಕ ಪ್ರಕರಣಗಳನ್ನು **ಅನುಬಂಧ-2.9**ರಲ್ಲಿ ವಿವರಿಸಲಾಗಿದೆ.

ಇದಲ್ಲದೆ, ಲೆಕ್ಕಪರಿಶೋಧನೆಯು 0-20 ನಡುವಿನ ಅಂಕ ಹೊಂದಿರುವ 22,91,829 ವಹಿವಾಟುಗಳನ್ನು ವಿಶ್ಲೇಷಿಸಿತು ಮತ್ತು ಕೆಳಗೆ ವಿವರಿಸಿದಂತೆ, ಪಾವತಿ ನಂತರದ ಹೆಸರಿನ ಹೊಂದಾಣಿಕೆಯ ದತ್ತಾಂಶದಲ್ಲಿ ಗಮನಾರ್ಹ ಅಂತರವನ್ನು ಗಮನಿಸಿತು:

- ✓ 77,148 ದಾಖಲೆಗಳು ಫಲಾನುಭವಿಗಳ ಹೆಸರನ್ನು ಹೊಂದಿರಲಿಲ್ಲ;
- ✓ 3,210 ದಾಖಲೆಗಳು ಬ್ಯಾಂಕ್ ಖಾತೆ ಹೊಂದಿರುವವರ ಹೆಸರನ್ನು ಹೊಂದಿರಲಿಲ್ಲ;
- ✓ 6,567 ದಾಖಲೆಗಳು ಬ್ಯಾಂಕ್ ಹೆಸರನ್ನು ಹೊಂದಿರಲಿಲ್ಲ;
- ✓ 3,211 ದಾಖಲೆಗಳು ಬ್ಯಾಂಕ್ ಖಾತೆ ನಂಬರನ್ನು ಹೊಂದಿರಲಿಲ್ಲ; ಮತ್ತು
- ✓ 5,610 ದಾಖಲೆಗಳು ಮಾಸ್ಕ್ ಮಾಡಿದ ಆಧಾರ್ ಸಂಖ್ಯೆಗಳನ್ನು ಹೊಂದಿರಲಿಲ್ಲ.

ಮೇಲಿನ ನ್ಯೂನತೆಗಳು ದೃಢೀಕರಣ ನಿಯಂತ್ರಣಗಳ ಕೊರತೆಯನ್ನು ಸೂಚಿಸುತ್ತಿತ್ತು ಮತ್ತು ಹೆಸರು ಹೊಂದಾಣಿಕೆ ಪ್ರಕ್ರಿಯೆಯ ವಿಶ್ವಾಸಾರ್ಹತೆ ಮತ್ತು ಸಮಗ್ರತೆಯ ಮೇಲೆ ಪರಿಣಾಮ ಬೀರುತ್ತದೆ.

ಹೊಂದಾಣಿಕೆಯಾಗದಿರುವುದು ಸಾಫ್ಟ್‌ವೇರ್ ಇಂದೀಕರಣಗಳು ಮತ್ತು ಇತರೆ ಸಮಸ್ಯೆಗಳಿಂದಾಗಿ ಇರಬಹುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021). ಡಿಬಿಟಿ ಕೋಶವು ನಿರಂತರವಾಗಿ ಹೆಸರು ಹೊಂದಾಣಿಕೆ ಅಂಕವನ್ನು ಪರಿಶೀಲಿಸುತ್ತಿದೆ ಮತ್ತು ಅದರ ಪ್ರಕಾರ ಸಿ-ಡಿಎಸಿಗೆ ಅಗತ್ಯವಿರುವ ಬದಲಾವಣೆಗಳನ್ನು ಸೂಚಿಸುತ್ತಿದೆ ಎಂದೂ ಸಹ ಸರ್ಕಾರವು ತಿಳಿಸಿತು.

ಪ್ರಕ್ರಿಯೆಯ ಮೇಲೆ ಪರಿಣಾಮ ಬೀರುವ ಸಾಫ್ಟ್‌ವೇರ್ ಇಂದೀಕರಣಗಳು ಅಪ್ಲಿಕೇಶನ್‌ನಲ್ಲಿನ ಲೋಪವನ್ನು ಸೂಚಿಸುತ್ತದೆ. ಅಲ್ಲದೆ, ಉತ್ತರವು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳಿಗೆ ಕಾರಣಗಳನ್ನು ಮತ್ತು ಭವಿಷ್ಯದಲ್ಲಿ ಅಂತಹ ಲೋಪಗಳನ್ನು ತಪ್ಪಿಸಲು ತೆಗೆದುಕೊಳ್ಳಲಾದ ಪರಿಹಾರಕ ಕ್ರಮಗಳ ಬಗ್ಗೆ ತಿಳಿಸಲಿಲ್ಲ.

2.4 ಭದ್ರತೆ ಮತ್ತು ಗೌಪ್ಯತೆ

2.4.1 ಸರ್ವರ್ ಪ್ರಮಾಣಪತ್ರ ಮತ್ತು ಡಿಜಿಟಲ್ ಸಹಿ

ಸರ್ವರ್ ಪ್ರಮಾಣಪತ್ರ/ಡಿಜಿಟಲ್ ಸಹಿಯು ಫೈಲ್‌ನ ಮೂಲದ ದೃಢೀಕರಣವನ್ನು ಖಚಿತಪಡಿಸುತ್ತದೆ ಮತ್ತು ಫೈಲ್‌ಗಳನ್ನು ತಿದ್ದಲಾಗಿಲ್ಲ ಎಂಬ ಭರವಸೆಯನ್ನು ನೀಡುತ್ತದೆ. ಪಾವತಿ ಅನುಸೂಚಿ ಫೈಲ್‌ಗಳು ಮತ್ತು ಸ್ಥಳೀಯ ಅಪ್ಲಿಕೇಶನ್‌ಗಳಿಂದ ದತ್ತಾಂಶ ದೃಢೀಕರಣಕ್ಕಾಗಿ ಕಳುಹಿಸಲಾದ ಫೈಲ್‌ಗಳು ಪಾವತಿ ವಿವರಗಳು, ಫಲಾನುಭವಿಗಳ ವಿವರಗಳು ಮತ್ತು ಆಧಾರ್ ವಿವರಗಳು ಮುಂತಾದ ಸೂಕ್ಷ್ಮ ಮಾಹಿತಿಯನ್ನು ಒಳಗೊಂಡಿರುತ್ತವೆ. ಈ ಫೈಲ್‌ಗಳು, ಅವುಗಳನ್ನು ಡಿಬಿಟಿ ಪೋರ್ಟಲ್‌ಗೆ ಅಪ್‌ಲೋಡ್ ಮಾಡಲು ಜವಾಬ್ದಾರಿಯುತ ಇಲಾಖೆಯ ಅಧಿಕೃತ ಸಿಬ್ಬಂದಿಯ ಸರ್ವರ್ ಪ್ರಮಾಣಪತ್ರ/ಡಿಜಿಟಲ್ ಸಹಿಯನ್ನು ಹೊಂದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಡಿಬಿಟಿ ಕೋಶವು ಸರ್ವರ್ ಆಧಾರಿತ ಡಿಜಿಟಲ್ ಸಹಿಯನ್ನು ಕಾರ್ಯಗತಗೊಳಿಸುವ ಪ್ರಕ್ರಿಯೆಯಲ್ಲಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021)

2.4.2 ಇಲಾಖಾ ದತ್ತಸಂಚಯದಲ್ಲಿ ಆಧಾರ್ ಸಂಖ್ಯೆಗಳನ್ನು ಸಂಗ್ರಹಿಸಿರುವುದು

ಆಧಾರ್ ಅಧಿನಿಯಮ, 2016 ಮತ್ತು ನಂತರದ ಸುತ್ತೋಲೆಗಳು ಮತ್ತು ಯುಐಡಿಎಐ ಕಾಲಕಾಲಕ್ಕೆ ಹೊರಡಿಸಿದ ಮಾರ್ಗಸೂಚಿಗಳು, ಫಲಾನುಭವಿಗಳಿಂದ ಸಂಗ್ರಹಿಸಲಾದ ಆಧಾರ್ ಸಂಖ್ಯೆಯ ವಿವರಗಳನ್ನು "ಆಧಾರ್ ಡೇಟಾ ವಾಲ್ಟ್" ಎಂಬ ಸುರಕ್ಷಿತ ಪರಿಸರದಲ್ಲಿ ಸಂಗ್ರಹಿಸಬೇಕು ಎಂದು ಷರತ್ತು ವಿಧಿಸುತ್ತದೆ. ಅಲ್ಲದೆ, ಆಧಾರ್ ಸಂಖ್ಯೆಗಳನ್ನು ಗೂಢಲಿಪೀಕರಣ ರೂಪದಲ್ಲಿ ಅಥವಾ ಮಾಸ್ಕ್ ಮಾಡಿ ಆಧಾರ್ ಡೇಟಾ ವಾಲ್ಟ್ ಹೊರತುಪಡಿಸಿ ಬೇರೆ ಯಾವುದೇ ಸಂಗ್ರಹಣೆಯಲ್ಲಿ ಸಂಗ್ರಹಿಸಬಾರದು ಎಂದೂ ಯುಐಡಿಎಐ ನಿಗದಿಪಡಿಸುತ್ತದೆ (ಜುಲೈ 2017). ಪರಿಪೂರ್ಣ ಮಾದರಿಯಾಗಿ, ಆಧಾರ್ ಡೇಟಾ ವಾಲ್ಟ್ ಆಧಾರ್ ಸಂಖ್ಯೆಗಳು ಮತ್ತು ಅನುಗುಣವಾದ ಉಲ್ಲೇಖ ಸಂಖ್ಯೆಗಳ ಹೊಂದಾಣಿಕೆಯನ್ನು ನಿರ್ವಹಿಸಬೇಕು. ಆದುದರಿಂದ, ಡೇಟಾ ವಾಲ್ಟ್‌ಗೆ ಯಾವುದೇ ಲಭ್ಯತೆಯು ಈ ಹೊಂದಾಣಿಕೆಯನ್ನು ಉಲ್ಲೇಖಿಸಲು ಮಾತ್ರ ಇರಬೇಕು.

ಇಲಾಖೆಗಳು ತಮ್ಮ ದತ್ತಸಂಚಯಗಳಲ್ಲಿ ಆಧಾರ್ ವಿವರಗಳನ್ನು ಸಂಗ್ರಹಿಸಿರುವುದನ್ನು ಮತ್ತು ಫಲಾನುಭವಿಗಳ ಆಧಾರ್ ವಿವರಗಳನ್ನು ಒದಗಿಸುವ ಮೂಲಕ ಫಲಾನುಭವಿಗಳ ದೃಢೀಕರಣ ಮತ್ತು ಪಾವತಿ ವಿವರಗಳಿಗಾಗಿ ಡಿಬಿಟಿ ಪೋರ್ಟಲ್‌ನೊಂದಿಗೆ ಸಂವಹನ ನಡೆಸುತ್ತಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಜೂನ್ 2021ರಿಂದ ಆಧಾರ್ ಅನ್ನು ಸೇವೆಯ ರೂಪದಲ್ಲಿ ಜಾರಿಗೊಳಿಸಲಾಗಿದೆ ಮತ್ತು ಫಲಾನುಭವಿಗಳ ಆಧಾರ್ ವಿವರಗಳನ್ನು ಹಾರ್ಡ್‌ವೇರ್ ಸೆಕ್ಯುರಿಟಿ ಮಾಡ್ಯೂಲ್ ಬಳಸಿ ಆಧಾರ್ ವಾಲ್ಟ್‌ನಲ್ಲಿ ಸಂಗ್ರಹಿಸಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021). ವಿಶಿಷ್ಟ ವಾಲ್ಟ್ ರೆಫರೆನ್ಸ್ ಸಂಖ್ಯೆಯನ್ನು ಅಳವಡಿಸಿದ ನಂತರ, ಇಲಾಖೆಗಳು ತಮ್ಮ ಸ್ಥಳೀಯ ದತ್ತಸಂಚಯದಲ್ಲಿ ಆಧಾರ್ ಸಂಖ್ಯೆಯನ್ನು ಅಳಿಸಿಹಾಕಬೇಕಿತ್ತು ಮತ್ತು ಡಿಬಿಟಿ ಕೋಶವು ತನ್ನ ಸ್ಥಳೀಯ ದತ್ತಸಂಚಯದಿಂದ ಆಧಾರ ಸಂಖ್ಯೆಯನ್ನು ತೆಗೆದುಹಾಕುವ ಬಗ್ಗೆ ಸಂಬಂಧಿತ ಇಲಾಖೆಗಳಿಂದ ಮುಚ್ಚಳಿಕೆ ಪಡೆಯಲಿದೆ ಎಂದೂ ಸಹ ಸರ್ಕಾರವು ತಿಳಿಸಿತು (ಜನವರಿ 2022).

2.4.3 ಭದ್ರತಾ ಲೆಕ್ಕಪರಿಶೋಧನೆ

ಮಾಹಿತಿ ತಂತ್ರಜ್ಞಾನ ಕಾಯಿದೆ, 2000ರ ಪರಿಚ್ಛೇದ 43ಎ ಮತ್ತು ಅದರಡಿಯಲ್ಲಿನ ನಿಯಮಗಳ ಅನ್ವಯ ಕನಿಷ್ಠ ವರ್ಷಕ್ಕೊಮ್ಮೆ ಅಥವಾ ಮೂಲಸೌಕರ್ಯಗಳ ಗಮನಾರ್ಹವಾದ ಉನ್ನತೀಕರಣವು ಸಂಭವಿಸಿದಾಗ ಕೇಂದ್ರ ಸರ್ಕಾರದಿಂದ ಅನುಮೋದಿಸಲ್ಪಟ್ಟ ಸ್ವತಂತ್ರ ಲೆಕ್ಕಪರಿಶೋಧಕರಿಂದ ಭದ್ರತಾ ಪರಿಶೋಧನೆಯನ್ನು ನಡೆಸುವುದು ಅಗತ್ಯವಾಗಿದೆ. ಅದೇ ರೀತಿ, ಪ್ರತಿ ಜಾಲತಾಣ/ಅಪ್ಲಿಕೇಶನ್‌ಗಳು

ಸಹ ಭದ್ರತಾ ಪರಿಶೋಧನೆಗೆ ಒಳಗಾಗಬೇಕು ಎಂದು ಭಾರತ ಸರ್ಕಾರದ ಮಾರ್ಗಸೂಚಿಗಳು ಷರತ್ತು ವಿಧಿಸುತ್ತವೆ.

ಮೂರನೇ ವ್ಯಕ್ತಿಯಿಂದ ಡಿಬಿಟಿ ಜಾಲ ಅಪ್ಲಿಕೇಶನ್‌ನ ಭದ್ರತಾ ಪರಿಶೋಧನೆಯನ್ನು 9 ಜೂನ್ 2019 ರಂದು ನಡೆಸಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಇದು ದುರ್ಬಲತೆಯ ಮೌಲ್ಯಮಾಪನ ಮತ್ತು ಒಳಭೇದನ ಪರೀಕ್ಷೆ, ಇತರ ಅಪ್ಲಿಕೇಶನ್‌ಗಳೊಂದಿಗೆ ಏಕೀಕರಣದ ಪರಿಶೀಲನೆ ಮತ್ತು ಅದರ ವ್ಯಾಪ್ತಿಯಲ್ಲಿರುವ ನಿಯಂತ್ರಣಗಳಲ್ಲಿನ ಎಲ್ಲಾ ದೌರ್ಬಲ್ಯಗಳ ಪತ್ತೆಯನ್ನು ಒಳಗೊಂಡಿರಲಿಲ್ಲ. ಭದ್ರತಾ ಲೆಕ್ಕಪರಿಶೋಧನೆಯ ಆವರ್ತಕತೆ ಮತ್ತು ವ್ಯಾಪ್ತಿಯು ಸಾಕಷ್ಟಿಲ್ಲದ ಕಾರಣ, ಸಾರ್ವಜನಿಕ ವಲಯದಲ್ಲಿರುವ ಡಿಬಿಟಿ ಅಪ್ಲಿಕೇಶನ್/ಪೋರ್ಟಲ್‌ನಲ್ಲಿ ಭದ್ರತಾ ನಿಯಂತ್ರಣಗಳ ದೃಢತೆಯ ಮೇಲೆ ಭರವಸೆಯನ್ನು ಪಡೆಯಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ.

ಕೋರ್ ಡಿಬಿಟಿ ಪೋರ್ಟಲ್‌ನ ಒಳಭೇದನ ಪರೀಕ್ಷೆಯನ್ನು ಕೈಗೊಳ್ಳಲು ರಾಜ್ಯ ಸರ್ಕಾರವು ಒಪ್ಪಿಕೊಂಡಿತು (ಜನವರಿ 2022).

2.4.4 ಅಪಾಯ ನಿರ್ವಹಣೆ

ಗೌಪ್ಯತೆ, ಸಮಗ್ರತೆ ಅಥವಾ ಲಭ್ಯತೆಯ ನಷ್ಟವು ಕಾರ್ಯಾಚರಣೆಗಳು, ಸ್ವತ್ತುಗಳು ಅಥವಾ ವ್ಯಕ್ತಿಗಳ ಮೇಲೆ ಬೀರುವ ಸಂಭಾವ್ಯ ಪ್ರಭಾವದ ಆಧಾರದ ಮೇಲೆ ಮಾಹಿತಿ ವ್ಯವಸ್ಥೆಗಳನ್ನು ವರ್ಗೀಕರಿಸಬೇಕು. ಅಪಾಯಗಳನ್ನು ಆವರ್ತಕ ಆಧಾರದ ಮೇಲೆ ಅಥವಾ ವ್ಯವಸ್ಥೆಗಳು, ಅಪ್ಲಿಕೇಶನ್‌ಗಳು, ಸೌಲಭ್ಯಗಳು ಅಥವಾ ಇತರ ಪರಿಸ್ಥಿತಿಗಳು ಬದಲಾವಣೆಗೊಂಡಾಗ ಮರುಮೌಲ್ಯಮಾಪನ ಮಾಡಬೇಕು. ಅಪಾಯ ನಿರ್ವಹಣಾ ದಾಖಲಾತಿಯು ಭದ್ರತಾ ಯೋಜನೆಗಳು, ಅಪಾಯದ ಮೌಲ್ಯಮಾಪನಗಳು, ಭದ್ರತಾ ಪರೀಕ್ಷೆ ಮತ್ತು ಮೌಲ್ಯಮಾಪನ ಫಲಿತಾಂಶಗಳು ಹಾಗೂ ಸೂಕ್ತ ನಿರ್ವಹಣಾ ಅನುಮೋದನೆಗಳನ್ನು ಒಳಗೊಂಡಿರಬೇಕು. ವ್ಯವಸ್ಥೆಗಳು, ಸೌಲಭ್ಯಗಳು ಅಥವಾ ಇತರ ಪರಿಸ್ಥಿತಿಗಳಲ್ಲಿನ ಬದಲಾವಣೆಗಳು ಮತ್ತು ಗುರುತಿಸಲಾದ ಭದ್ರತಾ ದೋಷಗಳನ್ನು ಅಪಾಯದ ಮೇಲೆ ಅವುಗಳ ಪ್ರಭಾವವನ್ನು ನಿರ್ಧರಿಸಲು ವಿಶ್ಲೇಷಿಸಬೇಕು ಮತ್ತು ಅಪಾಯದ ಮೌಲ್ಯಮಾಪನವನ್ನು ನಿರ್ವಹಿಸಬೇಕು ಅಥವಾ ಅಗತ್ಯವಿರುವಂತೆ ಪರಿಷ್ಕರಿಸಬೇಕು.

ರಾಜ್ಯ ಸರ್ಕಾರದ ಸೂಚನೆಗಳ ಪ್ರಕಾರ (ಆಗಸ್ಟ್ 2018), ಎಲ್ಲಾ ಡಿಬಿಟಿ ಯೋಜನೆಗಳನ್ನು ಕೋರ್ ಡಿಬಿಟಿ ಪೋರ್ಟಲ್‌ಗೆ ಸೇರ್ಪಡೆ ಮಾಡಬೇಕಾಗಿತ್ತು. ಅಪ್ಲಿಕೇಶನ್‌ನ ಭವಿಷ್ಯದ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಅದರ ಕಾರ್ಯಾಚರಣೆಯ ದಕ್ಷತೆಯನ್ನು ಕಾಪಾಡಿಕೊಳ್ಳಲು ಕೋರ್ ಡಿಬಿಟಿ ಪೋರ್ಟಲ್ ಅಪಾಯದ ವಿಶ್ಲೇಷಣೆಗೆ ಒಳಪಡುವ ಅಗತ್ಯವಿತ್ತು., ಲೆಕ್ಕಪರಿಶೋಧನೆಯು ಈ ಕೆಳಗಿನವುಗಳನ್ನು ಗಮನಿಸಿತು:

- ಕೋರ್ ಡಿಬಿಟಿ ಪೋರ್ಟಲ್‌ಗಾಗಿ ಆವರ್ತಕ ಅಪಾಯದ ವಿಶ್ಲೇಷಣೆಯನ್ನು ನಡೆಸಲು ನೀತಿಗಳು ಮತ್ತು ಕಾರ್ಯವಿಧಾನಗಳನ್ನು ಇನ್ನೂ ನಿರ್ಧರಿಸಲಾಗಿಲ್ಲ ಮತ್ತು ಅಸ್ತಿತ್ವದಲ್ಲಿಲ್ಲ.
- ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗಳು ಮತ್ತು ಸಂಪನ್ಮೂಲಗಳು, ದುರ್ಬಲತೆಗಳು ಮತ್ತು ಅನಾವರಣತೆ, ನೀತಿಗಳು ಮತ್ತು ನಿಯಂತ್ರಣ ಕ್ರಮಗಳು, ಮತ್ತು ನಿರ್ವಾಹಕ ಮಂಡಲಿಯೇ ಒಪ್ಪಿದ ಪರಿಹಾರ ಕಾಣದ ಅಪಾಯಗಳನ್ನು ಗುರುತಿಸಲು ಮತ್ತು ದಾಖಲಿಸಲು ಔಪಚಾರಿಕ ಅಪಾಯದ ಮೌಲ್ಯಮಾಪನವನ್ನು ನಡೆಸಲಾಗಿಲ್ಲ.
- ವ್ಯವಸ್ಥೆಯ ಅಭಿವೃದ್ಧಿ ಮತ್ತು ಬದಲಾವಣೆ ಚಟುವಟಿಕೆಗಳ ಸಮಯದಲ್ಲಿ ಸೂಕ್ತ ಮಟ್ಟದ ಡೇಟಾ ರಕ್ಷಣೆಗೆ ಸಂಬಂಧಿಸಿದಂತೆ ಅಪಾಯ ಮತ್ತು ಬೆಂಬಲ ನಿರ್ಧರಣೆ ಪ್ರಾಮುಖ್ಯತೆಗೆ ಅನುಸಾರವಾಗಿ ಫಲಾನುಭವಿಗಳ ದತ್ತಾಂಶದ ವರ್ಗೀಕರಣದ ನೀತಿಯನ್ನು ಡಿಬಿಟಿ ಪೋರ್ಟಲ್ ಹೊಂದಿರಲಿಲ್ಲ.

ಕೋರ್ ಡಿಬಿಟಿ ಪೋರ್ಟಲ್‌ನ ಅಪಾಯದ ಮೌಲ್ಯಮಾಪನವನ್ನು ಕೈಗೊಳ್ಳಲು ರಾಜ್ಯ ಸರ್ಕಾರವು ಒಪ್ಪಿಗೆ ನೀಡಿತು (ಜನವರಿ 2022).

2.4.5 ಡಿಬಿಟಿ ಪೋರ್ಟಲ್‌ಗೆ ಸಂಬಂಧಿಸಿದ ಲೆಕ್ಕಪರಿಶೋಧನಾ ಆವಿಷ್ಕಾರಗಳ ಮೇಲೆ ತೆಗೆದುಕೊಂಡ ಕ್ರಮ

ಪ್ರತಿಕ್ರಿಯೆಗಾಗಿ ಡಿಬಿಟಿ ಕೋಶಕ್ಕೆ ಕಳುಹಿಸಲಾದ ಕೆಲವು ವಿಷಯಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪರಿಹಾರಕ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು (ಡಿಸೆಂಬರ್ 2021). ಆದಾಗ್ಯೂ, ನಂತರದ ಲೆಕ್ಕಪರಿಶೋಧನೆಯ ಸಮಯದಲ್ಲಿ ಇವುಗಳನ್ನು ಪರಿಶೀಲಿಸಬೇಕಾಗಿದೆ. ಗಮನಿಸಲಾದ ನ್ಯೂನತೆಗಳು ಮತ್ತು ಕೈಗೊಳ್ಳಲಾಗಿದೆ ಎಂದು ತಿಳಿಸಿರುವ ಪರಿಹಾರಕ ಕ್ರಮಗಳನ್ನು ಕೆಳಗೆ ವಿವರಿಸಲಾಗಿದೆ:

- ಯೋಜನೆಯಡಿಯಲ್ಲಿ ವೈಯಕ್ತಿಕ ಫಲಾನುಭವಿಗೆ ತಲುಪುವ ಒಟ್ಟು ಪ್ರಯೋಜನಗಳ ಮಾಹಿತಿಯನ್ನು ಒಟ್ಟುಗೂಡಿಸಲು ಇಲಾಖೆಗಳು ಮತ್ತು ಸರ್ಕಾರಕ್ಕೆ ಅನುವಾಗಿಸಲು ಯೋಜನೆಗಳಾದ್ಯಂತ ವಿಶಿಷ್ಟವಾದ ವಾಲ್ಟ್ ಉಲ್ಲೇಖ ಸಂಖ್ಯೆಯನ್ನು ಅನುಷ್ಠಾನಗೊಳಿಸಿರಲಿಲ್ಲ. ಯೋಜನೆಗಳಾದ್ಯಂತ ಪ್ರತಿ ಫಲಾನುಭವಿಗೆ ವಿಶಿಷ್ಟವಾದ ವಾಲ್ಟ್ ಉಲ್ಲೇಖ ಸಂಖ್ಯೆಯನ್ನು ನವೆಂಬರ್ 2021ರಲ್ಲಿ ಜಾರಿಗೊಳಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಡಿಸೆಂಬರ್ 2021).

- ಕ್ರಿಯಾತ್ಮಕ ಅವಶ್ಯಕತೆ ವಿಶೇಷತೆಗಳಲ್ಲಿ ನಿಗದಿಪಡಿಸಲಾಗಿದ್ದರೂ ಸಹ ಬಯೋಮೆಟ್ರಿಕ್ ದೃಢೀಕರಣ ಮಾಡ್ಯೂಲನ್ನು ಕೋರ್ ಡಿಬಿಟಿ ಪೋರ್ಟಲ್‌ನಲ್ಲಿ ಹೊಂದಿಕೆ ಮಾಡಲಾಗಿಲ್ಲ. ಆಧಾರ್ ಅನ್ನು ಸೇವೆಯಾಗಿ ಅಭಿವೃದ್ಧಿಪಡಿಸಲಾಗಿದೆ ಮತ್ತು ಅದು ಬಯೋಮೆಟ್ರಿಕ್ ಇ–ಕೆವೈಸಿ ಎಂಬ ಒಂದು ಘಟಕವನ್ನು ಒಳಗೊಂಡಿದೆ ಎಂದು ಸರ್ಕಾರವು ತಿಳಿಸಿತು (ಜನವರಿ 2022). ಯಾವುದೇ ಇಲಾಖೆಯು ಈ ಮಾಹಿತಿಯನ್ನು ಕೇಳಿದಾಗ ಅದನ್ನು ಆಧಾರ್‌ನಲ್ಲಿ ಸೇವೆಯ ರೂಪದಲ್ಲಿ ಸಕ್ರಿಯಗೊಳಿಸಲಾಗುತ್ತದೆ.

ಅಧ್ಯಾಯ–3

ಆಯ್ದ ಯೋಜನೆಗಳಲ್ಲಿ ಡಿಬಿಟಿ ಅನುಷ್ಠಾನ

ಅಧ್ಯಾಯ–3
ಆಯ್ದ ಯೋಜನೆಗಳಲ್ಲಿ ಡಿಬಿಟಿ ಅನುಷ್ಠಾನ

ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯು ಹಾಲು ಪ್ರೋತ್ಸಾಹಧನ, ರೈತಸಿರಿ, ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ ಮತ್ತು ಪಿಎಮ್‌ಕೆಎಸ್‌ಎನ್ (ರಾಜ್ಯ ಘಟಕ) ಯೋಜನೆಗಳ ಅಡಿಯಲ್ಲಿ ಡಿಬಿಟಿ ಅನುಷ್ಠಾನದ ಮೇಲೆ ಕೇಂದ್ರೀಕರಿಸಿದೆ. ಈ ಅಧ್ಯಾಯವು ಪರೀಕ್ಷಾ–ತನಿಖೆ ನಡೆಸಲಾದ ಈ ಯೋಜನೆಗಳಲ್ಲಿ ಗಮನಿಸಿದ ಲೆಕ್ಕಪರಿಶೋಧನೆಯ ಅವಿಷ್ಕಾರಗಳನ್ನು ಒಳಗೊಂಡಿದೆ.

3.1 ಹಾಲು ಪ್ರೋತ್ಸಾಹಧನ ಯೋಜನೆ

ರಾಜ್ಯ ಸರ್ಕಾರವು (ಸೆಪ್ಟೆಂಬರ್ 2008) ಹಾಲು ಒಕ್ಕೂಟಗಳ ಅಡಿಯಲ್ಲಿ ಹಾಲಿನ ಸಹಕಾರಿ ಸಂಘಗಳಿಗೆ ಹಾಲು ಸುರಿಯುವವರಿಗೆ ಪ್ರೋತ್ಸಾಹವನ್ನು ನೀಡುವ ಗುರಿಯನ್ನು ಹೊಂದಿರುವ ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯಿಂದ ಜಾರಿಗೆ ತರಲು ಹಾಲು ಪ್ರೋತ್ಸಾಹಧನ ಯೋಜನೆ[10] ಅನುಷ್ಠಾನಕ್ಕೆ ಅನುಮೋದನೆ ನೀಡಿತು. ಹಾಲು ಸಂಘಗಳು ಫಲಾನುಭವಿಗಳಿಗೆ 31 ಡಿಸೆಂಬರ್ 2014 ರವರೆಗೆ ನಗದು ಪಾವತಿಸುತ್ತಿದ್ದವು. 1 ಜನವರಿ 2015ರಿಂದ, ಪ್ರೋತ್ಸಾಹಧನವನ್ನು ಒಕ್ಕೂಟಗಳಿಂದ ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಫಲಾನುಭವಿಗಳ ಖಾತೆಗಳಿಗೆ ವರ್ಗಾಯಿಸಲಾಗುತ್ತಿತ್ತು. 1 ಆಗಸ್ಟ್ 2016ರಿಂದ, ಫಲಾನುಭವಿಗಳ ಆಧಾರ್ ಆಧಾರಿತ ಬ್ಯಾಂಕ್ ಖಾತೆಗಳಿಗೆ ಒಕ್ಕೂಟಗಳಿಂದ ಪ್ರೋತ್ಸಾಹಧನವನ್ನು ವರ್ಗಾಯಿಸಲಾಗುತ್ತಿತ್ತು ಮತ್ತು 1 ಏಪ್ರಿಲ್ 2019ರಿಂದ "ಕ್ಷೀರಸಿರಿ ಅಪ್ಲಿಕೇಶನ್" (ಸ್ಥಳೀಯ ಪೋರ್ಟಲ್) ಮತ್ತು ಕೋರ್ ಡಿಬಿಟಿ ಅಪ್ಲಿಕೇಶನ್ (ರಾಜ್ಯ ಡಿಬಿಟಿ ಮೀಸಲಾದ ಪೋರ್ಟಲ್)" ಮೂಲಕ ಹಾಲು ಸುರಿಯುವವರ ಆಧಾರ್ ಜೋಡಿತ ಬ್ಯಾಂಕ್ ಖಾತೆಗೆ ಪ್ರೋತ್ಸಾಹಧನವನ್ನು ಪಾವತಿಸಲಾಗುತ್ತಿದೆ.

ಡಿಬಿಟಿ ಪಾವತಿಗಳ ದತ್ತಾಂಶವನ್ನು ಕರ್ನಾಟಕ ಹಾಲು ಒಕ್ಕೂಟವು (ಕೆಎಮ್‌ಎಫ್) ಅದರ ಸೊಸೈಟಿಗಳು, ಶಿಬಿರ ಕಚೇರಿಗಳು ಮತ್ತು ಒಕ್ಕೂಟಗಳ ಮೂಲಕ ರಚಿಸುತ್ತದೆ, ಸಂಸ್ಕರಿಸುತ್ತದೆ ಮತ್ತು ದೃಢೀಕರಿಸುತ್ತದೆ ಹಾಗೂ ನಂತರ ಹೆಚ್ಚಿನ ಪ್ರಕ್ರಿಯೆಗಾಗಿ ಕ್ಷೀರಸಿರಿ ಅಪ್ಲಿಕೇಶನ್‌ಗೆ ಸಲ್ಲಿಸುತ್ತದೆ. 2017–18ರಲ್ಲಿ ಬೆಂಗಳೂರು ಮತ್ತು ಮೈಸೂರು ಒಕ್ಕೂಟಗಳಲ್ಲಿ ಈ ಅಪ್ಲಿಕೇಶನ್ ಅನ್ನು ಪ್ರಾಯೋಗಿಕ ಯೋಜನೆಯಾಗಿ ಕಾರ್ಯಗತಗೊಳಿಸಲಾಯಿತು.

ಪ್ರಸ್ತುತ, ಹಾಲು ಸುರಿಯುವವರು ಸುರಿಯುವ ಹಾಲಿನ ಗುಣಮಟ್ಟವು 3.5 ಕೊಬ್ಬಿನಾಂಶ ಮತ್ತು 8.5 ಎಸ್‌ಎನ್‌ಎಫ್[11] ನಿಗದಿತ ಮಾನದಂಡಗಳನ್ನು ಪೂರೈಸಿದರೆ ರಾಜ್ಯ ಸರ್ಕಾರವು ಪ್ರತಿ ಲೀಟರ್ ಹಾಲಿಗೆ ₹5 ಪ್ರೋತ್ಸಾಹಧನವನ್ನು ಪಾವತಿಸುತ್ತದೆ. ಒಕ್ಕೂಟಗಳಾದ್ಯಂತ (ಹಾಲು ಡೈರಿಗಳು) ತಮ್ಮ ವ್ಯಾಪ್ತಿಯ ಹಾಲು ಸಂಘಗಳಿಗೆ ಸೂಚಿಸಿದ ದರಗಳ ಪ್ರಕಾರ ಬದಲಾಗುವ ಹಾಲಿನ ದರದ ಜೊತೆಗೆ ಈ ಪ್ರೋತ್ಸಾಹಧನದ ಮೊತ್ತವನ್ನು ಪ್ರತಿ ಲೀಟರ್ ಹಾಲಿಗೆ ಹಾಲು ಸುರಿಯುವವರಿಗೆ ಪಾವತಿಸಲಾಗುತ್ತದೆ.

3.1.1 ಹಣದ ಬಿಡುಗಡೆ ಮತ್ತು ಬಳಕೆ

2018–19 ಮತ್ತು 2019–20ರ ಅವಧಿಯಲ್ಲಿ ಯೋಜನೆಯಡಿಯಲ್ಲಿ ಹಣದ ಬಿಡುಗಡೆ ಮತ್ತು ಬಳಕೆಯ ಸ್ಥಿತಿಯನ್ನು **ಕೋಷ್ಟಕ–3.1**ರಲ್ಲಿ ನೀಡಲಾಗಿದೆ.

---

[10] ಕರ್ನಾಟಕ ಸರ್ಕಾರದ ಆದೇಶ ಎಹೆಚ್‌ಎಫ್ 53–2008 ಕೆಎಮ್‌ಎಫ್ ಬೆಂಗಳೂರು ದಿನಾಂಕ 08.09.2008

[11] ಕೊಬ್ಬಿನಾಂಶವಲ್ಲದ ಸಾಂದ್ರತೆ

ಕೋಷ್ಟಕ-3.1: ನಿಧಿಯ ಬಿಡುಗಡೆ ಮತ್ತು ಬಳಕೆಯ ಸ್ಥಿತಿ

(₹ ಕೋಟಿಗಳಲ್ಲಿ)

ವರ್ಷ	ಬಿಡುಗಡೆ ಮಾಡಿದ ಮೊತ್ತ	ಭರಿಸಿದ ವೆಚ್ಚ	ಶಿಲ್ಕು
2018-19	1486.22	1460.19	26.03
2019-20	1336.77	1260.82	75.94

ಆಧಾರ: ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯು ಒದಗಿಸಿದ ಮಾಹಿತಿ

ಪ್ರತಿ ವರ್ಷ ಸಂಭವಿಸಿದ ಬಾಕಿಯಿರುವ ಮತ್ತು ತಿರಸ್ಕೃತ ವಹಿವಾಟುಗಳು ಹಣದ ಬಳಕೆಯಾಗದಿರುವುದಕ್ಕೆ ಕಾರಣಗಳಾಗಿದ್ದವು. ಬಳಕೆಯಾಗದ ಹಣವನ್ನು ಇಲಾಖೆ ಅಧ್ಯರ್ಪಣೆ ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

3.1.2 ಕ್ಷೀರಸಿರಿ ಅಪ್ಲಿಕೇಶನ್

ಕ್ಷೀರಸಿರಿ ಎಂಬುದು ಹಾಲು ಸುರಿಯುವವರಿಗೆ ಪ್ರೋತ್ಸಾಹಧನವನ್ನು ವರ್ಗಾಯಿಸಲು ಅಭಿವೃದ್ಧಿಪಡಿಸಲಾದ ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯ ಸ್ಥಳೀಯ ಪೋರ್ಟಲ್ ಆಗಿದೆ. ಅಪ್ಲಿಕೇಶನ್ ಫಲಾನುಭವಿಗಳ ನೋಂದಣಿ, ಫಲಾನುಭವಿಗಳ ಆಧಾರ್ ಜೋಡಣೆ, ಫಲಾನುಭವಿಗಳ ದೃಢೀಕರಣ, ವಿವಿಧ ಹಂತಗಳಲ್ಲಿ ದತ್ತಾಂಶದ ನಕಲು ಮತ್ತು ಮರು-ಪ್ರವೇಶವನ್ನು ತಡೆಗಟ್ಟುವುದು/ಕಡಿಮೆಗೊಳಿಸುವುದು, ಫಲಾನುಭವಿಗಳ ಪಾವತಿ ಅನುಸೂಚಿ ಫೈಲ್‌ಗಳನ್ನು ಪ್ರಕ್ರಿಯೆಗೊಳಿಸುವುದು, ಮೇಲ್ವಿಚಾರಣೆ, ನಿರ್ವಹಣೆ ಮತ್ತು ಅನುಷ್ಠಾನ ಇತ್ಯಾದಿಗಳನ್ನು ಒಳಗೊಂಡಿತ್ತು. ಈ ಅಪ್ಲಿಕೇಶನ್‌ನ ಪ್ರಕ್ರಿಯೆ ವಿಧಾನವನ್ನು **ನಕ್ಷೆ-3.1**ರಲ್ಲಿ ತೋರಿಸಲಾಗಿದೆ.

ನಕ್ಷೆ-3.1: ಕ್ಷೀರಸಿರಿ ಅಪ್ಲಿಕೇಶನ್‌ನ ಪ್ರಕ್ರಿಯೆ ವಿಧಾನ



3.1.2.1 ಕ್ಷೀರಸಿರಿ ಅಪ್ಲಿಕೇಶನ್‌ನ ನಿರ್ವಹಣೆ

ಕ್ಷೀರಸಿರಿ ಅಪ್ಲಿಕೇಶನ್ ಪ್ರತಿ ಮಾಡ್ಯೂಲ್‌ಗೆ ಲಗತ್ತಿಸಲಾದ ವಿವಿಧ ಕಾರ್ಯಚಟುವಟಿಕೆಗಳ ಸಮರ್ಥ ಮತ್ತು ಪರಿಣಾಮಕಾರಿ ನಿರ್ವಹಣೆಗಾಗಿ 11 ಮಾಡ್ಯೂಲ್‌ಗಳನ್ನು[12] ಒಳಗೊಂಡಿದೆ. ಈ ಮಾಡ್ಯೂಲ್‌ಗಳ ಸ್ಥಿತಿಯನ್ನು **ಕೋಷ್ಟಕ–3.2**ರಲ್ಲಿ ತೋರಿಸಲಾಗಿದೆ.

ಕೋಷ್ಟಕ–3.2: ಕ್ಷೀರಸಿರಿ ಅಪ್ಲಿಕೇಶನ್‌ನ ಮಾಡ್ಯೂಲ್‌ಗಳ ಸ್ಥಿತಿ

ಕ್ರಮ ಸಂಖ್ಯೆ	ಮಾಡ್ಯೂಲ್	ನಿರ್ವಹಿಸುವ ಕಾರ್ಯ	ಸ್ಥಿತಿ
1	ಮಾಸ್ಟರ್ ಡೇಟಾ ಕ್ರಿಯೇಶನ್ ಮಾಡ್ಯೂಲ್	ಆಡಳಿತಾತ್ಮಕ ಕಾರ್ಯಗಳು	ಅನುಷ್ಠಾನಗೊಳಿಸಲಾಗಿದೆ
2	ಹಾಲು ಹಾಕುವವರ ನೋಂದಣಿ	ಸಹಕಾರ ಸಂಘಗಳ ಹಂತದಲ್ಲಿ ಫಲಾನುಭವಿಗಳ ನೋಂದಣಿ ಮತ್ತು ಆಧಾರ್‌ನೊಂದಿಗೆ ದತ್ತಸಂಚಯದ ಜೋಡಣೆ	
3	ಹಾಲು ಹಾಕುವವರ ಸಂಗ್ರಹಣೆ ಮತ್ತು ಸ್ಥಳೀಯ ಮಾರಾಟ ದತ್ತಾಂಶದ ಇಂದೀಕರಣ	ಅರ್ಹ ಗುಣಮಟ್ಟ ಮತ್ತು ಪರಿಮಾಣದೊಂದಿಗೆ ಹಾಲು ಹಾಕುವವರ ಮಾಸಿಕ ಇಂದೀಕರಣ	ಅನುಷ್ಠಾನಗೊಳಿಸಲಾಗಿದೆ
4	ಸ್ಥಳೀಯ ಮಾರಾಟ ಪುರಾವೆ ಅಪ್‌ಲೋಡ್	ಹಾಲಿನ ಸ್ಥಳೀಯ ಮಾರಾಟಗಳ ಪುರಾವೆಯ ಅಪ್‌ಲೋಡ್	ಅನುಷ್ಠಾನಗೊಳಿಸಿಲ್ಲ
5	ಹಾಲು ಶೈತ್ಯಾಗಾರ (ಸಿಸಿ)/ಸಗಟು ಹಾಲು ಶೀತಕಯಂತ್ರದ (ಬಿಎಮ್‌ಸಿ) ದತ್ತಾಂಶದ ಅಪ್‌ಲೋಡ್	ಸಂಘದಿಂದ ಸಂಗ್ರಹಿಸಲಾದ ಹಾಲಿನ ದತ್ತಾಂಶದ ಸಮನ್ವಯ	ಅನುಷ್ಠಾನಗೊಳಿಸಿಲ್ಲ
6	ಒಕ್ಕೂಟ ಮಟ್ಟದ ಸಂಸ್ಕರಣೆ ಸೌಲಭ್ಯ ದತ್ತಾಂಶದ ಅಪ್‌ಲೋಡ್	ಸಿಸಿ/ಬಿಎಮ್‌ಸಿ ಯಿಂದ ಸಂಗ್ರಹಿಸಿದ ಹಾಲಿನ ದತ್ತಾಂಶದ ಹೊಂದಾಣಿಕೆ	ಅನುಷ್ಠಾನಗೊಳಿಸಿಲ್ಲ
7	ದತ್ತಾಂಶ ದೃಢೀಕರಣ	ಸಹಕಾರ ಸಂಘದ, ಸಿಸಿ/ಬಿಎಮ್‌ಸಿ ಮತ್ತು ಒಕ್ಕೂಟ ಹಂತದ ದತ್ತಾಂಶದ ದೃಢೀಕರಣ	ದೃಢೀಕರಣಗಳನ್ನು ಹಸ್ತಚಾಲಿತವಾಗಿ ಮಾಡಲಾಗುತ್ತಿದೆ. ದತ್ತಾಂಶದ ಸ್ವಯಂಚಾಲಿತ ದೃಢೀಕರಣವು ಯಾವುದೇ ಹಂತದಲ್ಲಿಯೂ ಇಲ್ಲ.
8	ವಿನಾಯಿತಿಗಳ ವರದಿ	ಅಸಹಜ ಪ್ರವೃತ್ತಿಯನ್ನು ಪತ್ತೆಹಚ್ಚಲು ಮತ್ತು ವರದಿ ಮಾಡಲು	ಅನುಷ್ಠಾನಗೊಳಿಸಿಲ್ಲ

[12] ಕ್ಷೀರಸಿರಿ ಅಪ್ಲಿಕೇಶನ್ ಸಂಬಂಧಿತ ಕಾರ್ಯಶೀಲ ಅಗತ್ಯತೆಗಳ ವಿಶೇಷಣಗಳಲ್ಲಿ ವಿವರಿಸಿದಂತೆ

ಕ್ರಮ ಸಂಖ್ಯೆ	ಮಾಡ್ಯೂಲ್	ನಿರ್ವಹಿಸುವ ಕಾರ್ಯ	ಸ್ಥಿತಿ
9	ಲೆಕ್ಕಪರಿಶೋಧನೆ	ಶಿಬಿರ ಮತ್ತು ಒಕ್ಕೂಟದ ಹಂತದಲ್ಲಿ ವ್ಯತ್ಯಯಗಳು, ಅಸಮಂಜತೆ, ವಿನಾಯಿತಿಗಳ ವರದಿ ಮುಂತಾದವುಗಳ ಬಗ್ಗೆ ಯಾಂತ್ರಿಕ ಮತ್ತು ಹಸ್ತಚಾಲಿತ ಎರಡೂ ಬಗೆಯ ಲೆಕ್ಕಪರಿಶೋಧನಾ ಬೇಡಿಕೆಗಳ ನಿಭಾವಣೆ	ಅನುಷ್ಠಾನಗೊಳಿಸಿಲ್ಲ
10	ಪಾವತಿ ಅನುಸೂಚಿ ಸಂಸ್ಕರಣೆ	ಕೋರ್ ಡಿಬಿಟಿ ಪೋರ್ಟಲ್‌ಗೆ ಕಳುಹಿಸಲು ಪಾವತಿ ಅನುಸೂಚಿ ಫೈಲ್ ತಯಾರಿಕೆ	ಅನುಷ್ಠಾನಗೊಳಿಸಲಾಗಿದೆ
11	ಪಾವತಿ ಸಮನ್ವಯ	ಡಿಬಿಟಿಗೆ ಕಳುಹಿಸಿದ ಫೈಲ್ ಮತ್ತು ಡಿಬಿಟಿಯಿಂದ ಸ್ವೀಕರಿಸಿದ ಪ್ರತಿಕ್ರಿಯೆಯ ನಡುವೆ ಸಮನ್ವಯ	ಅನುಷ್ಠಾನಗೊಳಿಸಲಾಗಿದೆ. ಲೆಕ್ಕಪರಿಶೋಧನೆಯು 33.96 ಲಕ್ಷ ವಹಿವಾಟುಗಳಲ್ಲಿ ₹444.13 ಕೋಟಿ ಮೊತ್ತದ ವ್ಯತ್ಯಾಸವನ್ನು ಗಮನಿಸಿತು. ವಿವರಗಳನ್ನು **ಅನುಬಂಧ-3.1**ರಲ್ಲಿ ನೀಡಲಾಗಿದೆ.

ಆಧಾರ: ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ ಒದಗಿಸಿದ ಮಾಹಿತಿ

ಐದು ಮಾಡ್ಯೂಲ್‌ಗಳನ್ನು ಅಳವಡಿಸಲಾಗಿಲ್ಲ ಎಂಬುದನ್ನು ಮೇಲಿನ ಕೋಷ್ಟಕದಿಂದ ಗಮನಿಸಬಹುದು. ಅನುಷ್ಠಾನಗೊಳಿಸಲಾದ ಮಾಡ್ಯೂಲ್‌ಗಳು ಸಹ ಕೊರತೆಯಿಂದ ಕೂಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಯೋಜನೆಯ ಅನುಷ್ಠಾನದಲ್ಲಿ ಅದರ ಪರಿಣಾಮವು ಕೆಳಕಂಡಂತಿತ್ತು:

- **ಅಸಮರ್ಪಕ ಅಂಕೀಕರಣ ಮತ್ತು ಪರಿಣಾಮವಾಗಿ ದತ್ತಾಂಶ ದೃಢೀಕರಣದ ಅನುಪಸ್ಥಿತಿ:**

14,658 ಹಾಲು ಸಹಕಾರ ಸಂಘಗಳಿದ್ದು, ಅವುಗಳಲ್ಲಿ 10,275 ಸಂಘಗಳು ಸುರಿದ ಹಾಲು, ಹಾಲು ಸುರಿಯುವವರ ಹೆಸರು, ಹಾಲಿನ ಗುಣಮಟ್ಟ ಇತ್ಯಾದಿಗಳ ದತ್ತಾಂಶವನ್ನು ದಾಖಲಿಸಲು 26 ವಿಭಿನ್ನ ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳನ್ನು ಅಳವಡಿಸಿಕೊಂಡಿವೆ. ಈ ಸ್ವತಂತ್ರ ಅಪ್ಲಿಕೇಶನ್‌ಗಳನ್ನು ಕ್ಷೀರಸಿರಿ ಅಪ್ಲಿಕೇಶನ್‌ನೊಂದಿಗೆ ಸಂಯೋಜಿಸಲಾಗಿಲ್ಲ. ತತ್ಪರಿಣಾಮವಾಗಿ, ನೈಜ ಸಮಯದ ಆಧಾರದ ಮೇಲೆ ದತ್ತಾಂಶವನ್ನು ಸೆರೆಹಿಡಿಯಲಾಗುತ್ತಿರಲಿಲ್ಲ.

ಉಳಿದ 4,383 ಸಹಕಾರ ಸಂಘಗಳು ಇನ್ನೂ ಫಲಾನುಭವಿಗಳ ದತ್ತಾಂಶವನ್ನು ಹಸ್ತಚಾಲಿತವಾಗಿ ಸಿದ್ಧಪಡಿಸುತ್ತಿವೆ ಮತ್ತು ನಿರ್ವಹಿಸುತ್ತಿವೆ, ತತ್ಪರಿಣಾಮವಾಗಿ ವಿವಿಧ ಹಂತಗಳಲ್ಲಿ ಸ್ವಯಂಚಾಲಿತ ದೃಢೀಕರಣ ಪರಿಶೀಲನೆಗಳ ಅನುಪಸ್ಥಿತಿಯಲ್ಲಿ ಮತ್ತು ಪಾವತಿಗಳು ಕೇವಲ ಕ್ಯಾಂಪ್ ಕಛೇರಿಯಲ್ಲಿ ವಿಸ್ತರಣಾ ಅಧಿಕಾರಿಗಳು ಮತ್ತು ಒಕ್ಕೂಟದ ಮಟ್ಟದಲ್ಲಿ ನಡೆಸಿದ ಹಸ್ತಚಾಲಿತ ದೃಢೀಕರಣ ಪರಿಶೀಲನೆಗಳನ್ನು ಆಧರಿಸಿವೆ. ಹಸ್ತಚಾಲಿತ ದೃಢೀಕರಣವು ತಪ್ಪಾದ ಅಥವಾ ವಂಚನೆಯ ಪ್ರಕ್ರಿಯೆ ಮತ್ತು ವಿಶ್ವಾಸಾರ್ಹವಲ್ಲದ ವರದಿಗಳ ಅಪಾಯವನ್ನು ಹೊಂದಿದೆ. 522 ವಿಸ್ತರಣಾ ಅಧಿಕಾರಿಗಳು ದಿನಕ್ಕೆ ಎರಡು ಬಾರಿ 14,658 ಸಹಕಾರ ಸಂಘಗಳ ಸಂಗ್ರಹದ ವಿವರಗಳನ್ನು ಪ್ರಮಾಣೀಕರಿಸಬೇಕು, ಇದು ಕಾರ್ಯತಃ ಕಷ್ಟಕರವಾಗಿದೆ ಮತ್ತು ದೋಷಗಳು/ಮೋಸದ ಅಭ್ಯಾಸಗಳು ಗಮನಿಸದೆ ಉಳಿಯುವ ಸಾಧ್ಯತೆಯನ್ನು ಇದು ಹೆಚ್ಚಿಸುತ್ತದೆ ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವಾಗಿದೆ.

ಇಲಾಖೆಯು ಕೆಎಮ್‌ಎಫ್ ಒದಗಿಸಿದ ದತ್ತಾಂಶವನ್ನು ಹೆಚ್ಚಿನ ಪರಿಶೀಲನೆಗಳಿಲ್ಲದೆ ಸ್ವೀಕರಿಸುತ್ತದೆ ಎಂಬುದನ್ನು ಸಹ ಲೆಕ್ಕಪರಿಶೋಧನೆಯು ಗಮನಿಸಿತು. ಇದಲ್ಲದೆ, ವಿಭಿನ್ನ ರೀತಿಯ

ಅಪ್ಲಿಕೇಶನ್‌ಗಳು ಮಾಹಿತಿ ತಂತ್ರಜ್ಞಾನ ಭದ್ರತೆ ಮತ್ತು ವಹಿವಾಟುಗಳ ಪ್ರಕ್ರಿಯೆಗೆ ಸಂಬಂಧಿಸಿದಂತೆ ಆ ಅಪ್ಲಿಕೇಶನ್‌ಗಳ ಮೇಲ್ವಿಚಾರಣೆಯನ್ನು ಸಂಕೀರ್ಣಗೊಳಿಸುತ್ತದೆ.

ಎರಡು ವರ್ಷಗಳ ಕಾಲಮಿತಿಯೊಳಗೆ (2021–2023) ಸುಮಾರು 2,858 ಸ್ವಯಂಚಾಲಿತ ಹಾಲು ಸಂಗ್ರಹಣಾ ಘಟಕಗಳನ್ನು ಮಂಜೂರು ಮಾಡಲು ಕೆಎಮ್‌ಎಫ್ ಭಾರತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದೆ ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ಡಿಸೆಂಬರ್ 2021). ಭವಿಷ್ಯದಲ್ಲಿ ದತ್ತಾಂಶದ ಹಸ್ತಚಾಲಿತ ನಮೂದನ್ನು ತಪ್ಪಿಸಲು ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿಯು ಎಲ್ಲಾ ಸಂಘಗಳಿಗೆ ಒಂದೇ ತರಹದ ಸಾಫ್ಟ್‌ವೇರ್ ಅನ್ನು ಒದಗಿಸಲು ಯೋಜಿಸುತ್ತಿದೆ ಎಂದೂ ಸಹ ಸರ್ಕಾರವು ತಿಳಿಸಿತು.

- **ಇನ್‌ಪುಟ್ ದೃಢೀಕರಣ ನಿಯಂತ್ರಣಗಳ ಅನುಪಸ್ಥಿತಿ** ಮಾಸ್ಟರ್ ದತ್ತಸಂಚಯದ ವಿಶ್ಲೇಷಣೆಯು ಆಧಾರ್ ಸಮ್ಮತಿ, ಜಾನುವಾರುಗಳ ಸಂಖ್ಯೆ, ಜಾನುವಾರುಗಳ ಮಾದರಿ, ಹಾಲು ಸುರಿಯುವವರ ಮಾದರಿ, ಮೊಬೈಲ್ ಸಂಖ್ಯೆ, ಖಾತೆ ಸಂಖ್ಯೆ ಇತ್ಯಾದಿಗಳಂತಹ ವಿವಿಧ ಕ್ಷೇತ್ರಗಳು ಖಾಲಿಯಿರುವುದನ್ನು ಅಥವಾ ಕೆಳಗೆ ತೋರಿಸಿರುವಂತೆ '0' ಇರುವುದನ್ನು ತೋರಿಸಿತು, ಇದು ಇನ್‌ಪುಟ್ ದೃಢೀಕರಣ ನಿಯಂತ್ರಣಗಳ ಅನುಪಸ್ಥಿತಿಯನ್ನು ಸೂಚಿಸುತ್ತದೆ.

ಕ್ಷೇತ್ರ	ದಾಖಲೆಗಳ ಸಂಖ್ಯೆ			ಲೆಕ್ಕಪರಿಶೋಧನಾ ಷರಾ
	ಖಾಲಿ	ಸೊನ್ನೆ (0)	ಇತರೆ	
ಆಧಾರ್ ಸಮ್ಮತಿ	66,749			
ಜಾನುವಾರುಗಳ ಸಂಖ್ಯೆ		10,29,049		ಉದಾಹರಣೆಗೆ, 25,000 ಲೀಟರ್‌ಗಿಂತಲೂ ಹೆಚ್ಚು ಹಾಲು ಸರಬರಾಜು ಮಾಡಿದರೂ, 658 ದಾಖಲೆಗಳಲ್ಲಿ ಜಾನುವಾರುಗಳ ಸಂಖ್ಯೆ '0' ಎಂದು ಹೊಂದಿದ್ದವು. 1708101000, 1332080, 111950, 133020 ಮುಂತಾದ ಅವಾಸ್ತವಿಕ ಸಂಖ್ಯೆಗಳನ್ನು ಸಹ ಸೂಚಿಸಲಾಗಿದೆ.
ಜಾನುವಾರುಗಳ ಮಾದರಿ		10,23,229		ಒಂದು ನಿರ್ದಿಷ್ಟ ರೀತಿಯ ಜಾನುವಾರು ನೀಡಬಹುದಾದ ಹಾಲಿನ ಪ್ರಮಾಣದ ಪ್ರಕ್ಷೇಪಣದ ಮೇಲೆ ಪರಿಣಾಮ ಬೀರುತ್ತದೆ. ದಾಖಲಿಸಲಾದ ಜಾನುವಾರು ಮಾದರಿಯನ್ನು ವಿವರಿಸಲಾಗಿಲ್ಲ ವಾದ್ದರಿಂದ ದತ್ತಾಂಶವು ಅಸಮಂಜಸವಾಗಿದೆ.
ಹಾಲು ಹಾಕುವವರ ವರ್ಗ		1,02,732		ಅರ್ಹತಾ ಮಾನದಂಡಗಳ ಅನುಗುಣದ ಭರವಸೆಯ ಅನುಪಸ್ಥಿತಿ
ಮೊಬೈಲ್ ಸಂಖ್ಯೆ	4,49,360	4,25,825		ಯಾವುದೇ ಎಸ್‌ಎಮ್‌ಎಸ್ ಅಥವಾ ಮಾಹಿತಿಯನ್ನು ಸಂವಹನ ಮಾಡಲಾಗುವುದಿಲ್ಲ.
ಖಾತೆ ಸಂಖ್ಯೆ	1,04,478	345		

ಕ್ಷೇತ್ರ	ದಾಖಲೆಗಳ ಸಂಖ್ಯೆ			ಲೆಕ್ಕಪರಿಶೋಧನಾ ಷರಾ
	ಖಾಲಿ	ಸೊನ್ನೆ (0)	ಇತರೆ	
ಜಾತಿ	176	14		ವಿಶೇಷ ಘಟಕ ಯೋಜನೆ (ಎಸ್‌ಸಿಪಿ)/ಬುಡಕಟ್ಟು ಉಪ ಯೋಜನೆ (ಟಿಎಸ್‌ಪಿ) ನಿಧಿಗಳ ಬಳಕೆಯ ಮೇಲೆ ಪರಿಣಾಮ ಬೀರುತ್ತದೆ.
ಆಧಾರ್ ದೃಢೀಕರಣ	66,473		21,959 ದಾಖಲೆಗಳಲ್ಲಿ ಇಲ್ಲ ಎಂದು ನಮೂದಿಸಲಾಗಿದೆ	ಆಧಾರ್ ಪರಿಶೀಲನೆಯಾಗದ ಕಾರಣ, ಇಲಾಖೆಯು ಈ ಹಾಲು ಹಾಕುವವರಿಗೆ ಪಾವತಿಗಾಗಿ ದತ್ತಾಂಶವನ್ನು ಕಳುಹಿಸಲು ಸಾಧ್ಯವಿಲ್ಲ

ಆಧಾರ: ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯು ಒದಗಿಸಿದ ಕ್ಷೀರಸಿರಿ ಪೋರ್ಟಲ್‌ನ ದತ್ತಾಂಶ ಗುಚ್ಛ

ಪೋರ್ಟಲ್‌ನಲ್ಲಿನ ಹಲವು ಕ್ಷೇತ್ರಗಳನ್ನು ಕಡ್ಡಾಯದ ಬದಲಿಗೆ ಐಚ್ಛಿಕವನ್ನಾಗಿ ಮಾಡಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ವಿವಿಧ ಕ್ಷೇತ್ರಗಳನ್ನು ದೃಢೀಕರಣಕ್ಕೆ ಸಂಬಂಧಿಸಲಾಗುವುದಿಲ್ಲ. ಉದಾಹರಣೆಗೆ, ಓರ್ವ ನಿರ್ದಿಷ್ಟ ಹಾಲು ಹಾಕುವವರು ಸರಬರಾಜು ಮಾಡುವ ಹಾಲಿನ ಪ್ರಮಾಣವು ಅವರ ಒಡೆತನದ ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿದೆ ಎಂಬುದನ್ನು ಕಂಡುಹಿಡಿಯಲಾಗುವುದಿಲ್ಲ. ಅಂತಹ ದತ್ತಾಂಶವು ದತ್ತಸಂಚಯದ ಸಮಗ್ರತೆ, ವಿಶ್ವಾಸಾರ್ಹತೆ ಮತ್ತು ಗುಣಮಟ್ಟದ ಮೇಲೆ ಅನುಮಾನ ಉಂಟುಮಾಡುತ್ತದೆ.

ನಿದರ್ಶನ ಎ

ಓರ್ವ ಹಾಲು ಹಾಕುವವರ ಬಳಿ ಇರುವ ಜಾನುವಾರುಗಳ ಸಂಖ್ಯೆಯನ್ನು ಮೂರು ಎಂದು ದಾಖಲಿಸಲಾಗಿದ್ದರೂ, 2020ರ ಅಕ್ಟೋಬರ್‌ನಲ್ಲಿ 43,364 ಲೀಟರ್‌ಗಳಿಗೆ ₹2.17 ಲಕ್ಷ ಪಾವತಿಸಲಾಗಿತ್ತು, ಇದು ಪ್ರತಿ ಜಾನುವಾರು ದಿನಕ್ಕೆ 480 ಲೀಟರ್ ನೀಡುತ್ತದೆ ಎಂಬುದನ್ನು ತೋರಿಸುತ್ತಿತ್ತು

ಆಧಾರ: ಕ್ಷೀರಸಿರಿ ಪೋರ್ಟಲ್ ದತ್ತಾಂಶ

ಏಪ್ರಿಲ್ 2022ರಿಂದ ದೃಢೀಕರಣಕ್ಕಾಗಿ ಎಲ್ಲಾ ಅಗತ್ಯ ದತ್ತಾಂಶವನ್ನು ಪಡೆಯಲು ದತ್ತಸಂಚಯದಲ್ಲಿನ ವಿವಿಧ ಕ್ಷೇತ್ರಗಳನ್ನು ಐಚ್ಛಿಕವಾಗಿರುವುದರ ಬದಲಿಗೆ ಕಡ್ಡಾಯಗೊಳಿಸಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021 ಮತ್ತು ಜನವರಿ 2022).

- **ಮಾರ್ಗಪಲ್ಲಟಗಳನ್ನು ಗುರುತಿಸದಿರುವುದು:** ಕಾರ್ಯಾಚರಣಾ ಅಗತ್ಯತೆ ವಿಶೇಷಣಗಳು ಒದಗಿಸಿದ್ದರೂ ಅಸಾಧಾರಣ ಪ್ರಕರಣ ವರದಿ ಮತ್ತು ಲೆಕ್ಕಪರಿಶೋಧನಾ ಮಾಡ್ಯೂಲ್‌ಗಳನ್ನು ಅನುಷ್ಠಾನಗೊಳಿಸದಿರುವುದು ಯೋಜನೆಯ ಅನುಷ್ಠಾನದಲ್ಲಿನ ಮಾರ್ಗಪಲ್ಲಟಗಳನ್ನು ಗುರುತಿಸಲು ಮತ್ತು ಪರಿಶೀಲಿಸಲು ಒಂದು ವ್ಯವಸ್ಥೆಯ ಅನುಪಸ್ಥಿತಿಗೆ ಕಾರಣವಾಯಿತು. **ಅನುಬಂಧ-3.2**ರಲ್ಲಿ ವಿವರಿಸಿದಂತೆ, ಓರ್ವ ನಿರ್ದಿಷ್ಟ ಹಾಲು ಹಾಕುವವರು ಹಾಕುವ ಹಾಲು ಸತತ ಎರಡು ತಿಂಗಳುಗಳ ನಡುವೆ/ಆರು ತಿಂಗಳ ಕಾಲಾವಧಿಯಲ್ಲಿ ಗಣನೀಯವಾಗಿ ವ್ಯತ್ಯಾಸಗೊಂಡಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಅಸಾಧಾರಣ ಪ್ರಕರಣ ವರದಿ ಮಾಡುವ ನಿಯಮಗಳನ್ನು ರೂಪಿಸಿಲ್ಲ ಮತ್ತು ಹೊಂದಿಕೆ ಮಾಡಿಲ್ಲ ಎಂದು ರಾಜ್ಯ ಸರ್ಕಾರವು ಒಪ್ಪಿಕೊಂಡಿತು ಮತ್ತು ಸರಿಪಡಿಸಲು ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ತಿಳಿಸಿತು (ಡಿಸೆಂಬರ್ 2021).

- **ಹಾಕಿದ ಹಾಲಿನ ಗುಣಮಟ್ಟ ಮತ್ತು ಪ್ರಮಾಣ ನಂಬಿಕೆಗೆ ಅರ್ಹವಾಗಿಲ್ಲದಿರುವುದು:**

ಸ್ಥಳೀಯ ಮಾರಾಟದ ಪುರಾವೆ ಅಪ್‌ಲೋಡ್, ಸಿಸಿ/ಬಿಎಮ್‌ಸಿ ಡೇಟಾ ಅಪ್‌ಲೋಡ್, ಒಕ್ಕೂಟ ಪ್ರಕ್ರಿಯೆ ದತ್ತಾಂಶ ಅಪ್‌ಲೋಡ್ ಮತ್ತು ಲೆಕ್ಕಪರಿಶೋಧನೆ ಮಾಡ್ಯೂಲನ್ನು ಅನುಷ್ಠಾನಗೊಳಿಸದಿರುವುದು ಹಾಲಿನ ಗುಣಮಟ್ಟ ಮತ್ತು ಪ್ರಮಾಣ ಹಾಗೂ ಸಂಘಗಳು ಮಾಡಿದ ಕ್ಲೈಮ್‌ಗಳ ನಿಖರತೆ ನಂಬಿಕೆಗೆ ಅರ್ಹವಾಗಿಲ್ಲದಿರುವುದು ಸೂಚಿಸುತ್ತದೆ.

ದತ್ತಾಂಶ ವಿಶ್ಲೇಷಣೆಯು, 2,48,065 ಪ್ರಕರಣಗಳಲ್ಲಿ 5,504 ಪ್ರಕರಣಗಳಲ್ಲಿ ತಿಂಗಳಿನ ಒಟ್ಟು ಸ್ಥಳೀಯ ಮಾರಾಟವು ಆ ತಿಂಗಳಲ್ಲಿ ಸಂಗ್ರಹಿಸಿದ ಒಟ್ಟು ಹಾಲಿಗಿಂತ ಹೆಚ್ಚಾಗಿದೆ ಎಂದು ತೋರಿಸಿತು. ಏಪ್ರಿಲ್ 2019 ಮತ್ತು ಮೇ 2019 ತಿಂಗಳುಗಳಲ್ಲಿ ಕ್ರಮವಾಗಿ 3,178 ಮತ್ತು 1,027 ಪ್ರಕರಣಗಳಿವೆ.

ಲೆಕ್ಕಪರಿಶೋಧನೆಯು 'ಕಳಪೆ ಹಾಲಿನ ಪರಿಮಾಣ' ಮತ್ತು 'ಹಾಕಿದ ಒಟ್ಟು ಹಾಲು' ಕ್ಷೇತ್ರಗಳು ಐಚ್ಛಿಕ ಕ್ಷೇತ್ರಗಳಾಗಿದ್ದವು ಎಂಬುದನ್ನು ಸಹ ಗಮನಿಸಿತು. ಇದಲ್ಲದೆ, ಒಬ್ಬ ವ್ಯಕ್ತಿಯಿಂದ ಸರಬರಾಜು ಮಾಡುವ ಉತ್ತಮ ಗುಣಮಟ್ಟದ ಮತ್ತು ಕಡಿಮೆ ಗುಣಮಟ್ಟದ ಹಾಲಿನ ಪರಿಮಾಣವು ನೇರವಾಗಿ ಕ್ಷೀರಸಿರಿಯಲ್ಲಿ ನಮೂದಿಸಲ್ಪಡುವುದಿಲ್ಲ. ಇದನ್ನು ರಿಜಿಸ್ಟರ್ ಅಥವಾ ಸಂಘವು ಬಳಸುವ ಸ್ಥಳೀಯ ಅಪ್ಲಿಕೇಶನ್‌ನಲ್ಲಿ ಹಸ್ತಚಾಲಿತವಾಗಿ ನಮೂದಿಸಲಾಗುತ್ತದೆ ಮತ್ತು ಶಿಬಿರ ಕಚೇರಿಯ ಕ್ಷೀರಸಿರಿಯಲ್ಲಿ ಮಾಸಿಕ ಆಧಾರದ ಮೇಲೆ ಇಂದೀಕರಿಸಲಾಗುತ್ತದೆ. ಸಂಘಗಳಲ್ಲಿ ಸಂಗ್ರಹಿಸಿದ ಹಾಲನ್ನು ಒಂದೇ ಕಂಟೇನರ್‌ಗೆ ವರ್ಗಾಯಿಸಲಾಗುವುದರಿಂದ ಮತ್ತು ಅಗತ್ಯ ಕೊಬ್ಬಿನಂಶವಿರುವ ಹಾಲು ಸಿಸಿ/ಬಿಎಮ್‌ಸಿ/ಒಕ್ಕೂಟಕ್ಕೆ ತಲುಪುವುದರಿಂದ, ಅನರ್ಹ ಫಲಾನುಭವಿಗಳಿಗೂ ಪ್ರೋತ್ಸಾಹಧನವನ್ನು ನೀಡುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

ಒಂದು ಸಂಘಕ್ಕೆ (ಅಲಿಪುರ/ಗೌರಿಬಿದನೂರು) ಸಂಬಂಧಿಸಿದಂತೆ, ಡೈರಿ ರಿಜಿಸ್ಟರ್ ಆಗಸ್ಟ್ 2019ರಲ್ಲಿ 1975.70 ಲೀಟರ್ ಹಾಲಿನ ಸ್ಥಳೀಯ ಮಾರಾಟವನ್ನು ದಾಖಲಿಸಿದ್ದರೆ, ಡಿಬಿಟಿ ಅಂಕಿಅಂಶವು 16,404 ಲೀಟರ್ ಆಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಬೇರೊಂದು ಸೊಸೈಟಿಗೆ ಸಂಬಂಧಿಸಿದಂತೆ (ಪರಂಡಹಳ್ಳಿ/ಬಂಗಾರಪೇಟೆ), ಮಾರ್ಚ್ 2020ರಲ್ಲಿ ಸಂಘದಲ್ಲಿ ಸಂಗ್ರಹಿಸಿದ ಒಟ್ಟು ಹಾಲಿನ ಪ್ರಮಾಣ 72,076 ಲೀಟರ್ ಆಗಿದ್ದರೆ, ಕ್ಷೀರಸಿರಿಯ ಮಾಹಿತಿಯಲ್ಲಿ ಗಮನಿಸಿದಂತೆ 1,34,319.80 ಲೀಟರ್‌ಗಳಿಗೆ ಸಬ್ಸಿಡಿ ಮರುಪಾವತಿ ಮಾಡಲಾಗಿತ್ತು.

ಕ್ಯಾಂಪ್ ಕಛೇರಿ ಮತ್ತು ಒಕ್ಕೂಟದ ಮಟ್ಟದಲ್ಲಿ ದತ್ತಾಂಶದ ಸ್ವಯಂಚಾಲಿತ ದೃಢೀಕರಣವು ಲಭ್ಯವಿಲ್ಲ ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2022). ಆದಾಗ್ಯೂ, ಒಕ್ಕೂಟವು ಒಂದು ತಿಂಗಳಿಗೆ ಇ–ಸಹಿ ಮಾಡುವ ಮೊದಲು ದೃಢೀಕರಿಸಿ ಇಗ, ಒಟ್ಟು ಉತ್ತಮ ಹಾಲಿನ ಪ್ರಮಾಣ ಮತ್ತು ಎಲ್ಲಾ ಹಾಲು ಸಂಘಗಳ ಸ್ಥಳೀಯ ಮಾರಾಟವು ಒಕ್ಕೂಟಕ್ಕೆ ಸರಬರಾಜು ಮಾಡಿದ ಪ್ರಮಾಣಕ್ಕೆ ಸಮನಾಗಿರಬೇಕು ಅಥವಾ ಕಡಿಮೆಯಿರಬೇಕು ಮತ್ತು ಹೀಗಾಗಿ ಒಂದು ತಿಂಗಳಲ್ಲಿ ಹೆಚ್ಚಿನ ಪ್ರಮಾಣವನ್ನು ಕ್ಲೈಮ್ ಮಾಡುವುದಕ್ಕೆ ಯಾವುದೇ ಅವಕಾಶವಿಲ್ಲ ಎಂದೂ ಸಹ ಸರ್ಕಾರವು ತಿಳಿಸಿತು. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ವ್ಯತ್ಯಾಸಗಳನ್ನು ಪರಿಶೀಲಿಸಲು ಮತ್ತು ಸರಿಪಡಿಸಲು ತೆಗೆದುಕೊಂಡ ಕ್ರಮವನ್ನು ಉತ್ತರವು ತಿಳಿಸಲಿಲ್ಲ. ಇದಲ್ಲದೆ, ಅಂತಹ ವ್ಯತ್ಯಾಸಗಳನ್ನು ತಡೆಯಲು ಅಸ್ತಿತ್ವದಲ್ಲಿರುವ ಹಸ್ತಚಾಲಿತ ಪರಿಶೀಲನೆಗಳು ಅಸಮರ್ಪಕವಾಗಿವೆ.

- **ಅಧಿಕ ಪಾವತಿಗಳು ಮತ್ತು ನಿಗದಿತ ಪರಿಮಾಣಕ್ಕಿಂತ ಹೆಚ್ಚಿನ ಪರಿಮಾಣದ ಸಂಸ್ಕರಣೆ:** ಹಾಲು ಪ್ರೋತ್ಸಾಹಧನ ಯೋಜನೆಯಡಿ, ಹಾಲು ಹಾಕುವವರು ತಿಂಗಳಿಗೆ ₹2 ಲಕ್ಷ ಮೌಲ್ಯದ ಗರಿಷ್ಠ 40,000 ಲೀಟರ್‌ಗಳ ಪ್ರೋತ್ಸಾಹಧನಕ್ಕೆ ಅರ್ಹರಾಗಿರುತ್ತಾರೆ. ಈ ನಿಯಮವನ್ನು ತಪ್ಪಾಗಿ ಹೊಂದಿಕೆ ಮಾಡಲಾಗಿತ್ತು ಮತ್ತು ಇನ್‌ಪುಟ್ ಕ್ಷೇತ್ರವು 60,000 ಲೀಟರ್‌ಗಳವರೆಗಿನ ಮೌಲ್ಯಗಳನ್ನು ಸ್ವೀಕರಿಸುತ್ತಿತ್ತು (ಕೆಳಗೆ ತೋರಿಸಿರುವ ಸ್ಕ್ರೀನ್ ಶಾಟ್).



ಅನುಬಂಧ-3.3ರಲ್ಲಿ ವಿವರಿಸಿರುವಂತೆ, 10 ನಿದರ್ಶನಗಳಲ್ಲಿ ಜೂನ್ 2020ರಿಂದ ಜೂನ್ 2021ರ ಅವಧಿಯಲ್ಲಿ ಹಾಕಿದ ಹಾಲಿಗೆ ಮಾರ್ಚ್‌ನಿಂದ ಸೆಪ್ಟೆಂಬರ್ 2021ರ ಅವಧಿಯಲ್ಲಿ ₹2 ಲಕ್ಷಕ್ಕಿಂತ ಹೆಚ್ಚಿನ ಪಾವತಿಯನ್ನು ಮಾಡಲಾಗಿತ್ತು ಎಂಬುದನ್ನು ದತ್ತಾಂಶದ ವಿಶ್ಲೇಷಣೆಯು ತೋರಿಸಿತು. ಇತರೆ 9 ನಿದರ್ಶನಗಳಲ್ಲಿ, ನಿಗದಿತ ಮಿತಿಗಳಿಗಿಂತ ಹೆಚ್ಚಿನ 1.28 ಲಕ್ಷ ಲೀಟರ್‌ಗಳ ಕ್ಲೈಮ್‌ಗಳು ಮತ್ತು ₹6.38 ಲಕ್ಷ ಮೊತ್ತದ ಪಾವತಿಗಾಗಿ ಇಲಾಖೆಯು ಪ್ರಕ್ರಿಯೆಗೊಳಿಸಿತ್ತು. ಪಾವತಿಗಳನ್ನು ನಿಜವಾಗಿಯೂ ಮಾಡಲಾಗಿದೆಯೇ ಎಂಬುದನ್ನು ಇಲಾಖೆಯು ಇನ್ನೂ ದೃಢೀಕರಿಸಬೇಕಿದೆ. ಏಪ್ರಿಲ್ 2019ರಿಂದ ಆಗಸ್ಟ್ 2020ರ ಅವಧಿಯಲ್ಲಿ ಹಾಲಿಗೆ ಪಾವತಿಸಿದ ಮೊತ್ತವು ತಿಂಗಳಿಗೆ ₹6.40 ಲಕ್ಷದಿಂದ ₹9.55 ಲಕ್ಷದವರೆಗೆ ಇರುವ ಕೆಲವು ನಿದರ್ಶನಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಂತಹ ಫಲಾನುಭವಿಗಳಿಗೆ ಪ್ರೋತ್ಸಾಹಧನ ಒದಗಿಸುವುದು ಪ್ರೋತ್ಸಾಹಧನ ಯೋಜನೆಯ ಉದ್ದೇಶವನ್ನೇ ಸೋಲಿಸುತ್ತದೆ.

ಕೆ2ನಲ್ಲಿ ಫೈಲ್‌ಗಳು ತಿರಸ್ಕೃತವಾಗಬಾರದು ಎಂಬ ಕಾರಣದಿಂದ ಇಲಾಖೆಯು ಆರಂಭದಲ್ಲಿ ಗರಿಷ್ಠ ಮಿತಿಯನ್ನು ತಿಂಗಳಿಗೆ 40,000 ಲೀಟರ್‌ಗೆ ನಿಗದಿಪಡಿಸಿತ್ತು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2022). ಇದಲ್ಲದೆ, ಪರಿಶೀಲನೆಯ ನಂತರ 40,000 ಲೀಟರ್‌ಗಿಂತ ಹೆಚ್ಚು ಹಾಲು ಹಾಕುವವರಿಗೆ ಪಾವತಿ ಮಾಡಲು ಕ್ಷೀರಸಿರಿ ಮತ್ತು ಕೆ2 ಪೋರ್ಟಲ್‌ನಲ್ಲಿ ಗರಿಷ್ಠ ಮಿತಿಯನ್ನು ತಿಂಗಳಿಗೆ 75,000 ಲೀಟರ್‌ಗೆ ಹೆಚ್ಚಿಸಲಾಗಿದೆ ಎಂದೂ ಸಹ ಸರ್ಕಾರವು ತಿಳಿಸಿತು.

ಆ ಸಮಯದಲ್ಲಿ ಗರಿಷ್ಠ ಮಿತಿಯು ತಿಂಗಳಿಗೆ 40,000 ಲೀಟರ್‌ಗಳಾಗಿದ್ದಾಗ ಇನ್‌ಪುಟ್ ದೃಢೀಕರಣವನ್ನು ತಿಂಗಳಿಗೆ 60,000 ಲೀಟರ್‌ಗಳಿಗೆ ಹೇಗೆ ಬದಲಾಯಿಸಲಾಯಿತು ಎಂಬ ಪ್ರಮುಖ ವಿಚಾರಕ್ಕೆ ಕಾರಣವನ್ನು ಉತ್ತರವು ತಿಳಿಸಲಿಲ್ಲ. ಇದು ಇಲಾಖೆಯಲ್ಲಿ ಅಸ್ತಿತ್ವದಲ್ಲಿರುವ ಆಂತರಿಕ ನಿಯಂತ್ರಣಗಳು ಮತ್ತು ಸಮರ್ಪಕ ಮೇಲ್ವಿಚಾರಣೆಯ ಕೊರತೆಯನ್ನು ತೋರಿಸುತ್ತದೆ. ಅಲ್ಲದೆ, ಇಲಾಖೆಯು ಹಣಕಾಸು ಇಲಾಖೆ ಮತ್ತು ಸರ್ಕಾರದ ಅನುಮೋದನೆಯಿಲ್ಲದೆ ಗರಿಷ್ಠ ಮಿತಿಯನ್ನು ಘಟನೋತ್ತರವಾಗಿ ಹೆಚ್ಚಿಸಿದೆ.

3.1.2.2 ಪಾವತಿ ಫೈಲ್‌ಗಳನ್ನು ಸಂಸ್ಕರಿಸುವಲ್ಲಿ ವಿಳಂಬ

ಎಕ್ಸ್‌ಎಮ್‌ಎಲ್ ರೂಪದಲ್ಲಿನ ಪಾವತಿ ಅನುಸೂಚಿ ಫೈಲ್‌ಗಳನ್ನು ಇಲಾಖೆಯು ರಚಿಸುತ್ತದೆ ಮತ್ತು ಹಣ ಮತ್ತು ಆಧಾರ್ ದೃಢೀಕರಣಗಳು, ದ್ವಿಪಾವತಿ ತಡೆ ಪರಿಶೀಲನೆ ಮತ್ತು ಮುಂದಿನ ಪ್ರಕ್ರಿಯೆ ಮತ್ತು ಪಾವತಿಗಳಿಗಾಗಿ ಕ್ಷೀರಸಿರಿ ಅಪ್ಲಿಕೇಶನ್ ಮೂಲಕ ಕೋರ್ ಡಿಬಿಟಿ ಪೋರ್ಟಲ್‌ಗೆ ಕಳುಹಿಸಲಾಗುತ್ತದೆ. 11 ಹಾಲು ಒಕ್ಕೂಟಗಳಿಗೆ ಸಂಬಂಧಿಸಿದಂತೆ ಇಲಾಖೆಯು ಒದಗಿಸಿದ 2019–20ರ ಅವಧಿಯ ದತ್ತಾಂಶದ ವಿಶ್ಲೇಷಣೆಯು, **ಕೋಷ್ಟಕ–3.3**ರಲ್ಲಿ ತೋರಿಸಿದಂತೆ, ಹಾಲು ಸಂಗ್ರಹಣೆಯ ದಿನಾಂಕದ ನಂತರ ಪಾವತಿ ಅನುಸೂಚಿ ಫೈಲ್‌ಗಳ ರಚನೆಯಲ್ಲಿ ಸಮಯದ ಅಂತರದ ನಿದರ್ಶನಗಳನ್ನು ತೋರಿಸಿತು.

ಕೋಷ್ಟಕ–3.3: ಪಾವತಿ ಅನುಸೂಚಿ ಫೈಲ್‌ಗಳನ್ನು ರಚಿಸುವಲ್ಲಿ ಸಮಯದ ಅಂತರ

ಇಂದ (ದಿನಗಳು)	ವರೆಗೆ (ದಿನಗಳು)	ದಾಖಲೆಗಳ ಸಂಖ್ಯೆ	ಮೊತ್ತ (₹ ಕೋಟಿಗಳಲ್ಲಿ)
10	15	4,54,825 (11)	53.32
16	30	4,55,621 (11)	58.22
31	365	32,67,471 (78)	375.14
ಒಟ್ಟು		**41,77,918**	**486.68**

ಆಧಾರ: ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ ಒದಗಿಸಿದ ಕ್ಷೀರಸಿರಿ ದತ್ತಾಂಶ
(ಒಟ್ಟು ವಹಿವಾಟುಗಳ ಶೇಕಡಾವಾರನ್ನು ಆವರಣದಲ್ಲಿ ನೀಡಲಾಗಿದೆ)

ಪಾವತಿ ಫೈಲ್‌ಗಳ ರಚನೆಯಲ್ಲಿನ ವಿಳಂಬವು ಸಂಪೂರ್ಣ ಪ್ರಕ್ರಿಯೆಯನ್ನು ವಿಳಂಬಗೊಳಿಸುತ್ತದೆ ಮತ್ತು ಇದು ನಗದು ವಿತರಣೆಯಲ್ಲಿನ ವಿಳಂಬಕ್ಕೆ ಕಾರಣವಾಗುತ್ತದೆ.

ನಿದರ್ಶನ ಬಿ

2018ರ ಜನವರಿ ತಿಂಗಳಿಗೆ 8,464 ಹಾಲು ಹಾಕುವವರಿಗೆ ₹56.08 ಲಕ್ಷ ಪಾವತಿ ಸೂಚಿಯನ್ನು 22 ಜನವರಿ 2020ರಂದು ರಚಿಸಲಾಯಿತು ಮತ್ತು ಕೋರ್ ಡಿಬಿಟಿ ಪೋರ್ಟಲ್‌ಗೆ ಕಳುಹಿಸಲಾಯಿತು. ಆದರೆ, ಅದು ಹಿಂದಿನ ಹಣಕಾಸು ವರ್ಷಕ್ಕೆ ಸಂಬಂಧಿಸಿದ್ದರಿಂದ ಈ ಪಾವತಿಯನ್ನು ಕೆ2 ವ್ಯವಸ್ಥೆಯು ತಿರಸ್ಕರಿಸಿತು. ಈ ಪಾವತಿಯು ಇನ್ನೂ ಬಾಕಿ ಉಳಿದಿದ್ದು, ಅರ್ಹ ಫಲಾನುಭವಿಗಳನ್ನು ನಗದು ಪ್ರಯೋಜನಗಳಿಂದ ವಂಚಿತವಾಗಿಸಿದೆ. ಪರಿಹಾರ ಕ್ರಮವನ್ನು ಕೈಗೊಳ್ಳುವುದಾಗಿ ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021).

ಆಧಾರ: ಕ್ಷೀರಸಿರಿ ಪೋರ್ಟಲ್ ದತ್ತಾಂಶ

ಹನ್ನೊಂದು ಹಾಲು ಒಕ್ಕೂಟಗಳಿಗೆ ಸಂಬಂಧಿಸಿದಂತೆ ಇಲಾಖೆಯು ಒದಗಿಸಿದ 2019–20ರ ಅವಧಿಯ ದತ್ತಾಂಶದ ಹೆಚ್ಚಿನ ವಿಶ್ಲೇಷಣೆಯು, **ಕೋಷ್ಟಕ–3.4**ರಲ್ಲಿ ತೋರಿಸಿದಂತೆ, ಪಾವತಿ ಅನುಸೂಚಿ ಫೈಲ್‌ಗಳನ್ನು ರಚಿಸಿದ ದಿನಾಂಕ ಮತ್ತು ಡಿಡಿಒ ಅನುಮೋದನೆಯನ್ನು ನೀಡಿದ ದಿನಾಂಕದ ನಡುವೆ ಗಮನಾರ್ಹ ಸಮಯದ ವಿಳಂಬವನ್ನು ತೋರಿಸಿತು.

ಕೋಷ್ಟಕ–3.4: ಪಾವತಿ ಅನುಸೂಚಿ ಫೈಲ್‌ಗಳನ್ನು ಅನುಮೋದಿಸುವಲ್ಲಿ ವಿಳಂಬ

ಇಂದ (ದಿನಗಳು)	ವರೆಗೆ (ದಿನಗಳು)	ದಾಖಲೆಗಳ ಸಂಖ್ಯೆ	ಮೊತ್ತ (₹ ಕೋಟಿಗಳಲ್ಲಿ)
0	0	3,08,668 (7)	34.42
1	3	18,68,101 (45)	210.04
4	7	9,44,577 (23)	109.78
8	15	6,31,520 (15)	78.19
16	27	4,25,052 (10)	54.25
ಒಟ್ಟು		**41,77,918**	**486.68**

ಆಧಾರ: ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ ಒದಗಿಸಿದ ಕ್ಷೀರಸಿರಿ ದತ್ತಾಂಶ

(ಒಟ್ಟು ವಹಿವಾಟುಗಳ ಶೇಕಡಾವಾರನ್ನು ಆವರಣದಲ್ಲಿ ನೀಡಲಾಗಿದೆ)

2019–20 ಮತ್ತು 2020–21ರ ಅವಧಿಯಲ್ಲಿ ರಚಿಸಿದ ಮತ್ತು ಪ್ರಕ್ರಿಯೆಗೊಳಿಸಿದ ಶೇಕಡಾ 34ರಷ್ಟು ಫೈಲ್‌ಗಳು ಕೋರ್ ಡಿಬಿಟಿ ಪೋರ್ಟಲ್‌ನಲ್ಲಿ ವಿಫಲವಾಗಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಶೇಕಡಾ 92 ಪ್ರಕರಣಗಳಲ್ಲಿ ಇದಕ್ಕೆ ಮುಖ್ಯ ಕಾರಣವೆಂದರೆ 'ಇನ್‌ಪುಟ್ ಎಕ್ಸ್‌ಎಮ್‌ಎಲ್ ಫೈಲ್ ಈಗಾಗಲೇ ಪ್ರಕ್ರಿಯೆಗೊಳಿಸಲಾಗಿದೆ' ಎಂಬುದು ಮತ್ತು ಇದು ದೃಢೀಕರಣದ ಅನುಪಸ್ಥಿತಿಯನ್ನು ಸೂಚಿಸುತ್ತದೆ.

ಆರಂಭಿಕ ಕ್ಲೈಮ್‌ಗಳಿಗೆ (ಏಪ್ರಿಲ್ 2019ರಿಂದ ಜುಲೈ 2019) ಪಾವತಿ ಫೈಲ್‌ಗಳನ್ನು ತಾಂತ್ರಿಕ ಸಮಸ್ಯೆಗಳಿಂದಾಗಿ ಆಗಸ್ಟ್ 2019ರಿಂದ ಮಾತ್ರ ಪ್ರಕ್ರಿಯೆಗೊಳಿಸಲಾಗಿದೆ ಮತ್ತು ಅಪ್ಲಿಕೇಶನ್ ಬಳಕೆಯಲ್ಲಿ ಸಿಬ್ಬಂದಿಗೆ ತರಬೇತಿ ನೀಡಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2022). ತತ್ಪರಿಣಾಮವಾಗಿ, ಕೆಲವು ಬಾಕಿಯುಳಿದಿದ್ದವು. ₹232.17 ಕೋಟಿ ಮೊತ್ತದ ₹19.23 ಲಕ್ಷ ವಹಿವಾಟುಗಳಿಗೆ (ಶೇಕಡಾ 46) ಪಾವತಿ ಫೈಲ್‌ಗಳ ತಯಾರಿಕೆಯಲ್ಲಿ ಜುಲೈ 2019ರ ನಂತರವೂ ವಿಳಂಬವನ್ನು ಲೆಕ್ಕಪರಿಶೋಧನೆ ಗಮನಿಸಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ ಮತ್ತು ಅಂತಹ ವಿಳಂಬವು 360 ದಿನಗಳ ವ್ಯಾಪ್ತಿಯಲ್ಲಿದ್ದಿತು.

3.1.2.3 ಆಯವ್ಯಯ ಮಾಡ್ಯೂಲ್ ಮತ್ತು ವಿಶೇಷ ಘಟಕ ಯೋಜನೆ/ಬುಡಕಟ್ಟು ಉಪ–ಯೋಜನೆ ಅಡಿಯಲ್ಲಿ ಆಯವ್ಯಯ ಜಾಡುಹಿಡಿಯುವಿಕೆ ಅಸ್ತಿತ್ವದಲ್ಲಿಲ್ಲದಿರುವುದು

ಹಾಲು ಪ್ರೋತ್ಸಾಹಧನ ಯೋಜನೆಗೆ ಬಜೆಟ್‌ಅನ್ನು ಮುಖ್ಯ ಶೀರ್ಷಿಕೆ 2404ರ ಅಡಿಯಲ್ಲಿ ಮೂರು ಉಪಶೀರ್ಷಿಕೆಗಳ ಅಂದರೆ 100, 422 (ಎಸ್‌ಸಿಪಿ) ಮತ್ತು 423 (ಟಿಎಸ್‌ಪಿ) ಅಡಿಯಲ್ಲಿ ಬಿಡುಗಡೆ ಮಾಡಲಾಗುತ್ತದೆ. ಉಪಶೀರ್ಷಿಕೆ 422 ಮತ್ತು 423ರ ಅಡಿಯಲ್ಲಿ ಬಿಡುಗಡೆಯಾದ ಹಣವು ಅನುಕ್ರಮವಾಗಿ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡ (ಎಸ್‌ಟಿ) ವರ್ಗಗಳ ಹಾಲು ಹಾಕುವವರಿಗೆ ಪ್ರೋತ್ಸಾಹಧನ ಪಾವತಿಸಲು ಮೀಸಲಾಗಿದೆ. ಫಲಾನುಭವಿ ಮಾಡ್ಯೂಲ್‌ನ ನೋಂದಣಿಯು ವರ್ಗ ಸೂಚಿಸುವುದನ್ನು (ಎಸ್‌ಟಿ/ಎಸ್‌ಸಿ/ಇತರರು) ಒಳಗೊಂಡಿದ್ದರೂ, ಕ್ಷೀರಸಿರಿ ಅಪ್ಲಿಕೇಶನ್‌ನಲ್ಲಿ ಈ ಉಪಶೀರ್ಷಿಕೆಗಳ ಅಡಿಯಲ್ಲಿ ಬಜೆಟ್ ಹರಿವನ್ನು ಪತ್ತೆ ಹಚ್ಚಲು ಯಾವುದೇ ಕಾರ್ಯವಿಧಾನವಿರಲಿಲ್ಲ. ಎಸ್/ಎಸ್‌ಟಿ ವರ್ಗದ ಫಲಾನುಭವಿಗಳಿಗೆ ಸಂಬಂಧಿಸಿದಂತೆ ವಿಫಲವಾದ, ತಿರಸ್ಕೃತ ಮತ್ತು ಬಾಕಿಯಿರುವ ವಹಿವಾಟುಗಳ ಪ್ರಮಾಣವನ್ನು ಗುರುತಿಸಲು ಇದು ಮುಖ್ಯವಾಗಿದೆ. ಇದಲ್ಲದೆ, ಇನ್‌ಪುಟ್ ದೃಢೀಕರಣ ನಿಯಂತ್ರಣಗಳ ಅನುಪಸ್ಥಿತಿಯಲ್ಲಿ, ಎಸ್‌ಸಿಪಿ/ಟಿಎಸ್‌ಪಿ ಅಡಿಯಲ್ಲಿ ನಿಧಿಗಳು ಬಳಕೆಯಾಗದೆ ಉಳಿಯುವ ಎಲ್ಲಾ ಸಾಧ್ಯತೆಗಳಿವೆ.

ಕಂಡಿಕೆ–3.1.1ರಲ್ಲಿ ಚರ್ಚಿಸಿದಂತೆ, ಇಲಾಖೆಯು ಎಸ್‌ಸಿಪಿ/ಟಿಎಸ್‌ಪಿ ಅಡಿಯಲ್ಲಿ ಬಳಕೆ ಮಾಡದ ಮೊತ್ತವನ್ನು ಒಳಗೊಂಡಂತೆ ಯೋಜನೆಯಡಿಯಲ್ಲಿ ಬಳಕೆಯಾಗದ ಮೊತ್ತವನ್ನು ಅಧ್ಯರ್ಪಣೆ

ಮಾಡಿದೆ. ಎಸ್‌ಸಿಪಿ/ಟಿಎಸ್‌ಪಿ ಅಡಿಯಲ್ಲಿನ ನಿಧಿಯ ಅಧ್ಯರ್ಪಣೆಯು ಕರ್ನಾಟಕ ಅನುಸೂಚಿತ ಜಾತಿ ಉಪ–ಹಂಚಿಕೆ ಮತ್ತು ಬುಡಕಟ್ಟು ಉಪ–ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013 ಮತ್ತು ನಿಯಮಗಳು, 2017ರ 'ನಿರ್ದಿಷ್ಟ ಹಣಕಾಸು ವರ್ಷದಲ್ಲಿ ಹಂಚಿಕೆಯ ಮೊತ್ತ ಬಾಕಿಯುಳಿದಲ್ಲಿ ಅದನ್ನು ಮುಂದಿನ ವರ್ಷದ ಹಂಚಿಕೆಗೆ ಸೇರಿಸಬಹುದು, ಆದರೆ ಆ ವರ್ಷ ಮೀರಿದ ನಂತರ ಮುಂದುವರೆಸಲಾಗುವುದಿಲ್ಲ' ನಿಬಂಧನೆಗೆ ವಿರುದ್ಧವಾಗಿದೆ.

ಬಜೆಟ್ ಮಾಡ್ಯೂಲ್ ಅನ್ನು ಅಳವಡಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021).

3.1.2.4 ಸಿಸ್ಟಮ್ ಅಗತ್ಯತೆ ವಿಶೇಷಣಗಳು ಮತ್ತು ಬಳಕೆದಾರರ ಸ್ವೀಕಾರ ಪರೀಕ್ಷೆ

ಬಳಕೆದಾರರ ಸ್ವೀಕಾರ ಪರೀಕ್ಷೆಯು (ಯುಎಟಿ) ಬಳಕೆದಾರ ಗುಂಪುಗಳ ಎಲ್ಲಾ ಅವಶ್ಯಕತೆಗಳನ್ನು ಅಪ್ಲಿಕೇಶನ್ ಪೂರೈಸುತ್ತದೆಯೇ ಎಂಬುದನ್ನು ನಿರ್ಧರಿಸುತ್ತದೆ. ಕಾರ್ಯಾಚರಣಾ ಅಗತ್ಯತೆ ವಿಶೇಷಣಗಳು (ಎಫ್‌ಆರ್‌ಎಸ್) ಮತ್ತು ಸಿಸ್ಟಮ್ ಅಗತ್ಯತೆ ವಿಶೇಷಣಗಳು (ಎಸ್‌ಆರ್‌ಎಸ್) ದಾಖಲೆಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬಳಕೆದಾರರ ವ್ಯವಹಾರ ಅಗತ್ಯತೆಗಳನ್ನು ಪೂರೈಸುತ್ತದೆಯೇ ಎಂಬುದನ್ನು ಅರಿಯಲು ಸಾಫ್ಟ್‌ವೇರನ್ನು ದೃಢೀಕರಿಸುವುದು ಯುಎಟಿ ಮೂಲತತ್ವವಾಗಿದೆ. ಯುಎಟಿ ಎನ್ನುವುದು ಸಾಫ್ಟ್‌ವೇರ್ ಕಾರ್ಯಾರಂಭಕ್ಕೆ ಮೊದಲು ನಡೆಸಲಾಗುವ ಅಂತಿಮ ಪರೀಕ್ಷೆಯಾಗಿದೆ. ಅನುಷ್ಠಾನಕ್ಕಾಗಿ ವ್ಯವಸ್ಥೆಯ ಕಾರ್ಯಶಿಲ್ಪದ ವಿವರಗಳನ್ನು ಎಫ್‌ಆರ್‌ಎಸ್ ಸ್ಪಷ್ಟವಾಗಿ ವಿವರಿಸುತ್ತದೆ.

ಎಸ್‌ಆರ್‌ಎಸ್ ಅನ್ನು ಸರಿಯಾಗಿ ಸಿದ್ಧಪಡಿಸಲಾಗಿದೆ/ಪರಿಶೀಲಿಸಲಾಗಿದೆ ಮತ್ತು ಕ್ಷೀರಸಿರಿ ಅಪ್ಲಿಕೇಶನ್ ಅನ್ನು ಏಪ್ರಿಲ್ 2019ರಿಂದ ಕಾರ್ಯಾರಂಭಿಸುವ ಮೊದಲು ಅದು ಬಳಕೆದಾರರ ಅವಶ್ಯಕತೆಗಳನ್ನು ಪೂರೈಸಿದೆ ಎಂದು ಖಚಿತಪಡಿಸಿಕೊಳ್ಳಲು ಯುಎಟಿ ನಡೆಸಲಾಗಿದೆ ಎಂಬುದನ್ನು ಸೂಚಿಸಲು ಯಾವುದೇ ದಾಖಲೆಗಳಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಸಾಫ್ಟ್‌ವೇರ್‌ನಲ್ಲಿನ ದೋಷಗಳ ಮತ್ತು ಸಾಫ್ಟ್‌ವೇರ್ ನಡವಳಿಕೆಯಲ್ಲಿನ ನ್ಯೂನತೆಗಳು/ಅಸಂಗತತೆಗಳನ್ನು ಸಮಯೋಚಿತವಾಗಿ ಸರಿಪಡಿಸುವ ಸಾಧ್ಯತೆಯನ್ನು ಗಮನಿಸದೆ ಇರುವ ಅಪಾಯವನ್ನು ಹೊಂದಿದೆ.

ರಾಜ್ಯ ಸರ್ಕಾರವು ಕ್ಷೀರಸಿರಿಗೆ ಸಂಬಂಧಿಸಿದ ಎಸ್‌ಆರ್‌ಎಸ್, ಎಸ್‌ಡಿಡಿ ಮತ್ತು ಬಳಕೆದಾರರ ಕೈಪಿಡಿ ದಾಖಲೆಗಳನ್ನು 3 ಜನವರಿ 2022ರಂದು ಲೆಕ್ಕಪರಿಶೋಧನೆಗೆ ಒದಗಿಸಿತು. ಆ ದಾಖಲೆಗಳ ಪರಿಶೀಲನೆಯು, ಇವುಗಳನ್ನು ಕ್ಷೀರಸಿರಿ ಯೋಜನೆ ಕಾರ್ಯಾರಂಭಿಸಿದ ನಂತರ ಮತ್ತು ಲೆಕ್ಕಪರಿಶೋಧನೆಯು ಗಮನ ಸೆಳೆದ ನಂತರವಷ್ಟೇ ಸಿದ್ಧಪಡಿಸಲಾಗಿದೆ ಎಂಬುದನ್ನು ತೋರಿಸಿತು. ಈ ದಾಖಲೆಗಳನ್ನು ಸಿದ್ಧಪಡಿಸಲಾಗಿಲ್ಲ ಮತ್ತು ದಾಖಲಿಸಲಾಗಿಲ್ಲ ಎಂದು ಇಲಾಖೆಯು ಒಪ್ಪಿಕೊಂಡಿತು (ಸೆಪ್ಟೆಂಬರ್ 2019). ಅಲ್ಲದೆ, ಒದಗಿಸಿದ ದಾಖಲೆಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲಾಗಿಲ್ಲ ಮತ್ತು ಬಳಕೆದಾರರ ಸ್ವೀಕಾರ ಪರೀಕ್ಷೆಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಲಾಗಿಲ್ಲ.

3.1.2.5 ಬದಲಾವಣೆ ನಿರ್ವಹಣೆ

ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯಲ್ಲಿ ಮಾಡಲಾದ ಯಾವುದೇ ಅನುಮೋದಿತವಲ್ಲದ ಅಥವಾ ಆಕಸ್ಮಿಕ ಬದಲಾವಣೆಗಳು ಸಂಸ್ಥೆಗೆ ತೀವ್ರವಾದ ಅಪಾಯಗಳು ಮತ್ತು ಆರ್ಥಿಕ ದುಷ್ಪರಿಣಾಮಗಳನ್ನು ಉಂಟು ಮಾಡಬಹುದು. ಇಲಾಖೆಗಳು ಕಾರ್ಯಾಚರಣೆಯ ಪರಿಸರದಲ್ಲಿ ಬದಲಾವಣೆಗಳನ್ನು ಅಳವಡಿಸುವ ಮೊದಲು ಪ್ರಾಧಿಕಾರದ ಅನುಮೋದನೆಯೊಂದಿಗೆ ನಿರ್ಧಾರಿತ ಬದಲಾವಣೆ ನಿರ್ವಹಣಾ ಕಾರ್ಯವಿಧಾನವನ್ನು ಅನುಸರಿಸಬೇಕು. ಈ ಬದಲಾವಣೆಗಳನ್ನು ದಾಖಲಿತ ಮತ್ತು ಅನುಮೋದಿತ ಬದಲಾವಣೆ ನಿರ್ವಹಣಾ ಕಾರ್ಯವಿಧಾನಗಳಿಗೆ ಅನುಗುಣವಾಗಿ ದಾಖಲಿಸಬೇಕು, ಮೌಲ್ಯಮಾಪನ

ಮಾಡಬೇಕು, ಅಧಿಕೃತಗೊಳಿಸಬೇಕು, ಆದ್ಯತೆಗೊಳಿಸಬೇಕು, ಯೋಜಿಸಬೇಕು, ಪರೀಕ್ಷಿಸಬೇಕು, ಕಾರ್ಯಗತಗೊಳಿಸಬೇಕು, ದಾಖಲಿಸಬೇಕು ಮತ್ತು ಪರಿಶೀಲಿಸಬೇಕು. ಯೋಜಿತ ರೀತಿಯಲ್ಲಿ ವ್ಯಾಪಾರ ಕಾರ್ಯಾಚರಣೆಗಳನ್ನು ಬೆಂಬಲಿಸುವುದನ್ನು ಮುಂದುವರಿಸಲು ಇದು ವ್ಯವಸ್ಥೆಗಳಿಗೆ ಸಹಾಯ ಮಾಡುತ್ತದೆ ಮತ್ತು ವ್ಯವಸ್ಥೆಯಲ್ಲಿ ಪರಿಣಾಮ ಬೀರುವ ಬದಲಾವಣೆಗಳನ್ನು ಪತ್ತೆಹಚ್ಚಲು ಸಾಕಷ್ಟು ಲೆಕ್ಕಪರಿಶೀಲನೆಗಳು ಇರಬೇಕು.

ಒದಗಿಸಿದ ಮಾಹಿತಿ, ದತ್ತಾಂಶ ಮತ್ತು ದಾಖಲೆಗಳಿಂದ ಯಾವುದೇ ಬದಲಾವಣೆ ನಿರ್ವಹಣಾ ಕಾರ್ಯವಿಧಾನ ಇರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಂತಹ ಕಾರ್ಯವಿಧಾನದ ಅನುಪಸ್ಥಿತಿಯಲ್ಲಿ, ಸೂಕ್ತ ಅಧಿಕಾರ ಮತ್ತು ಅನುಮೋದನೆಯಿಲ್ಲದೆ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಮಾಡಬಹುದಾಗಿದೆ ಮತ್ತು ಅಸ್ತಿತ್ವದಲ್ಲಿರುವ ವ್ಯವಸ್ಥೆಯ ಸಮಗ್ರತೆಯ ಮೇಲೆ ಪರಿಣಾಮ ಬೀರುವ ನಿಗದಿತ ಷರತ್ತುಗಳು ಮತ್ತು ಷರತ್ತುಗಳಿಂದ ವಿಪಥಗೊಳ್ಳುವ ಅಪಾಯದಿಂದ ಕೂಡಿರುತ್ತದೆ.

ನಿದರ್ಶನ ಸಿ

ಆರಂಭದಲ್ಲಿದ್ದ 40,000 ಲೀಟರ್‌ಗಳಿಗೆ ಸಬ್ಸಿಡಿ ಅರ್ಹತೆಯ ಮಿತಿಯನ್ನು 60,000 ಲೀಟರ್‌ಗಳಿಗೆ ಮತ್ತು ತದನಂತರ 75,000 ಲೀಟರ್‌ಗಳಿಗೆ ಯಾವುದೇ ಬದಲಾವಣೆ ನಿರ್ವಹಣಾ ಕಾರ್ಯವಿಧಾನವನ್ನು ಅನುಸರಿಸದೆ ಬದಲಾಯಿಸಲಾಗಿದೆ. ಅಳವಡಿಸಿಕೊಂಡ ಬದಲಾವಣೆಗಳು ಸಕ್ಷಮ ಪ್ರಾಧಿಕಾರದಿಂದ ಸೂಕ್ತವಾಗಿ ಅಧಿಕೃತಗೊಂಡಿವೆಯೇ ಎಂಬುದನ್ನು ಲೆಕ್ಕಪರಿಶೋಧನೆ ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಆಧಾರ: ಕ್ಷೀರಸಿರಿ ಪೋರ್ಟಲ್ ದತ್ತಾಂಶ

ಬದಲಾವಣೆ ನಿರ್ವಹಣಾ ಕಾರ್ಯವಿಧಾನವನ್ನು ಜಾರಿಗೆ ತರಲು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021).

3.1.2.6 ಅಪಾಯ ನಿರ್ಧರಣೆಯನ್ನು ನಡೆಸಿಲ್ಲ

ಕ್ಷೀರಸಿರಿ ಅಪ್ಲಿಕೇಶನ್ ಕೂಡ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯಾಗಿರುವುದರಿಂದ, ಅದರ ಕಾರ್ಯಾಚರಣೆಯ ದಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಇಲಾಖೆಯು ಈ ಅಪ್ಲಿಕೇಶನ್‌ನ ಆವರ್ತಕ ಅಪಾಯದ ಮೌಲ್ಯಮಾಪನವನ್ನು ಕೈಗೊಳ್ಳುವುದು ಅಗತ್ಯವಾಗಿತ್ತು. ಅದನ್ನು ಮಾಡಲಾಗಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಆವರ್ತಕ ಅಪಾಯದ ನಿರ್ಧರಣೆಯನ್ನು ಕೈಗೊಳ್ಳಲು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021).

3.1.2.7 ಮೂರನೇ ವ್ಯಕ್ತಿಯಿಂದ ಭದ್ರತಾ ಲೆಕ್ಕಪರಿಶೋಧನೆ ನಡೆಸದಿರುವುದು

ರಾಜ್ಯ ಸರ್ಕಾರದ ಜಾಲತಾಣಗಳು ಕೂಡ ಅಳವಡಿಸಿಕೊಳ್ಳಬೇಕಾದ ಕೇಂದ್ರ ಸರ್ಕಾರದ ಜಾಲತಾಣಗಳ ಕೈಪಿಡಿಯು "ಪ್ರತಿ ಜಾಲತಾಣ/ಅಪ್ಲಿಕೇಶನ್ ಅನ್ನು ಕಾರ್ಯರೂಪಕ್ಕೆ ತರುವ ಮೊದಲು ಮತ್ತು ಹೊಸ ಮಾಡ್ಯೂಲ್‌ಗಳನ್ನು ಸೇರಿಸುವ ಮೊದಲು ನೋಂದಾಯಿತ ಸಂಸ್ಥೆಗಳಿಂದ ಭದ್ರತಾ ಪರಿಶೋಧನೆಗೆ ಒಳಗಾಗಬೇಕು" ಎಂದು ಷರತ್ತು ವಿಧಿಸುತ್ತದೆ. ಮೂರನೇ ವ್ಯಕ್ತಿಯಿಂದ ಕ್ಷೀರಸಿರಿ ಅಪ್ಲಿಕೇಶನ್‌ನ ಭದ್ರತಾ ಪರಿಶೋಧನೆಯು ಇದುವರೆಗೂ ನಡೆದಿಲ್ಲ. ತತ್ಪರಿಣಾಮವಾಗಿ, ಇಲಾಖೆಯು ಅಪಾಯಗಳು, ಯಾವುದಾದರೂ ಇದ್ದಲ್ಲಿ, ಗುರುತಿಸಲು ಮತ್ತು ಅಪ್ಲಿಕೇಶನ್‌ನಲ್ಲಿ ಅಂತಹ ಅಪಾಯಗಳ ಪ್ರಭಾವವನ್ನು ಮೌಲ್ಯಮಾಪನ ಮಾಡಲು ಸಾಧ್ಯವಾಗಲಿಲ್ಲ. ಆದುದರಿಂದ ಕ್ಷೀರಸಿರಿ ಅಪ್ಲಿಕೇಶನ್ ಮೇಲಿನ ಭದ್ರತಾ ನಿಯಂತ್ರಣಗಳ ದೃಢತೆಯ ಬಗ್ಗೆ ಲೆಕ್ಕಪರಿಶೋಧನೆಯು ವಿಶ್ವಾಸಾರ್ಹತೆ ಹೊಂದುವ ಸ್ಥಿತಿಯಲ್ಲಿಲ್ಲ.

ಕ್ಷೀರಸಿರಿ ಅಪ್ಲಿಕೇಶನ್‌ನ ಮೂರನೇ ವ್ಯಕ್ತಿಯ ಪರಿಶೋಧನೆಯನ್ನು ಕೈಗೊಳ್ಳಲು ಪರಿಗಣಿಸುವುದಾಗಿ ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021).

3.1.2.8 ಒಪ್ಪಂದದ ಅನುಪಸ್ಥಿತಿ

ಸಾಫ್ಟ್‌ವೇರ್ ಅಭಿವೃದ್ಧಿ ಯೋಜನೆಯು ಕೆಲಸದ ಸವಿವರ ವ್ಯಾಪ್ತಿ, ವಿತರಣೆಗಳು, ಸಮಯಾವಧಿಗಳು (ಅಭಿವೃದ್ಧಿ, ಪರೀಕ್ಷೆ, ಸ್ವೀಕಾರ, ಕಾರ್ಯಾರಂಭ, ನಿರ್ವಹಣೆ, ಸಹಕಾರ, ಇತ್ಯಾದಿಗಳಿಗೆ), ಅಂತಿಮ ಪರೀಕ್ಷೆ ಮತ್ತು ಸಮಾಪ್ತಿ/ಪ್ರಮಾಣೀಕರಣ, ಸೇವೆಗಳ ಪಟ್ಟಿ, ಯೋಜನೆ ಪರಿಶೀಲನೆ ಮತ್ತು ನಿರ್ವಹಣೆ, ವಿತರಣೆಗಳ ಅನುಮೋದನೆಗಾಗಿ ಪ್ರಕ್ರಿಯೆಗಳು, ಬದಲಾವಣೆ ನಿಯಂತ್ರಣ ಕಾರ್ಯವಿಧಾನಗಳು, ಆಡಳಿತ ವೇಳಾಪಟ್ಟಿ, ಕ್ರಿಯಾತ್ಮಕವಲ್ಲದ ಅಗತ್ಯತೆಗಳು, ಸೇವಾ ಮಟ್ಟಗಳು, ಆಂತರಿಕ ಸಾಮರ್ಥ್ಯ ನಿರ್ಮಾಣದ ರಚನೆ, ನಿರ್ಗಮನ ನಿರ್ವಹಣೆ ಇತ್ಯಾದಿಗಳನ್ನು ಒಳಗೊಂಡಿರಬೇಕು. ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಇಲಾಖೆ (ಕ್ಷೀರಸಿರಿ ದತ್ತಾಂಶ/ಸಾಫ್ಟ್‌ವೇರ್‌ನ ಬೌದ್ಧಿಕ ಆಸ್ತಿ ಹಕ್ಕುದಾರರು), ಕೆಎಮ್‌ಎಫ್ (ರಾಜ್ಯದ ಎಲ್ಲಾ ಹಾಲು ಒಕ್ಕೂಟಗಳು ಕಾರ್ಯನಿರ್ವಹಿಸುವ ಆಡಳಿತಾತ್ಮಕ ಒಕ್ಕೂಟ) ಮತ್ತು ರಾಷ್ಟ್ರೀಯ ಮಾಹಿತಿ ಕೇಂದ್ರ (ತಾಂತ್ರಿಕ ಪಾಲುದಾರ), ಇವುಗಳ ನಡುವೆ ಯಾವುದೇ ಪರಸ್ಪರ ತಿಳುವಳಿಕೆ ಪತ್ರ (ಎಮ್‌ಒಯು) ಅಸ್ತಿತ್ವದಲ್ಲಿರಲಿಲ್ಲ ಎಂಬುದು ಲೆಕ್ಕಪರಿಶೋಧನೆಗೆ ತಿಳಿದುಬಂದಿತು.

ಪ್ರತಿ ಜವಾಬ್ದಾರಸ್ಥನ ಪಾತ್ರಗಳು ಮತ್ತು ಜವಾಬ್ದಾರಿಗಳ ಸ್ಪಷ್ಟವಾದ ನಿರ್ಣಯದೊಂದಿಗೆ ಎಮ್‌ಒಯು ಇಲ್ಲದಿರುವುದು ಪಾತ್ರಗಳು ಮತ್ತು ಜವಾಬ್ದಾರಿಗಳ ಅಸಮರ್ಪಕ ತಿಳುವಳಿಕೆಯಿಂದ ಉಂಟಾಗುವ ಮಾಹಿತಿ ವ್ಯವಸ್ಥೆಯ ಸಾಫ್ಟ್‌ವೇರ್/ಜೀವನಚಕ್ರದಲ್ಲಿ ಅಸಮರ್ಪಕತೆಗಳಿಗೆ ಕಾರಣವಾಗಬಹುದು. ಇದರಿಂದ ವಿಫಲ ವಹಿವಾಟುಗಳು, ತಪ್ಪು ಜಮೆಗಳು ಮತ್ತು ಬಾಕಿ ಪಾವತಿಗಳ ಮೇಲೆ ಸೂಕ್ತ ಮತ್ತು ಸಮಯೋಚಿತ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ವಿಫಲತೆಯುಂಟಾಗುತ್ತದೆ, ಏಕೆಂದರೆ ಅಂತಹ ಪ್ರತಿಕ್ರಿಯೆಗಳನ್ನು ನಿರ್ವಹಿಸಲು ಅಥವಾ ಸರಿಪಡಿಸಲು ಇಲಾಖೆ ಅಥವಾ ಕೆಎಮ್‌ಎಫ್ ಅಡಿಯಲ್ಲಿ ಸ್ಥಾಪಿಸಲಾದ ಒಕ್ಕೂಟಗಳಿಂದ ಯಾವುದೇ ಒಪ್ಪಿಗೆಯ ಕಾರ್ಯವಿಧಾನ ಲಭ್ಯವಿರಲಿಲ್ಲ.

ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಇಲಾಖೆ, ಕೆಎಮ್‌ಎಫ್ ಮತ್ತು ರಾಷ್ಟ್ರೀಯ ಮಾಹಿತಿ ಕೇಂದ್ರ, ಇವುಗಳ ನಡುವೆ ಎಮ್‌ಒಯು ಸಿದ್ಧಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021).

3.2 ಪರೀಕ್ಷಾ–ತನಿಖೆ ನಡೆಸಿದ ಕೃಷಿ ಇಲಾಖೆಯ ಡಿಬಿಟಿ ಯೋಜನೆಗಳು

3.2.1 ರೈತಸಿರಿ ಯೋಜನೆ

ರಾಜ್ಯದ ಕೃಷಿ ಕ್ಷೇತ್ರವನ್ನು ಉನ್ನತೀಕರಿಸುವ ಉದ್ದೇಶದಿಂದ ಸಿರಿಧಾನ್ಯ ಬೆಳೆಯುವ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ ₹10,000 ಆರ್ಥಿಕ ನೆರವು ನೀಡಲು ರಾಜ್ಯ ಸರ್ಕಾರವು (2019–20) ರೈತಸಿರಿ ಯೋಜನೆಯನ್ನು[13] ಪ್ರಾರಂಭಿಸಿತು.

3.2.1.1 ಪಾವತಿಗಳನ್ನು ಡಿಬಿಟಿ ಮೂಲಕ ಮಾಡಲಾಗಿಲ್ಲ

ರೈತಸಿರಿ ಯೋಜನೆಯನ್ನು 10 ಡಿಸೆಂಬರ್ 2019ರಿಂದ ಜಾರಿಗೆ ಬರುವಂತೆ ಡಿಬಿಟಿ ಪೋರ್ಟಲ್‌ಗೆ ಸೇರ್ಪಡೆ ಮಾಡಲಾಯಿತು ಮತ್ತು ಸರ್ಕಾರದ ನಿರ್ದೇಶನಗಳ ಅನುಸಾರ ಎಲ್ಲಾ ಪಾವತಿಗಳನ್ನು ಕೋರ್ ಡಿಬಿಟಿ ಪೋರ್ಟಲ್ ಮೂಲಕ ರವಾನಿಸಬೇಕಿತ್ತು. 10 ಡಿಸೆಂಬರ್ 2019ರಿಂದ 31 ಮಾರ್ಚ್ 2020ರ ಅವಧಿಯಲ್ಲಿ 5,513 ಫಲಾನುಭವಿಗಳಿಗೆ ₹2.04 ಕೋಟಿ ಮೊತ್ತದ ನಗದನ್ನು ಪಾವತಿಸಲು ಕೆ2ವಿನ ಫಲಾನುಭವಿ ನಿರ್ವಹಣಾ ವ್ಯವಸ್ಥೆ (ಬಿಎಮ್‌ಎಸ್) ಮಾಡ್ಯೂಲ್ ಮೂಲಕ ನೇರವಾಗಿ

13 ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ. ಕೃಇ 45 ಕೃಯೋಕಾ 2019 ಬೆಂಗಳೂರು ದಿನಾಂಕ 17.7.2019

ಖಜಾನೆಗೆ ಕಳುಹಿಸಲಾಗಿತ್ತು ಮತ್ತು ಡಿಬಿಟಿ ಅಪ್ಲಿಕೇಶನ್ ಮೂಲಕ ಮಾಡಲಾಗಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

3.2.2 ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ – ಮುಂಚೂಣಿಯ ಪ್ರದರ್ಶನ (ಡಿಬಿಟಿ ಘಟಕ)

ಅಕ್ಕಿ, ಬೇಳೆಕಾಳುಗಳು, ದಪ್ಪವಾದ ಧಾನ್ಯಗಳು, ಪೌಷ್ಟಿಕ ಧಾನ್ಯಗಳು, ಹತ್ತಿ, ಕಬ್ಬು, ಟಿಆರ್‌ಎಫ್‌ಎ–ಬೇಳೆಕಾಳುಗಳು, ಟಿಆರ್‌ಎಫ್‌ಎ–ಎಣ್ಣೆ ಬೀಜಗಳು, ಎನ್‌ಎಫ್‌ಎಸ್‌ಎಮ್–ಎಣ್ಣೆ ಬೀಜಗಳಂತಹ ಕೆಲವು ಬೆಳೆಗಳ ವಾರ್ಷಿಕ ಉತ್ಪಾದನೆಯನ್ನು ಹೆಚ್ಚಿಸಲು ಅಕ್ಟೋಬರ್ 2007ರಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ ಎಂಬ ಕೇಂದ್ರ ಪ್ರಾಯೋಜಿತ ಯೋಜನೆಯನ್ನು[14] ಪ್ರಾರಂಭಿಸಲಾಯಿತು. ಫ್ರಂಟ್‌ಲೈನ್ ಡೆಮಾನ್‌ಸ್ಟ್ರೇಷನ್ (ಎಫ್‌ಎಲ್‌ಡಿ) ಎನ್‌ಎಫ್‌ಎಸ್‌ಎಮ್ ಅಡಿಯಲ್ಲಿನ ಒಂದು ಘಟಕವಾಗಿದ್ದು ರೈತರ ಹೊಲಗಳಲ್ಲಿನ ಅಭ್ಯಾಸಗಳ ಸುಧಾರಿತ ಪ್ಯಾಕೇಜ್ ಪ್ರದರ್ಶನವನ್ನು ಒಳಗೊಂಡಿರುತ್ತದೆ. ಪ್ರಾತ್ಯಕ್ಷಿಕೆಗಳನ್ನು ಕನಿಷ್ಠ 10 ಹೆಕ್ಟೇರ್‌ಗಳ ಕ್ಲಸ್ಟರ್ ವಿಧಾನದಲ್ಲಿ ನಡೆಸಬೇಕು ಮತ್ತು ವೈಯಕ್ತಿಕ ರೈತರ ಒಂದು ಪ್ರದರ್ಶಿಕೆಯು 0.4 ಹೆಕ್ಟೇರ್‌ಗಿಂತ ಕಡಿಮೆಯಿರಬಾರದು ಮತ್ತು ಒಂದು ಹೆಕ್ಟೇರ್‌ಗಿಂತ ಹೆಚ್ಚಿರಬಾರದು. ಪ್ರದರ್ಶಿಕೆಯ ಸಹಾಯಧನವನ್ನು ಪ್ರದೇಶದ ವಿಸ್ತಾರದ ಮೇಲೆ ನಿರ್ಧರಿಸಲಾಗುತ್ತದೆ. ಸಹಾಯಧನದ ದರವು ಒಂದು ಹೆಕ್ಟೇರ್‌ಗೆ ಕ್ರಮವಾಗಿ ಅಕ್ಕಿಗೆ ₹7500, ಗೋಧಿಗೆ ₹5000 ಮತ್ತು ದ್ವಿದಳಧಾನ್ಯಗಳಿಗೆ ₹5000 ಆಗಿತ್ತು.

3.2.2.1 ಆಯ್ದ ಫಲಾನುಭವಿಗಳಿಗೆ ಪಾವತಿಯಲ್ಲಿ ಕೊರತೆ

ಇಲಾಖೆಯು ₹57.78 ಕೋಟಿ ಮೊತ್ತದ ನಗದನ್ನು ಪಾವತಿಸಲು ಒಟ್ಟು 1,62,375 ಫಲಾನುಭವಿಗಳನ್ನು ಗುರುತಿಸಿತು, ಆದರೆ ₹51.89 ಕೋಟಿ ಮೊತ್ತವನ್ನು 1,46,865 ಫಲಾನುಭವಿಗಳಿಗೆ ಅಂತಿಮವಾಗಿ ಪಾವತಿ ಮಾಡಲಾಗಿತ್ತು. 10,775 ಫಲಾನುಭವಿಗಳಿಗೆ ಡಿಡಿಒಗಳು ಬಿಲ್‌ಗಳನ್ನು ತಯಾರಿಸದಿರುವುದನ್ನು ಮತ್ತು ಉಳಿದ 4,735 ಫಲಾನುಭವಿಗಳಿಗೆ ಸಂಬಂಧಿಸಿದಂತೆ ಪಾವತಿಯನ್ನು ತಾಂತ್ರಿಕ ದೋಷಗಳಿಂದ ತಿರಸ್ಕರಿಸಲಾಗಿತ್ತು ಎಂಬುದು ಲೆಕ್ಕಪರಿಶೋಧನೆಯು ಗಮನಿಸಿತು. ಇದರಿಂದ 15,510 ಫಲಾನುಭವಿಗಳು ₹5.74 ಕೋಟಿ ಅರ್ಹ ನಗದು ಪ್ರಯೋಜನದಿಂದ ವಂಚಿತರಾದರು.

ಲೆಕ್ಕಪರಿಶೋಧನಾ ಆವಿಷ್ಕಾರಗಳನ್ನು ರಾಜ್ಯ ಸರ್ಕಾರವು ಒಪ್ಪಿಕೊಂಡಿತು (ಡಿಸೆಂಬರ್ 2021) ಮತ್ತು ಸರ್ವರ್ ಸಮಸ್ಯೆಗಳಿಂದಾಗಿ ನಕಲಿ ಮಂಜೂರಾತಿ ಆದೇಶಗಳು ಸೃಷ್ಟಿಯಾಗಿದ್ದು ತಿರಸ್ಕರಣೆಗೆ ಕಾರಣವಾಯಿತು ಎಂದು ಅಧ್ಯಾರೋಪಿಸಿತು. ಫಲಾನುಭವಿಗಳು ಅಗತ್ಯ ದಾಖಲೆಗಳನ್ನು ನೀಡದ ಕಾರಣ ಡಿಡಿಒಗಳು ಬಿಲ್‌ಗಳನ್ನು ರಚಿಸಲು ಸಾಧ್ಯವಾಗಲಿಲ್ಲ ಎಂದು ಸಹ ಸರ್ಕಾರವು ಉತ್ತರಿಸಿತು. ಸಮರ್ಪಕ ಪ್ರಕ್ರಿಯೆ ನಿಯಂತ್ರಣಗಳ ಅನುಪಸ್ಥಿತಿಯನ್ನು ಉತ್ತರವು ತೋರಿಸುತ್ತದೆ.

3.2.2.2 ಪಾವತಿಗಳನ್ನು ಡಿಬಿಟಿ ಮೂಲಕ ಮಾಡಲಾಗಿಲ್ಲ

ಎನ್‌ಎಫ್‌ಎಸ್‌ಎಮ್ ಯೋಜನೆಯನ್ನು ಡಿಬಿಟಿ ಪೋರ್ಟಲ್‌ನಲ್ಲಿ 11 ಡಿಸೆಂಬರ್ 2019ರಿಂದ ಜಾರಿಗೆ ಬರುವಂತೆ ಸೇರ್ಪಡೆ ಮಾಡಲಾಯಿತು. 11 ಡಿಸೆಂಬರ್ 2019ರಿಂದ 31 ಮಾರ್ಚ್ 2020ರ ಅವಧಿಯಲ್ಲಿ 13,132 ಫಲಾನುಭವಿಗಳಿಗೆ ₹3.90 ಕೋಟಿ ಮೊತ್ತದ ನಗದು ಪ್ರಯೋಜನಗಳನ್ನು ಡಿಬಿಟಿ ಅಪ್ಲಿಕೇಶನ್ ಮೂಲಕ ರವಾನಿಸದೆಯೇ ನೇರವಾಗಿ ಕೆ2ವಿನ ಫಲಾನುಭವಿ ನಿರ್ವಹಣಾ ವ್ಯವಸ್ಥೆ (ಬಿಎಮ್‌ಎಸ್) ಮಾಡ್ಯೂಲ್ ಮೂಲಕ ಪಾವತಿಸಲು ಖಜಾನೆಗೆ ರವಾನಿಸಲಾಯಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

---

[14] ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ. ಎಹೆಚ್‌ಡಿ/466/ಎಎಮ್‌ಎಸ್ 2007 ಬೆಂಗಳೂರು ದಿನಾಂಕ 5.10.2007

3.2.2.3 ದತ್ತಾಂಶದಲ್ಲಿ ಅಸಮಂಜಸತೆಗಳು

ಅರ್ಹತಾ ಮಾನದಂಡಗಳನ್ನು ಪೂರೈಸಿರುವುದನ್ನು ಖಚಿತಪಡಿಸಿಕೊಳ್ಳಲು ಯಾದೃಚ್ಛಿಕವಾಗಿ ಆಯ್ಕೆಯಾದ 120 ಫಲಾನುಭವಿಗಳ ಮಾದರಿಯನ್ನು ಲೆಕ್ಕಪರಿಶೋಧನೆಯು ವಿಶ್ಲೇಷಿಸಿತು ಮತ್ತು ಅವುಗಳಲ್ಲಿ 17 ಪ್ರಕರಣಗಳಲ್ಲಿ, 2019–20ನೇ ವರ್ಷದ ಕೆಎಸ್ಆರ್ಎಸಿ ದತ್ತಾಂಶ ಮತ್ತು ಭೂಮಿ ದಾಖಲೆಗಳ ಪ್ರಕಾರ ಫಲಾನುಭವಿಗಳ ಜಮೀನಿನ ವಿವರಗಳ ನಡುವೆ ಹೊಂದಾಣಿಕೆಯಿಲ್ಲದಿರುವುದನ್ನು ಗಮನಿಸಿತು. ತತ್ಪರಿಣಾಮವಾಗಿ, ಯೋಜನೆಯಡಿಯಲ್ಲಿ ಮಾಡಿದ ಪಾವತಿಗಳ ನಿಖರತೆಯ ಬಗ್ಗೆ ಲೆಕ್ಕಪರಿಶೋಧನೆಯು ವಿಶ್ವಾಸಾರ್ಹತೆ ನೀಡಲು ಸಾಧ್ಯವಿಲ್ಲವಾಗಿದೆ.

ಇಲಾಖೆಯು ದಾಖಲೆಗಳನ್ನು ಪರಿಶೀಲಿಸಿದೆ ಮತ್ತು ನಿಯಮಗಳ ಅನುಸಾರ ಇರುವುದಾಗಿ ಕಂಡುಬಂದಿದೆ ಹಾಗೂ ವ್ಯತ್ಯಾಸವು ಜಾಲತಾಣ ಮಾಹಿತಿ ಹೊಂದಾಣಿಕೆಯಲ್ಲಿ ಕಂಡುಬಂದಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021). ಉತ್ತರಕ್ಕೆ ಲಗತ್ತಿಸಲಾದ ದಾಖಲೆಗಳನ್ನು ಲೆಕ್ಕಪರಿಶೋಧನೆಯು ಪರಿಶೀಲಿಸಿತು ಮತ್ತು 14 ದಾಖಲೆಗಳಲ್ಲಿ ಎಫ್ಐಡಿ/ಆಧಾರ್ ಮತ್ತು ಭೂಮಿ ದಾಖಲೆಗಳ (ಆರ್‌ಟಿಸಿ) ಪ್ರಕಾರ ಹೆಸರು ಅಥವಾ ಸರ್ವೆ ಸಂಖ್ಯೆಯಲ್ಲಿ ವ್ಯತ್ಯಾಸಗಳು ಇನ್ನೂ ಅಸ್ತಿತ್ವದಲ್ಲಿದ್ದುದನ್ನು ಗಮನಿಸಿತು.

3.2.3 ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ರಾಜ್ಯದ ಪಾಲು)

ಭಾರತ ಸರ್ಕಾರದ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ ಪ್ರಯೋಜನಗಳಿಗೆ ಅರ್ಹರಾಗಿರುವ ಎಲ್ಲಾ ಫಲಾನುಭವಿಗಳಿಗೆ ವಿವಿಧ ಕೃಷಿ ಉಪಕರಣಗಳನ್ನು ಖರೀದಿಸಲು ರಾಜ್ಯ ನಿಧಿಯ ಅಡಿಯಲ್ಲಿ ಹೆಚ್ಚುವರಿ ಆರ್ಥಿಕ ಪ್ರಯೋಜನವನ್ನು ವಿಸ್ತರಿಸಲು ಕರ್ನಾಟಕ ಸರ್ಕಾರವು[15] ಅನುಮತಿ ನೀಡಿತು (ಆಗಸ್ಟ್ 2019). ಇದು ಡಿಬಿಟಿ ಮೂಲಕ ರಾಜ್ಯದ ಅರ್ಹ ಫಲಾನುಭವಿಗಳಿಗೆ ತಲಾ ₹2,000ದಂತೆ ಎರಡು ಕಂತುಗಳಲ್ಲಿ ಪಾವತಿಸಬೇಕಾದ ಒಟ್ಟು ₹4,000 ಮೊತ್ತವನ್ನು ಒಳಗೊಂಡಿತ್ತು. ಫಲಾನುಭವಿಗಳು ರಾಜ್ಯದ FRUITS[16]–PM-KISAN ಪೋರ್ಟಲ್‌ನಲ್ಲಿ ಅಥವಾ ನೇರವಾಗಿ ಭಾರತ ಸರ್ಕಾರದ ಪಿಎಮ್–ಕಿಸಾನ್ ಜಾಲತಾಣದ ಮೂಲಕ ಯೋಜನೆಗೆ ನೋಂದಾಯಿಸಿಕೊಳ್ಳಬಹುದು.

3.2.3.1 ಸಾಕಷ್ಟಿಲ್ಲದ ವ್ಯಾಪ್ತಿ

ಭಾರತ ಸರ್ಕಾರದಿಂದ ಪಡೆದ ಮಾಹಿತಿಯ ಪ್ರಕಾರ 49,48,039 ಫಲಾನುಭವಿಗಳಿದ್ದರು. 2019–20ನೇ ಅವಧಿಯಲ್ಲಿ ರಾಜ್ಯ ಸರ್ಕಾರವು (ಆಧಾರ್ ಹೆಸರು ಹೊಂದಾಣಿಕೆಯಾಗದಿರುವ, ಎನ್‌ಪಿಸಿಐ ಜೋಡಣೆ ಮಾಡದ, ಇತ್ಯಾದಿ ಫಲಾನುಭವಿಗಳನ್ನು ಹೊರತುಪಡಿಸಿ) 45,36,550 ಫಲಾನುಭವಿಗಳಿಗೆ ಪಾವತಿಯನ್ನು ಪ್ರಕ್ರಿಯೆಗೊಳಿಸಿತು. ಈ 45,36,550 ಫಲಾನುಭವಿಗಳ ಪೈಕಿ 67,379 ಮತ್ತು 1,62,370 ಫಲಾನುಭವಿಗಳಿಗೆ ಕ್ರಮವಾಗಿ ಆಧಾರ್ ಹೆಸರು ಹೊಂದಾಣಿಕೆಯಾಗದಿರುವುದು ಮತ್ತು ಆಧಾರ್ ಮತ್ತು ಬ್ಯಾಂಕ್ ಖಾತೆಯನ್ನು ಜೋಡಣೆ ಮಾಡದ ಕಾರಣ ಪಾವತಿಗಳನ್ನು ಪ್ರಕ್ರಿಯೆಗೊಳಿಸಲು ಸಾಧ್ಯವಾಗಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅದೇ ರೀತಿ, 2020–21ರ ಅವಧಿಯಲ್ಲಿ, 78,288 ನಿರೀಕ್ಷಿತ ಫಲಾನುಭವಿಗಳಿಗೆ ಆಧಾರ್ ಹೆಸರು ಹೊಂದಾಣಿಕೆ ಆಗದಿರುವಿಕೆಗಾಗಿ ಮತ್ತು 1,51,912 ಫಲಾನುಭವಿಗಳಿಗೆ ಎನ್‌ಪಿಸಿಐ ಹೊಂದಾಣಿಕೆ ಸಮಸ್ಯೆಯ ಕಾರಣದಿಂದಾಗಿ ಪಾವತಿಗಳನ್ನು ಪ್ರಕ್ರಿಯೆಗೊಳಿಸಲು ಸಾಧ್ಯವಾಗಲಿಲ್ಲ.

---

15 ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ.ಎಡಿ/3/ಬಿಸಿಎಫ್/2019 ಬೆಂಗಳೂರು ದಿನಾಂಕ 13.08.2019

16 ರೈತರ ನೋಂದಣಿ ಮತ್ತು ಏಕೀಕೃತ ಫಲಾನುಭವಿ ಮಾಹಿತಿ ವ್ಯವಸ್ಥೆ

ಗಮನಕ್ಕೆ ಬಂದಿರುವ ಲೋಪದೋಷಗಳನ್ನು ಸರಿಪಡಿಸಲು ಕ್ರಮವನ್ನು ಕೈಗೊಳ್ಳುವಲ್ಲಿನ ವಿಳಂಬವು 2019-20 ಮತ್ತು 2020-21ರ ಅವಧಿಯಲ್ಲಿ ಅರ್ಹ ಫಲಾನುಭವಿಗಳು ₹91.99 ಕೋಟಿ[17] ನಗದು ಪ್ರಯೋಜನಗಳಿಂದ ವಂಚಿತರಾಗುವಲ್ಲಿ ಪರಿಣಮಿಸಿತು.

3.2.3.2 ಅನರ್ಹ ಫಲಾನುಭವಿಗಳಿಗೆ ಪ್ರಯೋಜನಗಳನ್ನು ನೀಡಿರುವುದು

ಯೋಜನೆಯ ಮಾರ್ಗಸೂಚಿಗಳ ಪ್ರಕಾರ, ಕೇಂದ್ರ ಮತ್ತು ರಾಜ್ಯ ನಿಧಿಗಳ ಅಡಿಯಲ್ಲಿ ಪ್ರಯೋಜನಗಳಿಗೆ ಅರ್ಹತೆಯ ಎಲ್ಲಾ ಷರತ್ತುಗಳನ್ನು ರೈತರು ಪೂರೈಸಿದ ನಂತರ ರಾಜ್ಯ ಸರ್ಕಾರವು ಫಲಾನುಭವಿಗಳನ್ನು ಗುರುತಿಸಬೇಕಿತ್ತು. ಕೆಲವು ಪ್ರಮುಖ ಷರತ್ತುಗಳೆಂದರೆ (i) ರೈತರು ಹಿಂದಿನ ವರ್ಷದಲ್ಲಿ ತೆರಿಗೆ ಪಾವತಿದಾರರಾಗಿರಬಾರದು, (ii) ರೈತರು ಅಥವಾ ಅವರ ಕುಟುಂಬದ ಸದಸ್ಯರು ಸರ್ಕಾರಿ ಉದ್ಯೋಗಿಯಾಗಿರಬಾರದು ಮತ್ತು (iii) ರೈತ ಅಥವಾ ಅವನ ಕುಟುಂಬದ ಸದಸ್ಯರು ತಿಂಗಳಿಗೆ ₹10,000ಕ್ಕಿಂತಲೂ ಹೆಚ್ಚು ಪಿಂಚಣಿ ಪಡೆಯುತ್ತಿರಬಾರದು.

ಭಾರತ ಸರ್ಕಾರವು ನಿಗದಿಪಡಿಸಿದ ಎಲ್ಲಾ ಷರತ್ತುಗಳನ್ನು (ಭೂಮಿ ಯೋಜನೆಯ ಭೂ ದತ್ತಾಂಶ ದೃಢೀಕರಣದ ಪರಿಶೀಲನೆ ಹೊರತುಪಡಿಸಿ) ಇಲಾಖೆಯು ಪಟ್ಟಿಯನ್ನು ರವಾನಿಸುವ ಮೊದಲು ಅಥವಾ ರಾಜ್ಯ ನಿಧಿಗಳ ಅಡಿಯಲ್ಲಿ ಪ್ರಯೋಜನಗಳನ್ನು ವಿಸ್ತರಿಸುವ ಮೊದಲು ದೃಢೀಕರಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಭಾರತ ಸರ್ಕಾರವು, ಆರಂಭಿಕ ಪಾವತಿಗಳನ್ನು ಬಿಡುಗಡೆ ಮಾಡಿದ ನಂತರ, ತೆರಿಗೆ ಪಾವತಿದಾರರ ದತ್ತಸಂಚಯ ಮತ್ತು ಇತರ ಅರ್ಹತಾ ಮಾನದಂಡಗಳೊಂದಿಗೆ ಫಲಾನುಭವಿಗಳ ದತ್ತಾಂಶವನ್ನು ಹೊಂದಾಣಿಕೆ ಮಾಡಿ, ಯೋಜನೆಯ ಅಡಿಯಲ್ಲಿ 1,99,180 ಫಲಾನುಭವಿಗಳನ್ನು ಅನರ್ಹರೆಂದು ಗುರುತಿಸಿತು. ಅಂತಹ ಅನರ್ಹ ಫಲಾನುಭವಿಗಳಿಂದ ₹122.95 ಕೋಟಿ ಕೇಂದ್ರ ಪಾಲಿನ ಮೊತ್ತವನ್ನು ವಸೂಲಿ ಮಾಡಲು ಮಾರ್ಗಸೂಚಿಗಳನ್ನು ಹೊರಡಿಸಿತು. 21 ಅಕ್ಟೋಬರ್ 2021ರಂತೆ, ₹81.94 ಲಕ್ಷವನ್ನು ವಸೂಲಿ ಮಾಡಿ ಭಾರತ ಸರ್ಕಾರಕ್ಕೆ ಮರುಪಾವತಿ ಮಾಡಲಾಗಿದೆ.

ಈ ಪೈಕಿ 89,500 ಅನರ್ಹ ಫಲಾನುಭವಿಗಳಿಗೆ ರಾಜ್ಯ ನಿಧಿ ಅಡಿಯಲ್ಲಿ ಇಲಾಖೆಯು ₹34.05 ಕೋಟಿ ಪಾವತಿಸಿದೆ ಮತ್ತು ಅಂತಹ ಫಲಾನುಭವಿಗಳಿಂದ ಮೊತ್ತವನ್ನು ವಸೂಲಿ ಮಾಡಲು ಕ್ರಮವನ್ನು ಇನ್ನೂ ಪ್ರಾರಂಭಿಸಲಾಗಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ವಸೂಲಾತಿಯು ಪ್ರಗತಿಯಲ್ಲಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021).

---

[17] (67,379+1,62,370 = 2,29,749*₹2,000) = ₹45.95 ಕೋಟಿ + (78,288+1,51,912 = 2,30,200*₹2,000) = ₹46.04 ಕೋಟಿ

ಅಧ್ಯಾಯ–4
ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

ಅಧ್ಯಾಯ–4
ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

ಯೋಜನೆಯಡಿಯಲ್ಲಿ ಪರಿಣಾಮಕಾರಿತ್ವ, ದಕ್ಷತೆ ಮತ್ತು ದತ್ತಾಂಶ ಸಮಗ್ರತೆಯ ಉದ್ದೇಶಗಳನ್ನು ಎಷ್ಟರ ಮಟ್ಟಿಗೆ ಸಾಧಿಸಲಾಗುತ್ತದೆ ಎಂಬುದರ ಮೇಲೆ ಮೇಲ್ವಿಚಾರಣೆಯ ಗುಣಮಟ್ಟವು ಪ್ರಮುಖ ಪರಿಣಾಮವನ್ನು ಬೀರುತ್ತದೆ.

4.1 ಡಿಬಿಟಿ ಆಡಳಿತ ಚೌಕಟ್ಟು

ಅಧ್ಯಾಯ–1ರಲ್ಲಿ ಈಗಾಗಲೇ ಚರ್ಚಿಸಿದಂತೆ, ರಾಜ್ಯ ಡಿಬಿಟಿ ಕೋಶವು ಡಿಬಿಟಿಯನ್ನು ಅನುಷ್ಠಾನಗೊಳಿಸುವ ಮತ್ತು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಹೊಂದಿದೆ. ಇದು ಸಲಹಾ ಮಂಡಳಿ ಮತ್ತು ಸಂಚಾಲನ ಸಮಿತಿಯನ್ನು ಒಳಗೊಂಡಿರಬೇಕು ಮತ್ತು ಡಿಬಿಟಿಗೆ ಸಂಬಂಧಿಸಿದ ಎಲ್ಲಾ ಪ್ರಯತ್ನಗಳನ್ನು ಮಂಡಳಿಯಲ್ಲಿ ತರಲು ಮತ್ತು ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಸಮನ್ವಯಗೊಳಿಸಬೇಕು.

4.1.1 ಸಲಹಾ ಸಮಿತಿ ಸಭೆಗಳನ್ನು ನಡೆಸಲಾಗಿಲ್ಲ

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಲಹಾ ಮಂಡಳಿಯನ್ನು ರಚಿಸಲಾಯಿತು (2016). ಸಲಹಾ ಮಂಡಳಿಯು 2016ರಿಂದ ಇಲ್ಲಿಯವರೆಗೆ ಯಾವುದೇ ಸಭೆಗಳನ್ನು ನಡೆಸಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ರಾಜ್ಯದಲ್ಲಿ ಡಿಬಿಟಿಯ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

4.1.2 ಸೇರ್ಪಡೆ ಮಾಡಿದ ಯೋಜನೆಗಳ ಮೇಲ್ವಿಚಾರಣೆಯಲ್ಲಿ ಅಸಮರ್ಪಕತೆಗಳು

ರಾಜ್ಯದಲ್ಲಿ ವಿತರಣಾ ಕಾರ್ಯವಿಧಾನವಾಗಿ ಡಿಬಿಟಿಯನ್ನು ಪರಿಚಯಿಸುವುದರೊಂದಿಗೆ, ಡಿಬಿಟಿ ಹೊರತುಪಡಿಸಿ ಬೇರೆ ವಿಧಾನದ ಮೂಲಕ ನಗದು ವರ್ಗಾವಣೆಯನ್ನು ಸರ್ಕಾರವು ನಿಷೇಧಿಸಿತು. ಅಂತೆಯೇ, ಡಿಬಿಟಿಗೆ ಒಳಪಟ್ಟಿರುವ ಯೋಜನೆಗಳಡಿಯಲ್ಲಿನ ನಗದು ಪ್ರಯೋಜನಗಳನ್ನು ರಾಜ್ಯದ ಕೋರ್ ಡಿಬಿಟಿ ಪೋರ್ಟಲ್ ಮೂಲಕವೇ ರವಾನಿಸಬೇಕಿತ್ತು. ಬಳಕೆದಾರ ವಿಭಾಗಗಳು ಕೋರ್ ಡಿಬಿಟಿ ಮೂಲಕ ಮಾತ್ರವೇ ವಹಿವಾಟುಗಳನ್ನು ನಡೆಸುತ್ತಿದ್ದಾರೆ ಎಂಬುದನ್ನು ಮೇಲ್ವಿಚಾರಣೆ ಮಾಡಲು ಯಾವುದೇ ಕಾರ್ಯವಿಧಾನವಿಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪೋರ್ಟಲ್‌ನಲ್ಲಿ ಸೇರ್ಪಡೆ ಮಾಡಿದ ನಂತರವೂ ಕೋರ್ ಡಿಬಿಟಿಯ ಹೊರಗೆ ವಹಿವಾಟು ನಡೆಸಲಾದ ನಿದರ್ಶನಗಳನ್ನು ಕಂಡಿಕೆಗಳು–3.2.1.1 ಮತ್ತು 3.2.2.1ರಲ್ಲಿ ನೀಡಲಾಗಿದೆ. ಕೋರ್ ಡಿಬಿಟಿಯ ಹೊರಗೆ ವಹಿವಾಟುಗಳನ್ನು ಮಾಡುವುದು ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸಿದಂತಾಗುತ್ತದೆ ಮತ್ತು ಕಡ್ಡಾಯವಾದ ಎನ್‌ಪಿಸಿಐ ಮತ್ತು ದ್ವಿಪಾತಿ ತಡೆ ಪರಿಶೀಲನೆಗಳನ್ನು ಕಡೆಗಣಿಸಲು ಕಾರಣವಾಗುತ್ತದೆ ಹಾಗೂ ಅನರ್ಹ ಫಲಾನುಭವಿಗಳು ಪ್ರಯೋಜನಗಳನ್ನು ಪಡೆಯುವ ಅಪಾಯದಿಂದ ಕೂಡಿದೆ. ಅಂತಹ ಪ್ರಕರಣಗಳನ್ನು ಪರಿಶೀಲಿಸಲು ಯಾವುದೇ ಕಾರ್ಯವಿಧಾನವು ಅಸ್ತಿತ್ವದಲ್ಲಿಲ್ಲ ಎಂದು ಡಿಬಿಟಿ ಕೋಶವು ಒಪ್ಪಿಕೊಂಡಿತು.

ಡಿಬಿಟಿ ಪೋರ್ಟಲ್ ಫಲಾನುಭವಿಗೆ ನಗದು ಪಾವತಿಗಳನ್ನು ಮಾತ್ರ ನಿರ್ವಹಿಸುತ್ತದೆ ಮತ್ತು ಇತರ ಪಾವತಿಗಳನ್ನು ಡಿಡಿಓಗಳು ನೇರವಾಗಿ ಕೆ2ನಲ್ಲಿ ಮಾಡಬೇಕಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021). ಹಾಗಾಗಿ, ಅಂತಹ ಚಟುವಟಿಕೆಗಳನ್ನು ವಿದ್ಯುನ್ಮಾನವಾಗಿ ನಿಯಂತ್ರಿಸುವುದು

ತುಂಬಾ ಕಷ್ಟಸಾಧ್ಯವಾದರೂ ಅಂತಹ ಲೋಪಗಳಿಗೆ ಡಿಡಿಒಗಳನ್ನು ಹೊಣೆಗಾರರನ್ನಾಗಿ ಮಾಡಿ ಆರ್ಥಿಕ ಇಲಾಖೆ ನಿರ್ದೇಶನಗಳನ್ನು ಹೊರಡಿಸಿದೆ ಎಂದೂ ಸಹ ಸರ್ಕಾರವು ತಿಳಿಸಿತು.

4.1.3 ಡಿಬಿಟಿ ಕೋಶದಿಂದ ಅಸಮರ್ಪಕ ಮೇಲ್ವಿಚಾರಣೆ

ಯೋಜನೆಯ ಅನುಷ್ಠಾನದ ಪರಿಣಾಮಕಾರಿತ್ವವನ್ನು, ಯೋಜನೆಗೆ ನಿಗದಿಪಡಿಸಿದ ಗುರಿಯೊಂದಿಗೆ ಹೋಲಿಸಿ, ಫಲಿತಾಂಶಗಳ ಪರಿಭಾಷೆಯಲ್ಲಿ ಅಳೆಯಲಾಗುತ್ತದೆ. ಡಿಬಿಟಿ ಕೋಶದ ಕಾರ್ಯಾಚರಣೆ ಗುಂಪು ಡಿಬಿಟಿ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು/ಇಲಾಖೆಗಳನ್ನು ಗುರುತಿಸಲು, ಯೋಜನೆಗಳ ಸೇರ್ಪಡೆಗೆ ಗುರಿಗಳು ಮತ್ತು ಕಾಲಮಿತಿಯನ್ನು ನಿರ್ಧರಿಸಲು ಮತ್ತು ಪ್ರತಿ ಇಲಾಖೆಯ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವ ಅಗತ್ಯವಿತ್ತು. ಸೇರ್ಪಡೆಗಾಗಿ 239 ಯೋಜನೆಗಳನ್ನು ಗುರುತಿಸಲಾಗಿದ್ದರೂ, ಕೋರ್ ಡಿಬಿಟಿ ಪೋರ್ಟಲ್‌ನಲ್ಲಿ ಅವುಗಳನ್ನು ಸೇರ್ಪಡೆ ಮಾಡಲು ಡಿಬಿಟಿ ಕೋಶದಿಂದ ಯಾವುದೇ ಗುರಿಗಳು ಮತ್ತು ಕಾಲಮಿತಿಯನ್ನು ಸೂಚಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ಈ ನಿಟ್ಟಿನಲ್ಲಿ ಬಳಕೆದಾರ ಇಲಾಖೆಯ ಪ್ರಗತಿಯ ಮೇಲೆ ಯಾವುದೇ ಮೇಲ್ವಿಚಾರಣೆ ಇರಲಿಲ್ಲ.

ಯೋಜನೆಗಳನ್ನು ಸೇರ್ಪಡೆ ಮಾಡಲು ಸರ್ಕಾರವು ಗುರಿಗಳನ್ನು ನಿಗದಿಪಡಿಸಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021). ಸರ್ಕಾರವು ನಿಗದಿಪಡಿಸಿದ ಗಡುವಿನಿಂದ ಸುಮಾರು ಎರಡು ವರ್ಷಗಳ ಕಾಲ ಗತಿಸಿದ್ದರೂ, ಏಪ್ರಿಲ್ 2021ರಲ್ಲಿದ್ದಂತೆ, ಗುರುತಿಸಲಾದ ಯೋಜನೆಗಳಲ್ಲಿ ಕೇವಲ ಶೇಕಡಾ 35ರಷ್ಟನ್ನು ಮಾತ್ರ ಸೇರ್ಪಡೆ ಮಾಡಲಾಗಿತ್ತು ಎಂಬುದು ವಾಸ್ತವಾಂಶವಾಗಿದೆ. ಇದು ಡಿಬಿಟಿ ಕೋಶದ ಮೇಲ್ವಿಚಾರಣೆಯ ಅನುಪಸ್ಥಿತಿಯನ್ನು ಸೂಚಿಸುತ್ತದೆ.

4.1.4 ಫಲಾನುಭವಿ ಕುಂದುಕೊರತೆ ಪರಿಹಾರ ವ್ಯವಸ್ಥೆ

ಡಿಬಿಟಿ ಭಾರತ್ ಮಾರ್ಗಸೂಚಿಗಳ ಪ್ರಕಾರ, ಫಲಾನುಭವಿಗಳ ಪ್ರತಿಕ್ರಿಯೆ, ಡಿಬಿಟಿಯೊಂದಿಗಿನ ಅವರ ಅನುಭವ ಮತ್ತು ಅವರ ಕುಂದುಕೊರತೆಗಳನ್ನು ವ್ಯವಸ್ಥೆಯಲ್ಲಿ ಅಳವಡಿಸಲು ಸಾಧ್ಯವಾಗುವಂತಹ ಸಧೃಡ ಕುಂದುಕೊರತೆ ಪರಿಹಾರ ವ್ಯವಸ್ಥೆಯ ಅವಶ್ಯಕತೆಯಿದೆ. ನಿರಂತರ ಕಲಿಕೆ ಮತ್ತು ಸುಧಾರಣೆಯ ಪ್ರಕ್ರಿಯೆಯ ಮೂಲಕ ಈ ರೀತಿಯ ದ್ವಿಮುಖ ಪ್ರತಿಕ್ರಿಯೆ ವಿಧಾನ ಡಿಬಿಟಿ ಚೌಕಟ್ಟನ್ನು ಬಲಪಡಿಸುತ್ತದೆ. ಇದಲ್ಲದೆ, ಡಿಬಿಟಿ ಭಾರತ್‌ನ ಸೂಚಿತ ಕಾರ್ಯಾಚರಣೆ ವಿಧಾನವು ಡಿಬಿಟಿ ಕೋಶ ಫಲಾನುಭವಿಗಳ ದೂರುಗಳು ಮತ್ತು ಕುಂದುಕೊರತೆಗಳನ್ನು ನ್ಯಾಯಯುತ ಮತ್ತು ಸಮಯೋಚಿತವಾಗಿ ವ್ಯವಹರಿಸಲು ಪ್ರತ್ಯೇಕ ವ್ಯವಸ್ಥೆಯನ್ನು ರಚಿಸಬೇಕು ಎಂದು ನಿಗದಿಪಡಿಸುತ್ತದೆ.

ಫಲಾನುಭವಿಗಳಿಗೆ ಅವರ ಕುಂದುಕೊರತೆಗಳ ಪರಿಹಾರಕ್ಕೆ ಸಹಾಯ ಮಾಡಲು ಕೇಂದ್ರೀಕೃತ ಸಾರ್ವಜನಿಕ ಕುಂದುಕೊರತೆ ನಿರ್ವಹಣಾ ಕಾರ್ಯವಿಧಾನವನ್ನು ಸ್ಥಾಪಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪ್ರಸ್ತುತ ಫಲಾನುಭವಿಗಳು ಡಿಬಿಟಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ನಿರ್ದಿಷ್ಟ ಇಲಾಖೆಯಲ್ಲಿ ತಮ್ಮ ಕುಂದುಕೊರತೆಗಳನ್ನು ವೈಯಕ್ತಿಕವಾಗಿ ತಿಳಿಸಬೇಕಿದೆ. ಇದಲ್ಲದೆ, ಒಬ್ಬ ಫಲಾನುಭವಿಯು ಒಂದಕ್ಕಿಂತ ಹೆಚ್ಚು ಪ್ರಯೋಜನಗಳ ಸ್ವೀಕೃತಿಗೆ ಅರ್ಹರಾಗಿರಬಹುದಾದರೂ ವಾಸ್ತವವಾಗಿ ಪ್ರಯೋಜನಗಳನ್ನು ಪಡೆಯುತ್ತಿರುವುದಿಲ್ಲ ಮತ್ತು ಅದಕ್ಕೆ ಅವನು/ಅವಳು ಅರ್ಹವಾಗಿರುವ ಯೋಜನೆಗಳಾದ್ಯಂತ ಕಾರಣವು ಒಂದೇ ಆಗಿರಬಹುದು. ಒಂದೇ ಕಾರಣಕ್ಕೆ ಫಲಾನುಭವಿಗಳು ತಮ್ಮ ದೂರುಗಳನ್ನು ಎಲ್ಲ ಇಲಾಖೆಗಳಲ್ಲಿಯೂ ದಾಖಲಿಸಬೇಕಾಗಿರುವುದರಿಂದ ಕುಂದುಕೊರತೆ ನಿವಾರಣೆಗೆ ತೊಡಕಾಗಿದೆ. ನಗದು ವರ್ಗಾವಣೆ ಪ್ರಕ್ರಿಯೆಗಳ ವಿವಿಧ ಹಂತಗಳಲ್ಲಿನ ಸಮಸ್ಯೆಗಳನ್ನು ಪರಿಗಣಿಸಿ, ಕೇಂದ್ರೀಕೃತ ಫಲಾನುಭವಿಗಳ ಕುಂದುಕೊರತೆ ಕಾರ್ಯವಿಧಾನದಿಂದ ಫಲಾನುಭವಿಗಳು ತಮ್ಮ ಕುಂದುಕೊರತೆಗಳಿಗೆ ಪರಿಹಾರವನ್ನು ಪಡೆಯುವ ವ್ಯವಸ್ಥೆಯನ್ನು ಸ್ಥಾಪಿಸುವುದು ಅತ್ಯಗತ್ಯವಾಗಿದೆ. ಈ ಹಿಂದೆ ಚರ್ಚಿಸಿದಂತೆ, ಹೆಚ್ಚಿನ

ಸಂಖ್ಯೆಯ ವಿಫಲ/ಬಾಕಿ ಉಳಿದಿರುವ/ತಿರಸ್ಕೃತ ವಹಿವಾಟುಗಳು ಮತ್ತು ತಪ್ಪಾದ ಖಾತೆಗಳಿಗೆ ಜಮೆಯಾಗುವ ದೃಷ್ಟಿಯಿಂದ ಇದು ಮಹತ್ವವನ್ನು ಪಡೆದುಕೊಳ್ಳುತ್ತದೆ.

ಮೊಬೈಲ್ ಅಪ್ಲಿಕೇಶನ್ ಮೂಲಕ ಪಾವತಿಗಳ ವಾಸ್ತವ ಸ್ಥಿತಿಯನ್ನು ಫಲಾನುಭವಿಗಳಿಗೆ ತಿಳಿಸುವ ಸೌಲಭ್ಯವು ಈಗಾಗಲೇ ಲಭ್ಯವಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಡಿಸೆಂಬರ್ 2021). ಫಲಾನುಭವಿಗಳಿಗೆ ಪಾವತಿ ಸ್ಥಿತಿಯನ್ನು ತಿಳಿಯಲು ಮೊಬೈಲ್ ಅಪ್ಲಿಕೇಶನ್ ಸೂಕ್ತವಾಗಿದ್ದರೂ, ದೂರುಗಳು/ಕುಂದುಕೊರತೆಗಳನ್ನು ನೋಂದಾಯಿಸಲು ಯಾವುದೇ ಕಾರ್ಯವಿಧಾನವಿರಲಿಲ್ಲ.

4.2 ಡಿಬಿಟಿಯ ಮೌಲ್ಯಮಾಪನ

ಸರ್ಕಾರದಿಂದ ಜನರಿಗೆ (ಜಿ2ಪಿ) ಎಂಬ ಸರಳ ಮತ್ತು ಬಳಕೆದಾರ ಸ್ನೇಹಿ ಅಂತರಸಂಪರ್ಕ ಸಾಧನವನ್ನು ಒದಗಿಸುವ ಮತ್ತು ಅರ್ಹ ವ್ಯಕ್ತಿಗಳು ಮತ್ತು ಕುಟುಂಬಗಳಿಗೆ ನೇರವಾಗಿ ನಗದನ್ನು ನ್ಯಾಯಯುತ, ಪಾರದರ್ಶಕ, ದಕ್ಷ ಮತ್ತು ವಿಶ್ವಾಸಾರ್ಹ ರೀತಿಯಲ್ಲಿ ತಲುಪಿಸಲು ಡಿಬಿಟಿ ಯೋಜನೆಯನ್ನು ಪ್ರಾರಂಭಿಸಲಾಯಿತು. ಉದ್ದೇಶಿತ ಫಲಾನುಭವಿಗಳ ನಿಖರವಾದ ಗುರುತಿಸುವಿಕೆ ಮತ್ತು ಗುರಿ, ಮಾಹಿತಿ ಮತ್ತು ನಿಧಿಗಳ ಸರಳ ಹರಿವಿಗಾಗಿ ಸರ್ಕಾರಿ ಪ್ರಕ್ರಿಯೆಗಳ ಪುನರ್‌ವ್ಯವಸ್ಥಾಕ್ರಿಯೆ ಕೈಗೊಳ್ಳುವುದು, ಆರ್ಥಿಕ ಉತ್ತೇಜನ ಹಾಗೂ ಸರ್ಕಾರ ಮತ್ತು ಫಲಾನುಭವಿಗಳ ನಡುವೆ ಕೈಗೆಟಕುವಂತಹ, ಮಾಪನ ಮಾಡಬಹುದಾದಂತಹ ಮತ್ತು ವಿಶ್ವಾಸಾರ್ಹ ಬಳಕೆದಾರ ಸ್ನೇಹಿ ಅಂತರ್‌ಸಂಪರ್ಕಗಳನ್ನು ಒದಗಿಸಿ ಡಿಜಿಟಲ್ ವ್ಯವಸ್ಥೆಯ ಸ್ಥಾಪನೆಯ ಮೂಲಕ ಎಲ್ಲಾ ಅರ್ಹ ಫಲಾನುಭವಿಗಳಿಗೆ ಪ್ರಯೋಜನಗಳನ್ನು ತಲುಪಿಸುವ ಪ್ರಕ್ರಿಯೆಯಲ್ಲಿ ಗಮನಾರ್ಹ ಬದಲಾವಣೆಯನ್ನು ತರಲು ಇದು ಉದ್ದೇಶಿಸಿತ್ತು.

